ಸಂಪುಟ 15
ಸಂಚಿಕೆ 21

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

30 ಮೇ 1992
ರೂ. 2.00

ಯಲಹಂಕ ಉಪಚುನಾವಣೆಯ ಫಲಿತಾಂಶ

ಜಾತ್ಯಾತೀತ ಶಕ್ತಿಗಳಿಗೆ ಎಚ್ಚರಿಕೆಯ ಕರೆಗಂಟೆ

ಕರೆಗಂಟೆ ಬಾರಿಸಿದೆ, ಬಾರಿಸಿದೆ ಮತ್ತೊಮ್ಮೆ ಬಲವಾಗಿ ಕಿವುಡರಿಗೂ ಕೇಳುವಂತೆ. ಕೋಮುವಾದವನ್ನು ಅದರ ಬಲವನ್ನು ನಿರ್ಲಕ್ಷ್ಯಮಾಡಿದ, ತಪ್ಪಂದಾಜು ಮಾಡಿದ ಎಲ್ಲಾ ಪಕ್ಷಗಳು, ಶಕ್ತಿಗಳೂ ಈ ಕರೆಗೆ ಕಿವಿಗೊಡಬೇಕಾಗಿದೆ. ದೇಶದ ಇಂದಿನ ಸ್ವರೂಪವನ್ನು, ಇಂದು ಇರುವ ಒಳ್ಳೆಯದೆಲ್ಲವನ್ನೂ ಉಳಿಸಿಕೊಳ್ಳಬೇಕೆನ್ನುವ ಎಲ್ಲಾ ಶಕ್ತಿಗಳೂ ಇದರಿಂದ ಪಾಠ ಕಲಿಯಬೇಕಾಗಿದೆ.

ಕಾಂಗ್ರೆ ಪಡೆದ 61,357 ಮತಗಳ, ಸರಿಸಮನಾಗಿ ಬಿಜೆಪಿ ಪಡೆದ 60,845 ಮತಗಳು (512 ಮತಗಳಷ್ಟೆ ವ್ಯತ್ಯಾಸ ಇನ್ನೂ ಘೋಷಿತವಾಗದಿರುವ ಫಲಿತಾಂಶದಲ್ಲಿ ಇವಕ್ಕೂ ಜನತಾದಳ ಪಡೆದ 25,439 ಮತಗಳಿಗೂ ಇರುವ ವ್ಯತ್ಯಾಸದಿಂದ ಜನತಾದಳ ಪಕ್ಷ ಕಲಿಯಬೇಕಾದ ಪಾಠ ಬಹಳವಾಗಿದೆ. 1990 ರ ಕೋಮು ಗಲಭೆಗಳ ನಂತರ, 1991 ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಶೇ. 27 ರಷ್ಟು ಪಡೆದ ನಂತರ, ಅಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಯಲಹಂಕ ವಿಧಾನಸಭಾ ಭಾಗದಲ್ಲಿ ಬಿಜೆಪಿಗೆ ಕಾಂಗ್ರೆ, ಜನತಾದಳಗಳಿಗಿಂತಲೂ ಹೆಚ್ಚು ಮತಗಳು ದೊರೆತನಂತರವೂ ಜನತಾದಳ ಎಚ್ಚರಗೊಳ್ಳಲಿಲ್ಲ, ಕೋಮುವಾದದ ಅಪಾಯವನ್ನು ಅರಿತುಕೊಳ್ಳಲಿಲ್ಲ. ತನ್ನ ರಾಜಕೀಯದ ಮೂಲಕ್ಕೆ ಬಂದಿರುವ ಅಪಾಯವನ್ನು ಸೆಣಸಲಿಲ್ಲ.

ಡಿ. 6 ನಂತರ ಸಂವಿಧಾನ ಮೂಲ ಸ್ವರೂಪಕ್ಕೆ ಗಂಡಾಂತರ ಒದಗಿದಾಗಲೂ, ಕೋಮು ದಳ್ಳುರಿಯ ನಾಲಗೆಗಳು ಚಾಚಿ ಕರ್ನಾಟಕದ ನಗರ ಪಟ್ಟಣಗಳು ಉರಿಯತೊಡಗಿದ ನಂತರವೂ ಕೋಮುವಾದದ ವಿರುದ್ಧದ ಸೆಣಸಾಟಕ್ಕೆ ಧುಮುಕಲಿಲ್ಲ. ರಾಷ್ಟ್ರೀಯ ಏಕತಾ ಆಂದೋಳನ (ಅಬಿಯಾನ)ದ ಕರೆಗಳನ್ನು ಜಾರಿಗೊಳಿಸಲು, ಸಹಿಸಂಗ್ರಹ ಮಾಡಲು ಕೆಲಸಕ್ಕಿಳಿಯಲಿಲ್ಲ. ಜನರ ಮುಂದೆ ಕೋಮುಶಕ್ತಿಗಳ ವಿರುದ್ಧ ನೆಚ್ಚಬಲ್ಲ ಶಕ್ತಿಯಾಗಿ ಕಾಣಲಿಲ್ಲ.

ಕೋಮುವಾದದ ಮಾತ್ರವಲ್ಲ ಜನರ ಸಮಸ್ಯೆಗಳನ್ನು ಎತ್ತಿಕೊಂಡು ಕೆಲಸಮಾಡುವ ಮನೋಭಾವವನ್ನು ತೋರಲಿಲ್ಲ. ವಿಧಾನ ಸಭೆಯೊಳಗೆ ಧ್ವನಿಯೆತ್ತಿದರೇ ಸಾಕು ಎಂದು ಭಾವಿಸಿತು. ರಥಯಾತ್ರೆಯ ಹಾದಿಯಲ್ಲಿನ ಕೋಮುದಳ್ಳುರಿಯ ನಂತರ, ಡಿ. 6 ರಂದು ಬಾಬರಿ ಮಸೀದಿ ವಿನಾಶದ ನಂತರ ಮುಸ್ಲಿಮರ ಮತ ನಮ್ಮ ಬುಟ್ಟಿಗೆ ಬಿದ್ದೇ ಬಿಟ್ಟಿದೆ ಎಂದು ಭಾವಿಸಿತು.

ಕರ್ನಾಟಕದಲ್ಲಿ ರಾಮಕೃಷ್ಣ ಹೆಗ್ಗಡೆ ದೇವೇಗೌಡರು ಒಟ್ಟಾಗುವುದು ಸ್ವಾಗತಾರ್ಹ ನಿಜ. ಭಾಜಪ 91ರ ಲೋಕಸಭಾ ಚುನಾವಣೆಯಲ್ಲಿ ಯಲಹಂಕಾ ಕ್ಷೇತ್ರವಲ್ಲಿ ತಾವು ಪಡೆದ ಮತಗಳಿಂದ ಉತ್ತೇಜನಗೊಂಡು, ಈ ಕ್ಷೇತ್ರದ ಅಭ್ಯರ್ಥಿ ಬಸವಲಿಂಗಪ್ಪ ನಿಧನರಾದ ಕೂಡಲೇ ತನ್ನ ಚುನಾವಣಾ ಕೆಲಸ ಆರಂಭಿಸಿತು. ಆಸೆ, ಆಮಿಷಗಳನ್ನೊಡ್ಡಿ ಕಾಂಗ್ರೆ-ಜನತಾದಳದ ಸ್ಥಳೀಯ ಮುಖಂಡರನ್ನು ಯುವಕರನ್ನು ತಮ್ಮೆಡೆಗೆ ಸೆಳೆಯಲು ಎಲ್ಲಾ ಪ್ರಯತ್ನ ನಡೆಸಿತು. ಚುನಾವಣಾ ಸಮಯದಲ್ಲಿ ಹಣ ಚೆಲ್ಲಿತು.

ಅದೇ ಸಮಯದಲ್ಲಿ ಮುಖ್ಯಮಂತ್ರಿ ವೀರಪ್ಪಮೊಯಿಲಿಯವರು ತಾವು ಮುಖ್ಯಮಂತ್ರಿಯಾದ ನಂತರ ಮೊದಲ ಚುನಾವಣೆ ಇದು. ಇದರಲ್ಲಿ ಸೋತರೆ ಭಿನ್ನಮತೀಯರ ಉಪಟಳ ಹೆಚ್ಚಾಗುತ್ತದೆ, ಕಾಂಗ್ರೆ ಹೈಕಮಾಂಡಿನ ಅವಕೃಪೆಗೂ ಪಾತ್ರರಾಗದೇ ಕಾಗುತ್ತದೆ ಎಂದು ಭಾವಿಸಿ ಕೆಲಸಕ್ಕಿಳಿದರು. ಬೀದಿ ಬೀದಿಗಳಲ್ಲಿ ಸುತ್ತಾಡಿದರು. ಆ ಭಾಗದ ಲೋಕಸಭಾ ಸದಸ್ಯ ಕೇಂದ್ರ ಮಂತ್ರಿ ಜಾಫರ್ ಷರೀಫ್‌ರವರೂ, ರಾಜ್ಯ ಅನೇಕ ಮಂತ್ರಿಗಳೂ ಸುತ್ತಾಡಿದರು. ಹಣ ಚೆಲ್ಲಾಡಿತು.

ಆದರೇ ಜನತಾದಳದಲ್ಲಿ ಚುನಾವಣೆಯ ಮುನ್ನಾದಿನದವರೆಗೆ ಅಭ್ಯರ್ಥಿ ನಿಲ್ಲಿಸುವ ಬಗ್ಗೆಯಲ್ಲಿ ಜಿಜ್ಞಾಸೆ. ಕಾಂಗ್ರೆ ಪಕ್ಷ-ಬಿಜೆಪಿಗಳ ವಿರುದ್ಧ ಸೆಣಸಿ ಅವರನ್ನೇ ಸೋಲಿಸಬೇಕು. ಇದರಲ್ಲಿ ಈಗಾಗಲೇ ಮೇಲುಗೈಯಾದ ಅವರನ್ನು ಸೆಣಸಲು ಬೇಕಾದ ಸವಾಲನ್ನೊಡ್ಡಬೇಕು ಎಂಬ ರೀತಿಯ ಕೆಲಸ ಮಾಡಲಿಲ್ಲ. ಕೋಮುವಾದದ ವಿರುದ್ಧ ಇರುವ ಕಾಂಗ್ರೆ ವಿರೋಧಿ ಶಕ್ತಿಗಳನ್ನೆಲ್ಲಾ ಒಗ್ಗೂಡಿಸಿ ಜನರ ಮುಂದೆ ಒಗ್ಗಟ್ಟನ್ನು ಪ್ರದರ್ಶಿಸಿ ಮತದಾರರಲ್ಲಿ ಸ್ಫೂರ್ತಿ ತುಂಬುವ ಕೆಲಸ ಮಾಡಲಿಲ್ಲ. ಹಿಂದಿನ ತಮ್ಮ ಒಡಕನ್ನು ಅದರ ಪರಿಣಾಮವಾಗಿ ಇವರ ಬಗ್ಗೆ ಜನರಲ್ಲಿ ಮೂಡಿದ ಸಿನಿಕತನವನ್ನು ನಿವಾರಿಸುವಂತಹ ಕೆಲಸ ಆಗಲಿಲ್ಲ.

ಪರಿಣಾಮವಾಗಿ 1983 ರ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಸೋಲಿಸಲೇಬೇಕೆಂಬ ಛಲದಿಂದ ಈ ಕ್ಷೇತ್ರದ ಶೇ. 61 ರಷ್ಟು ಮತದಾರರು ಮತ ಚಲಾಯಿಸಿದರೆ ಈ ಉಪಚುನಾವಣೆಯಲ್ಲಿ ಕೇವಲ ಶೇ. 48 ಮತಗಟ್ಟೆಗೆ ಬಾರದೆ ಉಳಿದ ಶೇ. 52 ಜನರಲ್ಲಿ ಕಾಂಗ್ರೆಸ್ ಬಗ್ಗೆ ಅತೃಪ್ತಿ, ಬಿಜೆಪಿಗೆ ಮತಹಾಕಲು ಮನಸಿಲ್ಲ, ಜನತಾದಳ ಒಡೆದ ಮನೆ ಅದು ಪ್ರಯೋಜನವಿಲ್ಲ ಎಂಬ ಭಾವನೆ.

ಜೊತೆಗೆ ಜನತಾದಳಕ್ಕೆ ಮತ ನೀಡಿದರೆ ಬಿಜೆಪಿ ಗೆಲ್ಲುತ್ತದೆ ಎಂಬ ಕಾಂಗ್ರೆ ಪಕ್ಷದ ಪ್ರಚಾರ. ಜನತಾದಳಕ್ಕೆ ಮತ ಹಾಕಿದರೆ ಮತ್ತೆ ಕಾಂಗ್ರೆ ಗೆಲ್ಲುತ್ತದೆ ಎಂಬ ಬಿಜೆಪಿಯವರ ಪ್ರಚಾರ.

ಇವುಗಳ ಫಲವಾಗಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನೊಡೆದುದಲ್ಲಿ ಕೇಂದ್ರ ಸರ್ಕಾರದ ಪಾತ್ರದ ಬಗ್ಗೆ ತೀವ್ರ ಅತೃಪ್ತಿಯಿದ್ದರೂ ನುಂಗಿಕೊಂಡು ಮುಸ್ಲಿಂಮತದಾರರು ಮತ್ತೆ ಕಾಂಗ್ರೆ ಪಕ್ಷಕ್ಕೆ ಮತನೀಡಿದ್ದಾರೆ. ದಲಿತರ ಬಹುಮತವೂ ಕಾಂಗ್ರೆಗೆ ಸಂದಿವೆ.

ಕಾಂಗ್ರೆ ನೀತಿಗಳ ಬಗ್ಗೆ ಅತೃಪ್ತಿಹೊಂದಿ ಬೆಲೆಏರಿಕೆ, ನಿರುದ್ಯೋಗ, ರಸಗೊಬ್ಬರಗಳ, ಬಸ್‌ದರದ ಏರಿಕೆ ವಿದ್ಯುತ್ ಅಭಾವ ಇವುಗಳಿಂದ ತೊಳಲಾಡುವ, ಭ್ರಷ್ಟಾಚಾರದ ಬಾಧೆಗೆ ಸಿಕ್ಕಿ ಬಳಲಿದ ಜನ, ಕೇಂದ್ರ ಸರ್ಕಾರ ಆರ್ಥಿಕ ನೀತಿಯ ಪರಿಣಾಮಗಳಿಂದ ನೊಂದ ಜನ ಜನತಾದಳವನ್ನು ಗೆಲ್ಲಿಸಿದ್ದೇವೆ, ಈ ಬಾರಿ ಬಿಜೆಪಿಗೆ ಮತ ನೀಡಿ ನೋಡಣ ಎಂಬ ಭಾವನೆಯಿಂದ ಭಾಜಪಕ್ಕೆ ಮತ ನೀಡಿದ್ದಾರೆ.

ಈಗ ಕೆಲವಾರು ವರ್ಷಗಳಿಂದ ಹಬ್ಬುತ್ತಾ ಬಂದ ಮುಸ್ಲಿಂ ದ್ವೇಷದ ಭಾವನೆ, ಹಿಂದೂಗಳು ಒಂದಾಗಬೇಕು ಎಂಬ ಭಾವನೆ ಕಾಂಗ್ರೆ ವಿರುದ್ಧದ ಅತೃಪ್ತಿಯನ್ನು ತಮ್ಮೆಡೆಗೆ ಸೆಳೆಯುವುದರಲ್ಲಿ ಪ್ರಮುಖ ಪಾತ್ರವಹಿಸಿದೆ.

ಇವೆಲ್ಲಾ ಅಂಶಗಳೂ ಬಿಜೆಪಿ ನಮ್ಮ ರಾಜ್ಯದಲ್ಲಿ ತಲೆಯೆತ್ತದಂತೆ ಮಾಡಲು, ಕೋಮುವಾದದ ವಿರುದ್ಧ ಹೋರಾಟವನ್ನು ಎಲ್ಲಾ ಜಾತ್ಯಾತೀತ ಶಕ್ತಿಗಳೂ ತೀವ್ರವಾಗಿ ನಡೆಸಬೇಕು, ಅದು ರಾಜ್ಯದ ಜನರ ಮನಸ್ಸಿನಲ್ಲಿ ತೀವ್ರವಾದ ಪರಿಣಾಮ ಬೀರುವಷ್ಟು ಬಲವಾಗಬೇಕು.

ಅದೇ ಸಮಯದಲ್ಲಿ ಕಾಂಗ್ರೆ ನೀತಿಗಳಿಂದ ಉಂಟಾಗಿರುವ ಜನರ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗ ತೋರಿಸುವ ಹೋರಾಟಗಳನ್ನು ನಡೆಸುತ್ತಾ ಕಾಂಗ್ರೆಗೆ, "ನೋಡಿ ಇಲ್ಲಿದೆ ಪರ್ಯಾಯ ಮಾರ್ಗ, ಪರ್ಯಾಯ ಶಕ್ತಿ", ಬಿಜೆಪಿ ಅದಕ್ಕೆ ಪರ್ಯಾಯವಾಗಲು ಸಾಧ್ಯವಿಲ್ಲ ಎಂಬುದನ್ನು ಸಾಧಿಸಿ ತೋರಿಸಬೇಕು.

ಇಂತಹ ಹೋರಾಟ ಮಾತ್ರ ಜನರನ್ನು ನಿರಾಸೆಯಿಂದ, ಕೋಮುಷ್ಣಾದದ ಮಡಿಲಿನಿಂದ ಪಾರು ಮಾಡಬಲ್ಲದು.

ಹೊಸ ಉತ್ಸಾಹ ತುಂಬಿದೆ ಕಲ್ಕತ್ತಾ ವಿಚಾರಸಂಕಿರಣ

"ಮಾರ್ಕ್ಸ್‌ವಾದ ಒಂದು ವಿಜ್ಞಾನ. ಅದರಲ್ಲಿ ನಮಗೆ ಪೂರ್ಣ ವಿಶ್ವಾಸವಿದೆ. ಆ ವಿಶ್ವಾಸದೊಂದಿಗೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟವನ್ನು ಮುಂದೊಯ್ಯುತ್ತೇವೆ" ಮೇ 7 ರಂದು ಕಲ್ಕತ್ತೆಯಲ್ಲಿ ಜಗತ್ತಿನ ಮೂಲೆ ಮೂಲೆಗಳಿಂದ ಬಂದಿದ್ದ 21 ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಮುಖಂಡರ ಈ ದೃಢ ನಿರ್ಧಾರದೊಂದಿಗೆ ಕಲ್ಕತ್ತೆಯಲ್ಲಿ ನಡೆದ ಮೂರು ದಿನಗಳ ಅಂತರ್ರಾಷ್ಟ್ರೀಯ ವಿಚಾರಸಂಕಿರಣ ಮುಕ್ತಾಯ ಗೊಂಡಿತು. ಬೃಹತ್ ಸಾರ್ವಜನಿಕ ಸ್ವಾಗತ ಸಮಾರಂಭದಲ್ಲಿ ಈ ಮುಖಂಡರು ಹೋರಾಟವನ್ನು ಮುಂದುವರೆಸುವ ಪ್ರತಿಜ್ಞೆ ಮಾಡಿದರು.

ನೇತಾಜಿ ಒಳ ಕ್ರೀಡಾಂಗಣ ಕಿಕ್ಕಿರಿದು ತುಂಬಿತ್ತು. ಸಾವಿರ-ಸಾವಿರ ಕಲ್ಕತ್ತಾ ವಾಸಿಗಳು ಕೆಂಬಾವುಟಗಳನ್ನು ಎತ್ತಿಹಿಡಿದು ವಿದೇಶೀ ಪ್ರತಿನಿಧಿಗಳಿಗೆ ಉತ್ಸಾಹ ಪೂರ್ಣ ಅಭಿನಂದನೆ ಸಲ್ಲಿಸಿದರು.

ವಿಶ್ವದ ಮೂಲೆ-ಮೂಲೆಗಳಿಂದ ಬಂದ ಕಮ್ಯುನಿಸ್ಟ್ ಪ್ರತಿನಿಧಿಗಳು ಬೃಹತ್ ಜನಸ್ತೋಮವನ್ನು ಕಲ್ಕತ್ತಾ ನಗರದ ಜನಗಳಲ್ಲಿ ಮಾರ್ಕ್ಸ್‌ವಾದ ಈಗಲೂ ಅಷ್ಟೇ ಗೌರವ ಪಡೆಯುತ್ತಿದ್ದನ್ನು ಕಂಡು ಹರ್ಷೋಲ್ಲಸಿತರಾದರು. ಸಮಾರಂಭದಲ್ಲಿ ಮಾತನಾಡಿದ ಪ್ರತಿಯೊಬ್ಬ ಭಾಷಣಕಾರರೂ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಾ ಈ ಮಹತ್ವದ ವಿಚಾರ ಸಂಕಿರಣ ನಡೆಸಿದ ಸಿಪಿಐ(ಎಂ) ಗೆ ಧನ್ಯವಾದಗಳನ್ನರ್ಪಿಸಿದರು.

ಈ ವಿಚಾರ ಸಂಕಿರಣ ಯಾವುದೇ ದಸ್ತಾವೇಜನ್ನು ಹೊರಡಿಸದಿದ್ದರೂ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಚರ್ಚೆಯಲ್ಲಿ ಮೂಡಿ ಬಂದ ಹಲವು ಸಮಾನ ಅಂಶಗಳನ್ನು ಪ್ರಸ್ತಾಪಿಸಿದರು. ಎಷ್ಟೇ ತೇಪೆಗಳನ್ನು ಹಾಕಿದರೂ, ಎಷ್ಟೇ ಸುಧಾರಣೆ ತಂದರೂ ಬಂಡವಾಳಶಾಹಿಯ ಮೂಲಭೂತ ಶೋಷಣಾ ಸ್ವರೂಪ ಬದಲಾಗದು. ಆದ್ದರಿಂದ ಸಮಾಜವಾದವೇ ಮಾನವಕುಲದ ಸಮಸ್ಯೆಗಳಿಗೆ ಏಕೈಕ ಪರಿಹಾರ- ಇಲ್ಲಿ ವಿಚಾರ-ಸಂಕಿರಣದಲ್ಲಿ ಭಾಗವಹಿಸಿದವರೆಲ್ಲರ ಅಭಿಪ್ರಾಯ. ಇನ್ನೊಂದು ಮಹತ್ವದ ಸಂಗತಿಯೆಂದರೆ ಮಾರ್ಕ್ಸ್‌ವಾದ ಒಂದು ವಿಜ್ಞಾನ, ಅದು ಕುರುಡು ನಂಬಿಕೆಯಲ್ಲ; ಸೋವಿಯೆಟ್ ಒಕ್ಕೂಟದ ಘಟನೆಗಳಿಂದ ಹಿನ್ನಡೆಯಾಗದಿದ್ದರೂ ಅದರಿಂದ ಮಾರ್ಕ್ಸ್‌ವಾದದ ಊರ್ಜಿತತೆಗೆ ಯಾವುದೇ ಭಂಗ ಬಂದಿಲ್ಲ ಎಂಬುದು.

ಸುರ್ಜಿತ್‌ರವರ ಭಾಷಣದ ನಂತರ ಪ್ರತಿಯೊಬ್ಬ ಪ್ರತಿನಿಧಿಯು ಸಭೆಯನ್ನುದ್ದೇಶಿಸಿ ಸಂಕ್ಷಿಪ್ತವಾಗಿ ಮಾತನಾಡಬೇಕೆಂದು ಕೇಳಿಕೊಳ್ಳಲಾಯಿತು. ಕ್ಯೂಬಾ, ವಿಯೆಟ್ನಾಂನ ನಿಯೋಗಗಳಷ್ಟೇ ಅಲ್ಲ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಎಸ್ಸಾಪ್ ಪಹಾದ್-ರವರೂ ಭಾರಿ ಕರತಾಡನಗಿಟ್ಟಿಸಿದರು. ಸಮಾಜವಾದದ ವಿರುದ್ಧ ಬೂರ್ಜ್ವಾ ಪತ್ರಿಕೆಗಳ ಅಪಪ್ರಚಾರವನ್ನು ಟೀಕಿಸಿದ ಅವರು ದಕ್ಷಿಣ ಆಫ್ರಿಕಾವಾಗಲಿ, ಭಾರತವಾಗಲಿ ಸಮಾಜವಾದದ ಅಡಿಗೆ ಬಂದಾಗ ಇಲ್ಲಿಯ ಜನಗಳಿಗೆ ಒಂದು ಉತ್ತಮ ಸ್ಥಳವಾಗುತ್ತದೆ ಎಂದು ಘೋಷಿಸಿದರು.

ಮೆಕ್ಸಿಕೋ, ಬ್ರೆಝಿಲ್‌ನಂತಹ ದೂರದ ದೇಶಗಳ ಪ್ರತಿನಿಧಿಗಳು ಮಾತನಾಡುತ್ತಾ ನಾವು ಭಾರತದಿಂದ ಬಹಳ ದೂರದ ದೇಶಗಳ ನಿವಾಸಿಗಳಿರಬಹುದು, ಆದರೆ ನಮ್ಮ ಜನಗಳು ಮತ್ತು ಭಾರತದ ಜನಗಳ ಎದುರು ಇರುವ ಸಮಸ್ಯೆಗಳು ಒಂದೇ ತರದ್ದು, ನಾವಿಬ್ಬರೂ ದಮನದ ವಿರುದ್ಧ, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಬೇಕಿದೆ. ಸಮಾಜವಾದಕ್ಕಾಗಿ ಶ್ರಮಿಸಲೇ ನಡೆಸಬೇಕಿದೆ ಎಂದರು.

ಕೆನಡಾ, ಆಸ್ಟ್ರೇಲಿಯಾ, ಬ್ರಿಟನ್, ಫ್ರಾನ್ಸ್‌ನಂತಹ ಮುಂದುವರಿದ ದೇಶಗಳ ಕಮ್ಯುನಿಸ್ಟರು ಬಂಡವಾಳಶಾಹಿಯ ಶೋಷಣಾ ಸ್ವರೂಪದ ಬಗ್ಗೆ ಮಾತನಾಡಿದರು. ಈ ದೇಶಗಳು ಮುಂದುವರೆದಿದ್ದರೂ ಭಾರಿ ಅಸಮಾನತೆ ಅಲ್ಲೂ ಇದೆ. ಸಾಮ್ರಾಜ್ಯಶಾಹಿಯನ್ನು ಸೋಲಿಸಿ ಸಮಾಜದ ಆದರ್ಶ ಸಾಧನೆಯಾಗಬೇಕಾದರೆ ಸಮ್ರಾಜ್ಯಶಾಹಿಯನ್ನು ಸೋಲಿಸುವುದು ಅಗತ್ಯ ಎಂದರು.

ಬಂಡವಾಳಶಾಹಿ ಎಂದಿಗೂ ಇತಿಹಾಸದ ಅಂತಿಮ ಘಟ್ಟವಾಗಲಾರದು

ಸಿಪಿಐ(ಎಂ) ಸಂಘಟಿಸಿದ ಈ ವಿಚಾರ ಸಂಕಿರಣ ವಿಶ್ವದಲ್ಲಿ ಈಗ ಏನೇ ಅಪಪ್ರಚಾರ, ಕಮ್ಯುನಿಸ್ಟ್ ವಿರೋಧಿ ದುಷ್ಟ ಪ್ರಚಾರ ನಡೆದರೂ ಸಮಾಜವಾದಕ್ಕಾಗಿ ಹೋರಾಟವನ್ನು ಮುಂದುವರೆಸುವಲ್ಲಿ ನಮಗೆ ಹೊಸ ಉತ್ಸಾಹವನ್ನು ತುಂಬಿದೆ ಎಂದರು. ಎಲ್ಲಾ ಪ್ರತಿನಿಧಿಗಳ ವಿಚಾರ ವಿನಿಮಯಗಳ ಸಾರಾಂಶವನ್ನು ನೀಡುತ್ತಾ ಪಶ್ಚಿಮಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು. ಮಾರ್ಕ್ಸ್‌ವಾದ ಒಂದು ವಿಜ್ಞಾನ, ಕುರುಡು ನಂಬಿಕೆಯಲ್ಲ ಎಂದು ಮತ್ತೊಮ್ಮೆ ಒತ್ತಿ ಹೇಳಿದರು. ಬಂಡವಾಳಶಾಹಿ ಎಂದಿಗೂ ಇತಿಹಾಸದ ಅಂತಿಮ ಘಟ್ಟವಾಗಲಾರದು. ಸಮಾಜವಾದವನ್ನು ಸ್ಥಾಪಿಸಿ ಶೋಷಣೆಯಿಂದ ಮುಕ್ತವಾದ ಜಗತ್ತನ್ನು ಕಟ್ಟುವ ಹೋರಾಟ ಮುಂದುವರಿಯುತ್ತದೆ ಎಂದರು.

ವಿಚಾರಸಂಕಿರಣಕ್ಕೆ ಪ್ರತಿನಿಧಿಗಳನ್ನು ಕಳಿಸದ 21 ಪಕ್ಷಗಳಲ್ಲದೆ ಇನ್ನೂ 10 ಪಕ್ಷಗಳು ಪ್ರಬಂಧಗಳನ್ನು ಅಥವಾ ಸಂದೇಶಗಳನ್ನು ಕಳಿಸಿ ಈ ವಿಚಾರಸಂಕಿರಣದೊಡನೆ ಸಹಕರಿಸದವು. ಪ್ರಬಂಧ ಕಳಿಸಿದ ಪಕ್ಷಗಳು ಅಮೇರಿಕಾ, ಸಿರಿಯಾ, ಇರಾನ್, ಹಾಗೂ ಇಜಿಪ್ಟ್‌ನ ಕಮ್ಯುನಿಸ್ಟ್‌ಪಕ್ಷಗಳು, ಚೀನಾ ಕಮ್ಯುನಿಸ್ಟ್‌ಪಕ್ಷ ಮತ್ತು ರಶಿಯನ್ ಕಮ್ಯುನಿಸ್ಟ್ ಕಾರ್ಮಿಕರ ಪಕ್ಷ ಹಾರ್ದಿಕ ಸಂದೇಶಗಳನ್ನು ಕಳಿಸಿದವು. ಕೊನೆಗಳಿಗೆಯಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸಿದ್ದರಿಂದ ಸ್ಪೇನ್ ಕಮ್ಯುನಿಸ್ಟ್ ಪಕ್ಷ, ಇಟಲಿ ಪುನರ್‌ಸ್ಥಾಪನಾ ಪಕ್ಷ ಮತ್ತು ಕೊಲಂಬಿಯಾ ಹಾಗೂ ಮಾರಿಶಸ್‌ನ ಕಮ್ಯುನಿಸ್ಟ್ ಪಕ್ಷಗಳೂ ಸಂದೇಶವನ್ನು ಕಳಿಸಿದವು

ಪುಟ 8ನೋಡಿ

ಒಳಪುಟಗಳಲ್ಲಿ

ಕಲ್ಕತ್ತಾ ವಿಚಾರ ಸಂಕಿರಣ:

ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲೊಂದು ಐತಿಹಾಸಿಕ ಘಟನೆ.

-- ಕಾಂ.ಹರ್ಕಿಶನ್ ಸಿಂಗ್ ಸುರ್ಜಿತ್



ಮೇ 5ರಿಂದ 7ರವರೆಗೆ ಕಲ್ಕತ್ತೆಯಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ ಬಗ್ಗೆ ನಡೆದ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದ ಮಹತ್ವ, ಸಾಧನೆಯ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು

ಬೂರ್ಜ್ವಾ ಪತ್ರಿಕೆಗಳು ಕಲ್ಕತ್ತೆಯ ವಿಚಾರ ಸಂಕಿರಣ ನಡೆದೇ ಇಲ್ಲವೆಂಬಂತೆ ನಟಿಸಿದ್ದರೆ ಅಥವಾ ಅದರ ಬಗ್ಗೆ ಪ್ರತಿಕೂಲ ಟೀಕೆ ಮಾಡಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರ ಟೀಕೆ, ನಟನೆಯೇನೇ ಇರಲಿ ಈ ವಿಚಾರ ಸಂಕಿರಣ ವಿಶ್ವಾದ್ಯಂತ ಕಮ್ಯುನಿಸ್ಟರ ಗಮನ ಸೆಳೆಯಿತು. ಸೋವಿಯತ್ ಒಕ್ಕೂಟದ ನಾಶ ಹಾಗೂ ಪೂರ್ವ ಯುರೋಪಿನ ದೇಶಗಳ ಸಮಾಜವಾದೀ ಆಳ್ವಿಕೆಗಳ ಕುಸಿತದಿಂದಾಗಿ ಸಮಾಜವಾದಕ್ಕಾದ ಹಿನ್ನಡೆಯ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದ ಈಗೆಷ್ಟು ಅರ್ಥಪೂರ್ಣ ಎಂಬ ಬಗ್ಗೆ ಚರ್ಚೆ ನಡೆಸಬೇಕೆಂಬ ಕಮ್ಯುನಿಸ್ಟರ ಬಯಕೆಯನ್ನು ಈ ವಿಚಾರ ಸಂಕಿರಣ ಪೂರೈಸಿದೆ.

ಸಮಾಜವಾದದ ಹಿನ್ನಡೆಯ ಬಗ್ಗೆ ಸಾಮ್ರಾಜ್ಯಶಾಹಿ ಅಪಪ್ರಚಾರದ ಮಹಾಪೂರವನ್ನೇ ಹರಿಯಬಿಟ್ಟ ಹಿನ್ನೆಲೆಯಲ್ಲಿ, ಸಮಾಜವಾದ ಸತ್ತಿದೆ, ಕಮ್ಯುನಿಸಂಗೆ ಭವಿಷ್ಯವಿಲ್ಲ ಎಂಬ ಪ್ರಚಾರದ ಹಿನ್ನೆಲೆಯಲ್ಲಿ ಇಂತಹ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸುವ ಪ್ರಸ್ತಾಪ ಬಂತು.

ಸಾಮ್ರಾಜ್ಯಶಾಹೀ ಅಪಪ್ರಚಾರದ ಅಬರದಿಂದ ಕಕ್ಕಾಬಿಕ್ಕಿಯಾದ ಕೆಲವು ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳು ತಮ್ಮ ಹೆಸರುಗಳನ್ನು ಕಾರ್ಯಕ್ರಮಗಳನ್ನು ಬದಲಿಸಿಕೊಂಡು ಗೊಂದಲದಲ್ಲಿ ಬಿದ್ದರೆ, ಇನ್ನು ಕೆಲವು ಈಗಲೂ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲ ನೀತಿಗಳಿಗೆ ಬದ್ಧವಾಗಿದ್ದು ಹಿಂದಿನ ಅನುಭವಗಳ ಮೌಲ್ಯಮಾಪನ ನಡೆಸಿದವು. ಇಂದಿನ ಸ್ಥಿತಿಗೆ ಕಾರಣವಾದ ವಿಕೃತಿಗಳ, ತಪ್ಪುಗಳ ನಿವಾರಣೆಗೆ ನೆರವಾಗಬಹುದಾದ ತೀರ್ಮಾನಗಳಿಗೆ ಬಂದವು.

ಸಮಾಜವಾದದ ಸೋಲು-ಹಿನ್ನಡೆಗಳ ವಿಶ್ಲೇಷಣೆ ನಡೆಸುತ್ತಾ ಬಂದ ಸಿಪಿಐ(ಎಂ) ತನ್ನ 14ನೇ ಮಹಾಧಿವೇಶನದಲ್ಲಿ ಜನವರಿ 1992ರಲ್ಲಿ ಒಂದು ನಿರ್ಣಯವನ್ನು ಕೈಗೊಂಡಿತು. ಇದಕ್ಕೆ ವ್ಯಾಪಕ ಮೆಚ್ಚುಗೆ ದೊರೆಯಿತು. ಇದರಿಂದ ಪ್ರೋತ್ಸಾಹ ಪಡೆದು ಈ ಪ್ರಕ್ರಿಯೆಯನ್ನು ಇನ್ನಷ್ಟು ಮುಂದಕ್ಕೊಯ್ದವು.

ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ನಡುವೆ ವಿಚಾರಗಳ, ಅನುಭವಗಳ ವಿನಿಮಯಕ್ಕೆ ಅನುವು ಮಾಡಿಕೊಟ್ಟು ಮಾರ್ಕ್ಸ್‌ವಾದ ಮೂಲ ನಿಲುವುಗಳ ರಕ್ಷಣೆಗೆ ನೆರವಾಗುತ್ತದೆಂದು ಜುಲೈ 1992ರಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಈ ವಿಚಾರ ಸಂಕಿರಣ ನಡೆಸುವ ನಿರ್ಣಯ ಕೈಗೊಂಡಿತು. ಈ ನಿರ್ಣಯ ಕೈಗೊಳ್ಳುವ ಮೊದಲು ನಾನು ಹಲವು ಯುರೋಪಿಯನ್ ದೇಶಗಳು ಹಾಗೂ ಕ್ಯೂಬಾಕ್ಕೆ ಭೇಟಿ ನೀಡಿ ಸಂಬಂಧಪಟ್ಟ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿದೆ. ನಮ್ಮ ಪ್ರಸ್ತಾಪಕ್ಕೆ ಉತ್ತಮ ಸ್ಪಂದನ ದೊರೆತಾಗ ಕೇಂದ್ರ ಸಮಿತಿ ವಿಚಾರ ಸಂಕಿರಣ ನಡೆಸಬೇಕೆಂದು ನಿರ್ಧರಿಸಿತು.

ಇತ್ತೀಚಿನ ಬೆಳವಣಿಗೆಗಳ ಮೌಲ್ಯಮಾಪನವನ್ನು ಎಲ್ಲಾ ಪಕ್ಷಗಳು ಮಾಡುತ್ತಿದ್ದರೂ ಯಾವುದೇ ಅಂತಿಮ ತೀರ್ಮಾನಕ್ಕೆ ಬಂದಿದ್ದೇವೆ ಎಂದು ಹೇಳಲು ಯಾವ ಪಕ್ಷವೂ ಸದ್ಯ ಹೇಳಿಕೊಳ್ಳಲು ಸಾಧ್ಯವಿಲ್ಲದ್ದರಿಂದ ಯಾವುದೇ ದಸ್ತಾವೇಜು ರೂಪಿಸುವ ಪ್ರಯತ್ನ ನಡೆಸಬಾರದು ಎಂದು ವಿವಿಧ ಪಕ್ಷಗಳ ನಡುವೆ ಸಮಾಲೋಚನೆಗಳಲ್ಲಿ ಸ್ಪಷ್ಟಪಡಿಸಲಾಯಿತು.

ನಾವು 30 ಪಕ್ಷಗಳಿಗೆ ಆಹ್ವಾನ ನೀಡಿದೆವು. ಇದರಲ್ಲಿ 20 ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಕಳಿಸಿದವು. ನಾಲ್ಕು ಪಕ್ಷಗಳು ಪ್ರತಿನಿಧಿಗಳನ್ನು ಕಳಿಸಲಾಗಲಿಲ್ಲ, ಆದರೆ ತಮ್ಮ ಪ್ರಬಂಧಗಳನ್ನು ಕಳಿಸಿದರು. ಐದು ಪಕ್ಷಗಳು ತಮ್ಮ ದೇಶದಲ್ಲಿನ ಗಂಭೀರ ಪರಿಸ್ಥಿತಿಯಿಂದಾಗಿ ಭಾಗವಹಿಸಲಾಗದೆ ಶುಭಾಶಯ ಸಂದೇಶ ಕಳಿಸಿದರು. ಈ ರೀತಿ ವಿಚಾರ ಸಂಕಿರಣಕ್ಕೆ ಭಾರೀ ಸ್ಪಂದನ ದೊರೆಯಿತು.

ವಿಚಾರ ಸಂಕಿರಣಕ್ಕೆ ಬಂದ ಎಲ್ಲಾ ಪ್ರಬಂಧಗಳನ್ನು ಎಲ್ಲಾ ಪ್ರತಿನಿಧಿಗಳಿಗೂ ಹಂಚಲಾಯಿತು. ಇಂಗ್ಲೀಷ್ ಬಾರದವರಿಗೆ ತರ್ಜುಮೆ ಮಾಡಿ ಕೊಡಲಾಯಿತು. ಮೊದಲ ಸುತ್ತಿನಲ್ಲಿ ಎಲ್ಲಾ ಪಕ್ಷಗಳು ತಮ್ಮ ಪ್ರಬಂಧಗಳನ್ನು ಮಂಡಿಸಿದವು. ಎರಡನೇ ಸುತ್ತಿನಲ್ಲಿ ನಿರ್ದಿಷ್ಟ ಪ್ರಶ್ನೆಗಳನ್ನೆತ್ತಿ ಚರ್ಚೆ ನಡೆಸಲಾಯಿತು. ಮೂರನೇ ದಿನ ಚರ್ಚೆ ಮುಂದುವರೆದು ಸ್ಪಷ್ಟೀಕರಣ, ಎತ್ತಿದ ಪ್ರಶ್ನೆಗಳಿಗೆ ಉತ್ತರ ನೀಡಲಾಯಿತು. ಒಟ್ಟಾಗಿ ಹದಿನಾರು ಗಂಟೆ ಕಾಲ ಪ್ರತಿನಿಧಿಗಳು ಹಲವಾರು ಪ್ರಶ್ನೆಗಳ ಬಗ್ಗೆ ಚರ್ಚೆ ನಡೆಸಿದರು.

ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರೆಲ್ಲಾ ವಿಶ್ವದ ವಿಭಿನ್ನ ಪ್ರದೇಶಗಳಿಂದ ಬಂದ ವೈವಿಧ್ಯಮಯ ಅನುಭವ ಪಡೆದ ಕಮ್ಯುನಿಸ್ಟ್ ಆಂದೋಲನದ ವಿವಿಧ ತುಕಡಿಗಳನ್ನು ಪ್ರತಿನಿಧಿಸಿದವರು. ಇದರಿಂದ ಸಹಜವಾಗಿಯೇ ಅವರ ವಿಶ್ಲೇಷಣೆಯಲ್ಲಿ, ವಿಶ್ಲೇಷಣೆಯ ರೀತಿಯಲ್ಲಿ ವ್ಯತ್ಯಾಸಗಳಿದ್ದವು. ಆದರೆ ಈ ಪ್ರಬಂಧಗಳು ಹಾಗೂ ಅವುಗಳ ಮೇಲೆ ನಡೆದ ಚರ್ಚೆಗಳನ್ನು ಗಮನಿಸಿದರೆ ಒಂದಂಶ ಎದ್ದು ಕಾಣುತ್ತಿತ್ತು- ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಜ್ಞಾನದ ಆಧಾರದ ಮೇಲೆ ಸ್ವವಿಮರ್ಶೆ ನಡೆಸಿ ತಪ್ಪುಗಳನ್ನು ಪರೀಕ್ಷಿಸಿ ಅವನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯ ಈ ಎಲ್ಲಾ ಪಕ್ಷಗಳಿಗೆ ಇದೆ ಎಂಬುದೇ ಆ ಸಂಗತಿ.

ಮಾರ್ಕ್ಸ್‌ವಾದದ ಮೇಲೆ ಸಾಮ್ರಾಜ್ಯಶಾಹಿ ಒಡ್ಡಿರುವ ಸವಾಲನ್ನು ಎದುರಿಸಬೇಕು, ತುರ್ತಾಗಿ ಕ್ಯೂಬಾ, ಕೊರಿಯಾ ವಿಯೆಟ್ನಾಂ, ಹಾಗೂ ಚೀಣಾದ ಮೇಲೆ ನಡೆಯುತ್ತಿರುವ ಧಾಳಿಗಳನ್ನು ಒಗ್ಗಟ್ಟಿನಿಂದ ವಿಫಲಗೊಳಿಸಬೇಕು ಎಂಬ ಬಗ್ಗೆ ವಿಶೇಷ ಒತ್ತು ಕಂಡು ಬಂತು.

ವಿಚಾರ ಸಂಕಿರಣದ ಒಟ್ಟು ತೀರ್ಮಾನಗಳು ಹೀಗಿವೆ:

1. ಮಾರ್ಕ್ಸ್‌ವಾದ ಒಂದು ಸೃಜನಾತ್ಮಕ ವಿಜ್ಞಾನ. ಅದನ್ನು ಮೊದಲು ಪ್ರತಿಪಾದಿಸಿದಾಗ ಎಷ್ಟು ಅರ್ಥಪೂರ್ಣವಾಗಿತ್ತೋ ಈಗಲೂ ಅಷ್ಟೇ ಅರ್ಥಪೂರ್ಣವಾಗಿದೆ. ಈಗಲೂ ಕಾರ್ಯಾಚರಣೆಗೆ ಮಾರ್ಗದರ್ಶಿಯಾಗಿದೆ.
2. ಸಮಾಜವಾದಕ್ಕೆ ಹಿನ್ನಡೆ, ಸೋಲುಗಳು ವಿಕೃತಿಗಳು ಹಾಗೂ ತಪ್ಪುಗಳಿಂದಾಗಿ ಉಂಟಾಯಿತು. ಈ ಹಿನ್ನಡೆ ಮಾರ್ಕ್ಸ್‌ವಾದದ ಸಮಾಜವಾದದ ಗುರಿಗೆ ಬಂದಿರುವ ನಕಾರವಲ್ಲ.
3. ಈಗಲೂ ಎಲ್ಲಾ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಗುರಿ ಸಮಾಜವಾದವೇ.
4. ಮಾನವನಿಂದ ಮಾನವನ ಶೋಷಣೆಯ ಮೇಲೆ ನಿಂತಿರುವ ಬಂಡವಾಳಶಾಹಿ, ಈಗಿನ ಸಮಾಜದ ಕೆಡುಕುಗಳಿಗೆ ಔಷಧಿ ನೀಡಲಾರದ.
5. ಸಾಮ್ರಾಜ್ಯಶಾಹಿ ಈಗಲೂ ಮಾನವಕುಲದ ಮುಖ್ಯ ಶತ್ರು. ಅದರ ವಿರುದ್ಧ ಹೋರಾಟದಲ್ಲಿ ನಾವು ಎಲ್ಲಾ ಶಕ್ತಿಗಳನ್ನು ಒಗ್ಗಟ್ಟಾಗಿಸಬೇಕು. ಸಮಾಜವಾದೀ ದೇಶಗಳನ್ನು ಅವುಗಳ ಮೇಲಾಗುತ್ತಿರುವ ಹಲ್ಲೆಗಳಿಂದ ರಕ್ಷಿಸಬೇಕು.
6. ಮಾರ್ಕ್ಸ್‌ವಾದವನ್ನು ರಕ್ಷಿಸುವ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳು ಕಾರ್ಮಿಕ ಹಾಗೂ ಇತರ ಶ್ರಮಜೀವಿ ವರ್ಗಗಳನ್ನು ಸಮಾಜವಾದದ ಗುರಿ ಸಾಧನೆಯತ್ತ ಸಾಗುವಲ್ಲಿ ನೇತೃತ್ವ ನೀಡುತ್ತಿವೆ.

ಕಮ್ಯುನಿಸ್ಟರು ಮಾರ್ಕ್ಸ್‌ವಾದ ಒಂದು ಸೃಜನಾತ್ಮಕ ವಿಜ್ಞಾನ ಎನ್ನುವಾಗ ವಿಜ್ಞಾನ ನಿಂತ ನೀರಾಗಲು ಸಾಧ್ಯವಿಲ್ಲ ಎಂದು ಅರಿತಿದ್ದಾರೆ. ಸಮಾಜದ ಬೆಳವಣಿಗೆಯೇ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯೇ ಈ ವಿಜ್ಞಾನವನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತಾ ಹೋಗುತ್ತದೆ. ಇದುವರೆಗೆ ಯಾರು ಕೂಡಾ ಮಾರ್ಕ್ಸ್‌ವಾದಿ ತತ್ವದ, ಅದರ ರಾಜಕೀಯ ಅರ್ಥಶಾಸ್ತ್ರದ, ಚಾರಿತ್ರಿಕ ಭೌತವಾದ ಹೇಳುವ ಸಾಮಾಜಿಕ ಬೆಳವಣಿಗೆಯ ನಿಯಮಗಳಿಗೆ ಸವಾಲು ಹಾಕುವಲ್ಲಿ ಯಶಸ್ವಿಯಾಗಿಲ್ಲ. ವಾಸ್ತವವಾಗಿ ಇತಿಹಾಸ ಈ ಸಿದ್ಧಾಂತಗಳ ಋಜುತ್ವವನ್ನು, ಅವು ಸರಿಯೆಂಬುದನ್ನು ಸಾಬೀತು ಮಾಡಿದೆ. ಈ ನಿಯಮಗಳನ್ನು ಒಪ್ಪುವುದಾದರೆ ಬಂಡವಾಳಶಾಹೀ ಘಟ್ಟ ಕೂಡಾ ತಾತ್ಕಾಲಿಕ. ಅದು ಶಾಶ್ವತವಲ್ಲ. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಪೂರ್ಣ ಬೆಳವಣಿಗೆ ಕಂಡ ಉತ್ಪಾದಕ ಶಕ್ತಿಗಳನ್ನು ಮುಂದಕ್ಕೊಯ್ಯುವ ಸಾಮರ್ಥ್ಯ ಸಮಾಜವಾದಕ್ಕೆ ಮಾತ್ರವೇ ಇದೆ; ಈ ಮೂಲಕ ಎಲ್ಲಾ ತರದ ಶೋಷಣೆಗಳಿಂದ ಮಾನವ ಕುಲವನ್ನು ಮುಕ್ತಗೊಳಿಸಿ ಹೊಸ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಉನ್ನತಿಯನ್ನು ತಲುಪಲು ಅನುವು ಮಾಡಿಕೊಡುತ್ತದೆ; ದುಡಿಯುವ ಜನಗಳಿಗೆ ಪೂರ್ಣ ಸ್ವಾತಂತ್ರ್ಯ ಕಲ್ಪಿಸುತ್ತದೆ. ಬಂಡವಾಳಶಾಹೀ ಯಾವುದೇ ಪರಿಹಾರ ನೀಡಲಾರದು ಎಂಬುದಕ್ಕೆ ಬಂಡವಾಳಶಾಹೀ ದೇಶಗಳಲ್ಲಿನ ಸಮಕಾಲೀನ ಸ್ಥಿತಿ-ಗತಿಯೇ ಸಾಕ್ಷಿ.

ಸಾಮ್ರಾಜ್ಯಶಾಹಿ ಮುಖ್ಯ ಶತ್ರು ಎಂಬ ಬಗ್ಗೆ ಎಲ್ಲಿಯೂ ಸಂಶಯವಿಲ್ಲ. ಸಮಾಜವಾದೀ ದೇಶಗಳಲ್ಲಿನ ಬೆಳವಣಿಗೆಗಳ ನಂತರವೂ ಅದರ ಸ್ವಭಾವದಲ್ಲಿ ಬದಲಾವಣೆಯಾಗಿಲ್ಲ. ಮೂರನೇ ಜಗತ್ತಿನ ಪ್ರತಿಯೊಂದು ದೇಶದ ಮೇಲೂ ತನ್ನ ಹೊಸ ವಿಶ್ವ ವ್ಯವಸ್ಥೆಯನ್ನು ಹೇರಲು, ಪ್ರತಿಯೊಂದು ದೇಶವೂ ತನ್ನನ್ನು ಅವಲಂಬಿಸಿರಬೇಕು, ತಮ್ಮ ಆರ್ಥಿಕ ಸಾರ್ವಭೌಮತೆಯನ್ನು ತಮಗೆ ಒತ್ತೆಯಿಡಬೇಕೆಂದು ಸಾಮ್ರಾಜ್ಯಶಾಹಿ ಒತ್ತಡ ಹಾಕುತ್ತದೆ.

ವಿಚಾರ ಸಂಕಿರಣದಲ್ಲಿ ಸಮಾಜವಾದೀ ದೇಶಗಳ ಪ್ರತಿನಿಧಿಗಳು ತಮ್ಮ ಅನುಭವಗಳ ರೂಪುರೇಷೆಗಳನ್ನು ನೀಡಿ ಅವುಗಳ ಸ್ವಯಂ ವಿಮರ್ಶೆ ನಡೆಸಿದರು. ತಮ್ಮ ಕೆಲಸಗಳಲ್ಲಿನ ವಿಕೃತಿಗಳನ್ನು, ತಪ್ಪುಗಳನ್ನು ನಿವಾರಿಸಲು ಸುಧಾರಣೆಗಳನ್ನು ಸಮಾಜವಾದದ ಗುರಿಯನ್ನು ಇಟ್ಟುಕೊಂಡೇ ಹೇಗೆ ತಂದರು ಎಂದು ವಿವರಿಸಿದರು. ಒಂದಂಶ ಸ್ಪಷ್ಟವಾಗಿ ಮೂಡಿ ಬಂತು - ಹಳೆಯ ವ್ಯವಸ್ಥೆಯಿಂದ ಹೊಸ ವ್ಯವಸ್ಥೆಗೆ ಪರಿವರ್ತನೆ ದೀರ್ಘಕಾಲದ ಪ್ರಕ್ರಿಯೆ. ಆದರೆ ತಮ್ಮ ಸುಧಾರಣಾ ಕ್ರಮಗಳು ಸಮಾಜವಾದವನ್ನು ಬಲಪಡಿಸುತ್ತವೆ ಎಂಬ ವಿಶ್ವಾಸ ಅವರದ್ದು. ವಿಚಾರ ಸಂಕಿರಣದಲ್ಲಿ ಅವರ ಕಾಣಿಕೆ ಬಹಳ ಉಪಯುಕ್ತವಾಗಿತ್ತು ಏಕೆಂದರೆ ಸಮಾಜವಾದ ಕಟ್ಟುವ ನೇರ ಅನುಭವ ಅವರದ್ದು. ಒಂದು ಹಿಂದುಳಿದ ದೇಶದಲ್ಲಿ ಸಮಾಜವಾದ ಕಟ್ಟುವ ಅನುಭವ.

ಮಾರ್ಕ್ಸ್‌ವಾದದ ವೈಜ್ಞಾನಿಕ ಸಿದ್ಧಾಂತದಿಂದ ಸಜ್ಜಿತರಾದ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಸಾಮಾಜಿಕ ಕ್ರಾಂತಿಗಳ ನೇತೃತ್ವ ವಹಿಸುತ್ತವೆ. ಏಕೆಂದರೆ ಈ ಸಿದ್ಧಾಂತ ಅವರಿಗೆ ಸಾಮಾಜಿಕ ಪರಿವರ್ತನೆಗಾಗಿ ಕಾರ್ಮಿಕ ವರ್ಗವನ್ನು, ರೈತಾಪಿ ವರ್ಗವನ್ನು, ಶ್ರಮಜೀವಿ ಸಮೂಹಗಳನ್ನು ಸಂಘಟಿಸುವ ಸಾಮರ್ಥ್ಯವನ್ನು ಕೊಡುತ್ತದೆ. ಆರ್ಥಿಕ ಹೋರಾಟಗಳನ್ನು ಮಾತ್ರವಲ್ಲ ಆಳುವ ವರ್ಗದೊಡನೆ ಸೈದ್ಧಾಂತಿಕ ರಂಗದಲ್ಲೂ ಸಮರ ಸಾಗಿಸಿ ಪ್ರತಿಯೊಂದು ದೇಶದ ರಾಜಕೀಯ ಸನ್ನಿವೇಶದಲ್ಲಿ ಮಧ್ಯಪ್ರವೇಶಿಸುವ ಸಾಮರ್ಥ್ಯ ನೀಡುತ್ತದೆ. ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ಮುನ್ನಡೆ ಬಯಸುವ ಎಲ್ಲಾ ಶಕ್ತಿಗಳನ್ನು ಅಣಿನೆರೆಸಲು ಅವರಿಗೆ ಸಾಧ್ಯವಾಗುತ್ತದೆ. ಕಮ್ಯುನಿಸ್ಟರು ಹೇಳುವ ಕಾರ್ಮಿಕ ವರ್ಗದ ನೇತೃತ್ವದ ಪಾತ್ರವನ್ನು ಹೇರಲು ಸಾಧ್ಯವಿಲ್ಲ, ಶ್ರಮಜೀವಿ ವರ್ಗಗಳ ಹಿತಾಸಕ್ತಿಗಳನ್ನು, ರಾಷ್ಟ್ರೀಯ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಹೋರಾಟಗಳ ಮೂಲಕ ಅದನ್ನು ಗೆದ್ದುಕೊಳ್ಳಬೇಕು.

ವಿಚಾರ ಸಂಕಿರಣ ತನ್ನ ಮುಂದೆ ಇಟ್ಟುಕೊಂಡಿದ್ದ ಗುರಿಗಳನ್ನು ಈಡೇರಿಸಿಕೊಂಡಿತು. ಈ ಯಶಸ್ಸು ಸಮಾಜವಾದಕ್ಕಾಗಿ ಸಮರವನ್ನು ಮುಂದುವರೆಸುವ ಸ್ಫೂರ್ತಿಯನ್ನು, ವಿಶ್ವಾಸವನ್ನು ಎತ್ತಿ ತುಂಬಿದೆ. ಇಂತಹ ಪ್ರಯತ್ನಗಳನ್ನು ಮುಂದುವರೆಸಬೇಕು, ಪರಸ್ಪರ ವಿಚಾರ ವಿನಿಮಯ ಪರಸ್ಪರರ ಅನುಭವಗಳಿಂದ ಪಾಠ ಕಲಿಯಲು, ಸಾಮ್ರಾಜ್ಯಶಾಹಿಗಳ, ಪ್ರತಿಗಾಮಿಗಳ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಇತಿಹಾಸದ ದಿಕ್ಕು ಬದಲಿಸುವ ಅವರ ಪ್ರಯತ್ನಗಳನ್ನು ವಿಫಲಗೊಳಿಸಿ ಸಮಾಜವಾದದ ಗುರಿ ಸಾಧನೆಯತ್ತ ಮುನ್ನುಗ್ಗಲು ಸಾಧ್ಯವಾಗುತ್ತದೆ ಎಂದು ಎಲ್ಲಾ ಸದಸ್ಯರೂ ನಿರ್ಧರಿಸಿದರು.

ಕಮ್ಯುನಿಸ್ಟ್ ಆಂದೋಲನದ ಇತಿಹಾಸದ ಒಂದು ನಿರ್ಣಾಯಕ ಸನ್ನಿವೇಶದಲ್ಲಿ ನಡೆದಿರುವ ಈ ವಿಚಾರ ಸಂಕಿರಣ ಒಂದು ಐತಿಹಾಸಿಕ ಘಟನೆ ಎಂದು ವಿಶ್ವಾಸದಿಂದ ಹೇಳಬಲ್ಲೆ.

ಭಾರತದ ಕಾರ್ಮಿಕ ವರ್ಗದ ಕಾಣಿಕೆ
ರಷ್ಯನ್ ಕಮ್ಯುನಿಸ್ಟರ ಶುಭಾಶಯ

ರಷ್ಯನ್ ಕಮ್ಯುನಿಸ್ಟ್ ಕಾರ್ಮಿಕ ಪಕ್ಷದ ವಿಕ್ಟರ್ ಆಂಪಿಲೋವ್ ಈ ಕೆಳಗಿನ ಸಂದೇಶ ಕಳಿಸಿದ್ದಾರೆ -

"ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳನ್ನು ಒಟ್ಟಿಗೆ ತರುವ ಮುತುವರ್ಜಿಯನ್ನು ಭಾರತದ ಕಾರ್ಮಿಕ ವರ್ಗ ಹಾಗೂ ಅದರ ಪಕ್ಷ ವಹಿಸಿರುವುದು ಒಂದು ಪ್ರೋತ್ಸಾಹದಾಯಕ ಬೆಳವಣಿಗೆ. ಮಾರ್ಕ್ಸ್‌ವಾದದ, ಕಮ್ಯುನಿಸಂನ, ಕಮ್ಯುನಿಸ್ಟ್ ಸೌಹಾರ್ದತೆಯ ಬಾವುಟ ನಿರ್ಭಯವಾಗಿ ಹಾರಾಡುತ್ತಿರುವುದರ, ಎಲ್ಲಾ ದೇಶಗಳ ಶ್ರಮಜೀವಿ ಜನಗಳ ಬಲವಾದ ಆಕಾಂಕ್ಷೆಯನ್ನು ಪ್ರತಿಬಿಂಬಿಸುವ ಇನ್ನೊಂದು ಉತ್ತಮ ಉದಾಹರಣೆ. ಕಲ್ಕತ್ತಾ ವಿಚಾರ ಸಂಕಿರಣ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ಒಂದು ದುರಂತಕಾರೀ ಹಾಗೂ ವಿನಾಶಕಾರೀ ಹಿನ್ನಡೆ ಹೊಂದಿರುವ ಅವಧಿಯಲ್ಲಿ ಕಾರ್ಮಿಕ ವರ್ಗದ ಸಿದ್ಧಾಂತವನ್ನು ಎತ್ತಿಹಿಡಿದು ಭಾರೀ ಯಶಸ್ಸು ಗಳಿಸ್ತದೆ ಎಂದು ನಾನು ಹಾರೈಸುತ್ತೇನೆ. ಕಲ್ಕತ್ತಾ ಸಭೆ ವೈಜ್ಞಾನಿಕ ಸಮಾಜವಾದದ ಸಾಧನೆಗೆ ನೆರವಾಗುವುದರಲ್ಲಿ ಸಂಶಯವಿಲ್ಲ".

ಅಯೋಧ್ಯಾ ಕಾಂಡ



ಕಾಂಗ್ರೆನವರಿಗೆ ಇನ್ನೂ ಬುದ್ಧಿ ಬಂದಿಲ್ಲವೇ?

ಆಧುನಿಕ "ಅಯೋಧ್ಯಾ ಕಾಂಡ"ದ ದುರಂತಮಯ ಘಟನೆಗಳು ಕೂಡಾ ಕಾಂಗ್ರೆಯನ್ನು ತನ್ನ ನಿಲುವುಗಳ ಬಗ್ಗೆ ಆತ್ಮವಿಮರ್ಶೆಗೆ ಹಚ್ಚಿಲ್ಲ. ಜಾತ್ಯಾತೀತತೆಯೆಂದರೆ ಭಾರತದ ಸಂದರ್ಭದಲ್ಲಿ "ಸರ್ವಧರ್ಮ ಸಮಭಾವ" ಎಂದು ಕೆಲವರು ವಾದಿಸುತ್ತಾರೆ. ಇನ್ನು ಕಾಂಗ್ರೆಸ್ಸಿಗರಂತೂ ಈ 'ಸರ್ವಧರ್ಮಸಮಭಾವ'ದ ಅರ್ಥ ಕೂಡಾ ಎಲ್ಲಾ ಧರ್ಮದ ಕೋಮುವಾದಿಗಳನ್ನು ಆಯಾಯ ಸಮಯದ ತನ್ನ ಅಗತ್ಯಕ್ಕನುಗುಣವಾಗಿ ತುಷ್ಟೀಕರಿಸುವುದು. ಇದಕ್ಕೆ ಇತ್ತೀಚಿನ ಎರಡು ಉದಾಹರಣೆಗಳನ್ನು ಇಲ್ಲಿವೆ.

ಚುನಾವಣೆ ಬಂದಾಗ ಶುಕ್ರವಾರದ ಮಹತ್ವ

ಕೇರಳದ ಯು.ಡಿ.ಎಫ್. ಸರಕಾರ ಜಾತ್ಯತೀತ ನೀತಿಗೆ ಮತ್ತೊಂದು ಪ್ರಹಾರ ನೀಡಿತು- ಅಲ್ಲಿಯ ಶಿಕ್ಷಣ ಸಚಿವಾಲಯ ಶೇ 50 ಕ್ಕಿಂತ ಹೆಚ್ಚು ಮುಸ್ಲಿಂ ವಿದ್ಯಾರ್ಥಿಗಳಿರುವ ಶಾಲೆಗಳಿಗೆ ರವಿವಾರದ ಬದಲು ಶುಕ್ರವಾರ ರಜಾ ದಿನ ಎಂದು ಇತ್ತೀಚೆಗೆ ನಿರ್ಧರಿಸಿತು. ಅದಕ್ಕೆ ಕೊಟ್ಟ ಕಾರಣ ಶುಕ್ರವಾರ ಮುಸಲ್ಮಾನರಿಗೆ ಪ್ರಾರ್ಥನಾ ದಿನ

ಏಕೆ ಈ ತರಾತುರಿಯ ನಿರ್ಣಯ? ಈ ರಾಜ್ಯದ ಒಟ್ಟಪಾಳಂ ಲೋಕಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲು ಸಿದ್ಧತೆ ಸಾಗಿತ್ತು. ಕಾಂಗ್ರೆ ಸೋಲುವ ಸಕಲ ಲಕ್ಷಣಗಳೂ ಇದ್ದವು. ಮುಸ್ಲಿಂ ಮತ ತಮಗೆ ದೊರೆಯಲಿ ಎಂದು ಈ ಆಜ್ಞೆ ಹೊರಡಿಸಿತು. ಆದರೂ ಚುನಾವಣೆ ಎದುರಿಸುವ ಧೈರ್ಯ ಯು.ಡಿ.ಎಫ್.ಗೆ ಬರಲಿಲ್ಲ. ಚುನಾವಣಾ ಆಯೋಗದ ಕುಂಟು ನೆಪಹೂಡಿ ಚುನಾವಣೆಯನ್ನು ಮುಂದೂಡುವಂತೆ ಈಗ ಮಾಡಲಾಗಿದೆ.

ಅದಿರಲಿ, ಸರಕಾರ ನಡೆಸುವ ಶಾಲೆಗಳಲ್ಲಿ ದೈನಂದಿನ ಕಲಾಪಗಳಲ್ಲಿ ಧರ್ಮದ, ಜಾತಿಯ ಹೆಸರಲ್ಲಿ ವ್ಯತ್ಯಾಸ ಮಾಡಲಾಗದು, ಯಾವುದೇ ರಿಯಾಯ್ತಿ ನೀಡಲಾಗದು. ಏಕೆಂದರೆ ಹೀಗೆ ಮಾಡಿದರೆ ಧರ್ಮ ಬೇರೆ ಪ್ರಭುತ್ವ ಬೇರೆ' ಎಂಬ ಜಾತ್ಯಾತೀತ ನಿಲುವನ್ನು ಉಲ್ಲಂಘಿಸಿದಂತೆ. ಆದರೆ ಕಾಂಗ್ರೆಸ್(ಐ)ಗೆ ತನ್ನ ಓಟಿನ ಸ್ವಾರ್ಥದ ಈ ಸಮಯಸಾಧಕ ನಿಲುವಿನಿಂದ ಬಿಜೆಪಿಗೆ ಬಹುಸಂಖ್ಯಾತ ಕೋಮುವಾದವನ್ನು ಹಬ್ಬಿಸಿ ಡಿಸೆಂಬರ್ 6 ರ ಘಟನೆ ನಡೆಯುವಂತಾಯಿತು ಎಂದು ಇನ್ನೂ ಅರ್ಥವಾದಂತಿಲ್ಲ.

ಶಂಕರಾಚಾರ್ಯರ ಅಡಿದಾವರೆಗಳಲ್ಲಿ!

"ಸರ್ವಧರ್ಮ ಸಮಭಾವ"ದ ಬ್ಯಾಲೆನ್ಸ್ ಕಾದುಕೊಳ್ಳಲು ಅತ್ತ ನೆರೆರಾಜ್ಯ ತಮಿಳುನಾಡಿನ ಕಾಂಚೀಪುರಂನಲ್ಲಿ ದೇಶದ ಪ್ರಧಾನಿ ಈ ಕಾಂಗ್ರೆಸ ಅಧ್ಯಕ್ಷ ನರಸಿಂಹರಾವ್ ಮತ್ತೊಂದು ಮೇಲ್ಪಂಕ್ತಿ ಹಾಕಿಕೊಟ್ಟಿತು. ಕಾಂಗ್ರೆಸ ಬ್ರಾಂಡಿನ ಜಾತ್ಯತೀತತೆಯ ಇನ್ನೊಂದು ರೂಪವನ್ನು ತೋರಿದರು.

ಮೇ 7 ರಂದು ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯರ ಶತಾಬ್ದಿ ಸಮಾರಂಭದಲ್ಲಿ ಮಾತನಾಡುತ್ತಾ ಈ ಪೀಠದಲ್ಲಿ ವೈದಿಕ ಅಧ್ಯಯನ ಕೇಂದ್ರಕ್ಕಾಗಿ ತಮ್ಮ ಸರಕಾರ 5 ಕೋಟಿ ರೂಗಳ ಗ್ರಾಂಟ್ ನೀಡುವುದಾಗಿ ಘೋಷಿಸಿದರು. ಈ ಧಾರ್ಮಿಕ ಸಂಸ್ಥೆ ಆರಂಭಿಸಲಿರುವ ಅಧ್ಯಯನ ಸಂಸ್ಥೆಗೆ ಒಂದು ವಿಶ್ವವಿದ್ಯಾಲಯವೆಂಬ ಮಾನ್ಯತೆ ನೀಡುವುದಾಗಿಯೂ ಘೋಷಿಸಿದರು. ಕುತೂಹಲದ ಸಂಗತಿಯೆಂದರೆ ಈ ಸಂಸ್ಥೆಯನ್ನು ಕಂಚಿ ಪೀಠ ದೇಶದ ಒಬ್ಬ ದೊಡ್ಡ ಬಂಡವಾಳಶಾಹಿ ಹಿಂದುಜಾ ಟ್ರಸ್ಟ್‌ನ ಹಣಕಾಸು ನೆರವಿನಿಂದ ಸ್ಥಾಪಿಸುತ್ತಿದೆ. ಹಿಂದುಜಾ ಮನೆತನದ ಒಬ್ಬ ವ್ಯಕ್ತಿ ಇದಕ್ಕೆ ಸಂಬಂಧ ಕಾಗದ ಪತ್ರಗಳನ್ನು ಪ್ರಧಾನಮಂತ್ರಿಗಳಿಗೆ ಒಪ್ಪಿಸಿದ.

ಇಡೀ ದೇಶಕ್ಕೆ ದೂರದರ್ಶನದ ಮೂಲಕ ನೇರಪ್ರಸಾರ ಮಾಡಿದ ಈ ಸಮಾರಂಭದಲ್ಲಿ ಪ್ರಧಾನಿಗಳು ಭಾವುಕರಾಗಿ ಮಾತನಾಡುತ್ತಾ ಹೇಗೆ ಪರಮಾಚಾರ್ಯರು ತನಗೆ, ಇಂದಿರಾಗಾಂಧಿಯವರಿಗೆ, ರಾಜೀವ್‌ಗಾಂಧಿಯವರಿಗೆ ಕೇಳಿದಾಗಲೆಲ್ಲಾ ಆಶೀರ್ವಾದ ನೀಡಿದರು ಎಂದು ತಿಳಿಸಿದರು. ಜೂನಿಯರ್ ಪೀಠಾಧಿಪತಿ ಜಯೇಂದ್ರ ಸರಸ್ವತಿಯವರಿಗೂ ಧೋಪರಾಕು ಹೇಳಿದರು. ಈತ ಬಾಬ್ರಿಮಸೀದಿ ಇದ್ದಲ್ಲೇ ದೇವಸ್ಥಾನ ಕಟ್ಟಬೇಕೆಂದ ವ್ಯಕ್ತಿ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಿ, ಡಿಸೆಂಬರ್ 6 ರಂದು ಕರಸೇವಕರಿಗೆ ಪೂರ್ಣ ಸ್ವಾತಂತ್ರ್ಯ ಏಕೆ ಸಿಕ್ಕಿತು ಎಂಬುದು ಸ್ವಲ್ಪ ಸ್ವಲ್ಪ ಅರ್ಥವಾಗುತ್ತದೆಯಲ್ಲವೇ?

ಇದೀಗ ಕಾಂಗ್ರೆಸ ಜಾತ್ಯತೀತತೆ, ಸರ್ವಧರ್ಮಸಮಭಾವ ಅಂದರೆ ಅಧಿಕಾರದಲ್ಲಿರಲು ಯಾವುದೇ ಬ್ರಾಂಡಿನ ಕೋಮುವಾದಿಗಳ ತುಷ್ಟೀಕರಣ- ಬಹುಸಂಖ್ಯಾತ ಓಟ್‌ಬ್ಯಾಂಕ್‌ಗಿಟ್ಟಿಸಲು ಬಿಜೆಪಿಯೊಂದಿಗೆ ಈ ಸ್ಪರ್ಧೆಯ ದುಷ್ಪರಿಣಾಮ ಎದುರಿಸಬೇಕಾದ್ದು ಈ ದೇಶದ ಜನಸಾಮಾನ್ಯರು ಎಂದು ಡಿಸೆಂಬರ್ 6 ರ ನಂತರ ಸಾವಿರಾರು ಜನರ ಬಲಿ ತೆಗೆದುಕೊಂಡ ದುರಂತದಿಂದಲೂ ಈ ಶತಮಾನ ಕಂಡ ಪಕ್ಷದ ಅರಿವಿಗೆ ಬಂದಿಲ್ಲವೋ ಅಥವಾ ಅಧಿಕಾರ ಸ್ಪರ್ಧೆಯಲ್ಲಿ ಇವೆಲ್ಲಾ ಗೌಣವೆಂದು ಈಗಲೂ ಅದು ನಂಬಿದೆಯೋ?

ಮತಾಂಧರೆ, ಇದು ನಿಮಗೆ ಗೊತ್ತೇ?

ಮೊಗಲ್ ಆಳ್ವಿಕೆಯಲ್ಲಿ ಸಾಮಾನ್ಯವಾಗಿ ಹಿಂದೂ ಸೇನೆಗಳು ಮುಸ್ಲಿಂ ಸೇನೆಗಳೊಡನೆ ಸೆಣಸಿದವೇ?

ಇಲ್ಲ ಹೆಚ್ಚಿನವು ಮಿಶ್ರ ಯುದ್ಧಗಳು. ಅಂದರೆ ಎರಡೂ ಕಡೆ ಹಿಂದೂಗಳೂ ಇದ್ದರು, ಮುಸ್ಲಿಮರೂ ಇದ್ದರು. ಮುಸ್ಲಿಂ ರಾಜರುಗಳ ಸೇನೆಗಳಲ್ಲಿ ಹಿಂದೂ ಸೇನಾಧಿಪತಿಗಳಿದ್ದರು. ಹಿಂದೂ ರಾಜರುಗಳ ಮುಸ್ಲಿಂ ಸೇನಾಧಿಪತಿಗಳಿದ್ದರು. ಔರಾಂಗಜೇಬ ಅತ್ಯಂತ ಮತಾಂಧ ಮೊಗಲ್ ಸಾಮ್ರಾಟ್ ಎನ್ನಲಾಗುತ್ತಿದೆ. ಆದರೆ ಅವನ ಸೇನೆಯ ಬಹಳಷ್ಟು ಯುದ್ಧಗಳಿಗೆ ನೇತೃತ್ವ ನೀಡಿದವರು ಹಿಂದೂ ಸೇನಾಧಿಪತಿಗಳು. ಶಿವಾಜಿ ಹಿಂದೂ ವೀರ ಎನ್ನಲಾಗುತ್ತಿದೆ. ಆದರೆ ಆತನ ಸೇನೆಯಲ್ಲಿ ಮುಸ್ಲಿಮರು ಪ್ರಮುಖ ದಂಡನಾಯಕರುಗಳಾಗಿದ್ದರು.

• *ಹಿಂದೂ ರಾಜರುಗಳಾದ ಬಿಕಾನೇರ್‌ನ ರಾಜ ಮಾರವಾಡದ ರಾಜನೊಂದಿಗೆ ಯುದ್ಧದಲ್ಲಿ ಸೋತಾಗ ಆತನ ಪರಿವಾರದವರು ಎಲ್ಲಿ ಆಶ್ರಯ ಪಡೆದರು?*

ಶೇರ್‌ಶಾಹ ಸೂರಿಯಲ್ಲಿ- ಒಬ್ಬ ಮುಸ್ಲಿಂ ಸುಲ್ತಾನ್.

ಶೇರ್‌ಶಾಹ ಸೂರಿ ಹುಮಾಯೂನ್‌ನನ್ನು ಸೋಲಿಸಿದಾಗ ಆತ ಎಲ್ಲಿ ಆಶ್ರಯ ಪಡೆದ?

ಅಮರ್‌ಕೋಟಾದ ರಾಜ್‌ನಲ್ಲಿ. ಅಕ್ಬರ್ ಹುಟ್ಟಿದ್ದು ಇಲ್ಲೇ.

ರಾಣಾ ಪ್ರತಾಪನ ಪರವಾಗಿ ಒಬ್ಬ ಸೇನಾಧಿಪತಿ ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ ಮಡಿದ. ಈಗಲೂ ರಾಜಸ್ಥಾನದಲ್ಲಿ ಆವನ ಹೆಸರನ್ನು ಪ್ರೀತಿಯಿಂದ ನೆನಪಿಸಿಕೊಳ್ಳಲಾಗುತ್ತಿದೆ. ಆತನ ಹೆಸರೇನು ನಿಮಗೆ ಗೊತ್ತೆ?

ಹಕೀಂ ಖಾನ್ ಸೂರ್. ತನ್ನ ಅಫ್‌ಘಾನ್ ಸೈನಿಕರೊಂದಿಗೆ ರಾಣಾ ಪ್ರತಾಪನಿಗಾಗಿ ಆತ ಅಕ್ಬರ್‌ನ ಸೇನೆಗಳೆದುರು ವೀರಾವೇಶದಿಂದ ಹೋರಾಡಿದ.

ಇವು ಕೋಮುವಾದಕ್ಕೆ ಇತಿಹಾಸಿಕದ ಉತ್ತರ. ವಾಸ್ತವವಾಗಿ ಮಧ್ಯಯುಗದಲ್ಲಿ ಯಾವುದೇ ಯುದ್ಧ ಧರ್ಮದ ಆಧಾರದ ಮೇಲೆ ನಡೆಯಲೇ ಇಲ್ಲ. ಅವೆಲ್ಲಾ ರಾಜರುಗಳ, ಸುಲ್ತಾನರುಗಳ ಯುದ್ಧಗಳಷ್ಟೇ.

ಕುರಿಕಾಯುವುದಕ್ಕೆ ತೋಳನ ನೇಮಕ

ಡಾ. ಸಾಹಾ ಎಂಬ ಎಡಪಂಥೀಯ ವಿಜ್ಞಾನಿಯ ಸ್ಮರಣೆಗೆ ಬಿಜೆಪಿ ಅಧ್ಯಕ್ಷರ ನೇತೃತ್ವ

ಪ್ರೊಫೆಸರ್ ಮೇಘನಾದ್ ಸಾಹಾ ಒಬ್ಬರು ವಿಶ್ವವಿಖ್ಯಾತ ಭೌತ ಶಾಸ್ತ್ರಜ್ಞರಾಗಿದ್ದವರು. ಆಧುನಿಕ ಖಗೋಳ ಭೌತಶಾಸ್ತ್ರದ ಸ್ಥಾಪಕರುಗಳಲ್ಲಿ ಅವರೊಬ್ಬರು. ಅಷ್ಟೇ ಅಲ್ಲ, ಭಾರತದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಸ್ಥಾಪನೆಗೆ ಸಮರ ನಡೆಸಿದವರೆಂಬ ಖ್ಯಾತಿ ಹೊಂದಿದ ವಿಜ್ಞಾನಿ. ಈ ವರ್ಷ ಅವರ ಜನ್ಮಶತಾಬ್ಧಿ ವರ್ಷ. ಆದ್ದರಿಂದ ಹಲವಾರು ಸಂಘಟನೆಗಳು ಶತಾಬ್ದಿ ಆಚರಣೆಗೆ ಮುಂದೆ ಬಂದಿವೆ. ಇಂತಹ ಒಂದು ಶತಾಬ್ಧಿ ಆಚರಣಾ ಸಮಿತಿ ಈಗ ವಿವಾದದ ಬಿರುಗಾಳಿಗೆ ಸಿಲುಕಿದೆ. ಪ್ರೋಫೆಸರ್ ಸಾಹಾರವರು 1924 ರಿಂದ 1938ರ ನಡುವೆ ಅಧ್ಯಾಪನ ಮಾಡಿದ ಅಲಹಾಬಾದ್ ವಿಶ್ವವಿದ್ಯಾಲಯ ಒಂದು ಶತಾಬ್ದಿ ಆಚರಣಾ ಸಮಿತಿ ರಚಿಸಿತು. ವಿಶ್ವವಿದ್ಯಾಲಯದ ಉಪ ಕುಲಪತಿಯವರು ಬಿಜೆಪಿ ಅಧ್ಯಕ್ಷ ಡಾ.ಮುರಳಿ ಮನೋಹರ ಜೋಷಿಯವರನ್ನು "ಸಾಹಾ ಶತಾಬ್ಧಿ ಅಂತರ್‌ರಾಷ್ಟ್ರೀಯ ವರ್ಣ ಪಟಲ ವಿಜ್ಞಾನ ಹಾಗೂ ಖಗೋಳ ಭೌತ ಶಾಸ್ತ್ರ ವಿಚಾರ ಸಂಕಿರಣ"ಕ್ಕೆ ನಿರ್ದೇಶಕರಾಗಿ ನೇಮಿಸಿದರು.

ಹಲವು ವಿಜ್ಞಾನಿಗಳು ಈ ನೇಮಕವನ್ನು ಪ್ರತಿಭಟಿಸಿದ್ದಾರೆ. "ಶೈಕ್ಷಣಿಕ ಸಮುದಾಯದ ಸದಸ್ಯರಿಗೊಂದು ಬಹಿರಂಗ ಪತ್ರ"ಕ್ಕೆ ಕಲ್ಕತ್ತಾ, ಬೆಂಗಳೂರುಗಳಲ್ಲಿ ನೂರಕ್ಕೂ ಹೆಚ್ಚು ಸಹಿಗಳು ದೊರೆತಿವೆ.

ಜೋಷಿಯವರ ಸಮರ್ಥಕರು ಅವರು ಭೌತಶಾಸ್ತ್ರ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿದ್ದರಿಂದ ಸಾಹಾ ಅವರು ಬಳಸುತ್ತಿದ್ದ ಕುಲುಮೆಯನ್ನು "ಮಹಾನ್ ಭಕ್ತಿ"ಯಿಂದ ಕಾದುಕೊಂಡು ಬಂದಿರುವುದರಿಂದ ಈ ನೇಮಕಕ್ಕೆ ಸಕಲ ಅರ್ಹತೆ ಪಡೆದಿದ್ದಾರೆ ಎಂದು ವಾದಿಸುತ್ತಿದ್ದಾರೆ. ಆದರೆ ಡಾ.ಮುರಳಿ ಮನೋಹರ ಜೋಷಿಯವರು ಸಾಹಾರವರು ಯಾವ ವೈಜ್ಞಾನಿಕ ದೃಷ್ಟಿಕೋಣಕ್ಕಾಗಿ ಜೀವನವಿಡೀ ಶ್ರಮಿಸಿದರೋ ಅದನ್ನು ಅಷ್ಟೇ "ಮಹಾನ್ ಭಕ್ತಿ"ಯಿಂದ ನಾಶ ಮಾಡಿದರು, ದೇಶವನ್ನು ಮಧ್ಯಯುಗದ ಅಂಧಕಾರಕ್ಕೆ ತಳ್ಳಿದವರು ಎಂಬ ಸಂಗತಿಯನ್ನು ಮಾತ್ರ ಅವರು ಹೇಳುತ್ತಿಲ್ಲ.

ಈ ಭಾವನೆ ಹಲವು ರಂಗಗಳಲ್ಲಿ ಪ್ರತಿಧ್ವನಿತವಾಗಿದೆ. ವೈಜ್ಞಾನಿಕ ಕೈಗಾರಿಕಾ ಸಂಶೋಧನಾ ಸಂಸ್ಥೆ(ಸಿಎಸ್‌ಐಆರ್)ನ ಮಹಾ ನಿರ್ದೇಶಕರ ಹಾಗೂ ಹಿಂದೆ ಡಾ. ಜೋಷಿಯವರ ಸಹಯೋಗಿಯಾಗಿದ್ದ ಪ್ರೊ. ಎಸ್.ಕೆ. ಜೋಷಿ ಏನನ್ನುತ್ತಾರೆ ಕೇಳಿ - "ಮುರಳಿ ಮನೋಹರ ಜೋಷಿ ಮತ್ತು ಬಿಜೆಪಿಯ ಪ್ರಚಾರ ಸಾಹಾರವರು ಯಾವ ಮೌಲ್ಯಗಳಿಗಾಗಿ ಶ್ರಮಿಸಿದ್ದರೋ ಅದಕ್ಕೆ ಸಂಪೂರ್ಣ ವಿರುದ್ಧವಾದದ್ದು" ಎನ್ನುತ್ತಾರೆ ಅವರು. ಪ್ರಖ್ಯಾತ ಖಗೋಳಶಾಸ್ತ್ರಜ್ಞ ಪ್ರೋ. ಗೋವಿಂದಸ್ವರೂಪ್ ಕೂಡಾ ಇದೇ ಅಭಿಪ್ರಾಯ ಪಟ್ಟಿದ್ದಾರೆ. ಸಾಹಾ ಒಂದು ಬಲಶಾಲಿ ದೇಶ ಕಟ್ಟಲು ದುಡಿದರು. ಆದರೆ ಜೋಷಿ ಮತ್ತಿತರರು ಕೆಲಸ ಮಾಡುತ್ತಿರುವುದು ಅದರ ವಿರುದ್ಧವಾಗಿಯೇ ಎನ್ನುತ್ತಾರೆ ಇವರು ಕೂಡಾ. "ಸಮ್ಮೇಳನದ ನಿರ್ದೇಶಕರು ಕನಿಷ್ಟ ಸಾಹಾರವರ ಜೀವನ ಹಾಗೂ ದುಡಿಮೆಯ ಬಗ್ಗೆ ಆಳವಾದ ಅಧ್ಯಯನ ಮಾಡಿದವರಾದರೂ ಆಗಿರಬೇಕು. ಪ್ರೋ.ಜೋಷಿಯಂತೂ ಇದರಿಂದ ಬಹಳ ದೂರದಲ್ಲಿದ್ದಾರೆ ಎಂದು ನನಗನಿಸುತ್ತದೆ" ಎಂದಿದ್ದಾರೆ ಇನ್ನೊಬ್ಬ ಖ್ಯಾತ ವಿಜ್ಞಾನಿ ಪ್ರೋ.ಎಂ.ಜಿ.ಕೆ. ಮೆನನ್. 1952ರಲ್ಲಿ ಪ್ರೋ. ಸಾಹಾ ಚುನಾವಣೆಗೆ ನಿಂತಿದ್ದಾಗ ಅವರ ಚುನಾವಣಾ ಏಜೆಂಟರಾಗಿ ದುಡಿದಿದ್ದ ಈಗ ಒಬ್ಬ ಪ್ರಖ್ಯಾತ ಖಗೋಳ ಶಾಸ್ತ್ರಜ್ಞರಾಗಿರುವ ಪ್ರೊ. ಜೆ.ಸಿ. ಭಟ್ಟಚಾರ್ಯರ ಪ್ರಕಾರ "ಆಳವಾದ ಪಾಂಡಿತ್ಯ ಹಾಗೂ ನಿರ್ಭೀತತೆ ಅವರ ಪ್ರಮುಖ ಗುಣಗಳು. ಅವರು ಎಡಪಕ್ಷಗಳ ಬೆಂಬಲ ಪಡೆದ ಅಭ್ಯರ್ಥಿಯಾಗಿದ್ದರು. ಅವರು ಪ್ರತಿಪಾದಿಸಿದ್ದ ಕೈಗಾರಿಕಾಕರಣ. ತನ್ನ ಜೀವಮಾನವಿಡೀ ಅವರು ಧಾರ್ಮಿಕ ಕುರುಡುತನವನ್ನು ಖಂಡಿಸಿದ್ದರು."

ಪ್ರೋಫೆಸರ್ ಮೇಘನಾದ ಸಾಹಾ ಕೇವಲ ಒಬ್ಬ ಮಹಾನ್ ವಿಜ್ಞಾನಿಯಷ್ಟೇ ಅಲ್ಲ, ಒಬ್ಬ ಸ್ವಾತಂತ್ರ್ಯ ಹೋರಾಟಗಾರರೂ, ಅಂತರ್‌ರಾಷ್ಟ್ರೀಯವಾದಿಗಳೂ ಆಗಿದ್ದರು. ಅವರು 1930ರ ದಶಕದ ಕೊನೆಯಲ್ಲಿ ಬರೆದ "ತೈಲ ಮತ್ತು ಅದೃಶ್ಯ ಸಾಮ್ರಾಜ್ಯಶಾಹಿ" ಡಾ. ಜೋಷಿ ಮತ್ತು ಅವರ ಪಕ್ಷದಂತಹ ಉದಾರೀಕರಣದ, ಜಾಗತೀಕರಣದ ಭಕ್ತರುಗಳಿಗೆ ನೀಡಿರುವ ಎಚ್ಚರಿಕೆ. ಯೋಜನಾಬದ್ಧ ಅಭಿವೃದ್ಧಿ ಹಾಗೂ ಸಾರ್ವಜನಿಕ ವಲಯಕ್ಕಾಗಿ ಸೆಣಸಿದ್ದ ಪ್ರೋಫೆಸರ್ ಸಾಹಾರ ನೆನಪಿನಲ್ಲಿ ಮಾಡಬಹುದಾದ ಕನಿಷ್ಟ ಕೆಲಸವೆಂದರೆ ಸಾರ್ವಜನಿಕ ವಲಯದ ಅಂತ್ಯವಾಗಲಿ ಎಂದು ಹಾತೊರೆಯುತ್ತಿರುವ ಡಾ.ಜೋಷಿಯವರನ್ನು ಸಾಹಾ ಸ್ಮಾರಕ ಸಮಿತಿಗಳಿಂದ ದೂರವಿಡುವುದು.

ಡಾ.ಜೋಷಿಯಂತಹವರು ಇಂತಹ ಸಮಿತಿಗಳಲ್ಲಿರುವವುದು ಅಸಂಬದ್ಧವೆನಿಸುವುದು ಕೇವಲ ಇದೊಂದೇ ಕಾರಣಕ್ಕೆ ಅಲ್ಲ. ಕುರುಡು ನಂಬಿಕೆಗಳ ಬಗ್ಗೆ ಅವರ ನಿಲುವಿನ ಅಧ್ಯಯನ ಮಾಡಿದಾಗ ನಮಗೆ ಈ ಅಸಂಬದ್ಧತೆ ಇನ್ನೂ ಎದ್ದು ಕಾಣುತ್ತದೆ. ತಾರೀಖು ಪಟ್ಟಿ, ಪಂಚಾಂಗಗಳ ತಯಾರಿಕೆಗೆ ಅವರು ಸವಾಲು ಹಾಕುತ್ತಾ ಹೀಗಂದಿದ್ದರು - "ಗುರುತ್ವಾಕರ್ಷಣದ ನಿಯಮಗಳು ಹಾಗೂ ಗತಿಶೀಲತೆಯ ಪರಿಣಾಮವಾದ ಹಾಗೂ ದಿಕ್ಕುಬದಲಿಸದ ಕರಾರುವಕ್ಕಾದ ಚಲನೆಯನ್ನು ನಿರ್ಲಕ್ಷಿಸುವುದು ನಿಮ್ಮ ಹಠಮಾರಿತನವಲ್ಲವೇ, ಅದಕ್ಕೂ ಮಿಗಿಲಾಗಿ ಮೂರ್ಖತನವೇ ಎನ್ನಬಹುದಲ್ಲವೇ?" ಪಂಚಾಂಗ ತಯಾರಕರು ಅನುಸರಿಸುವ ಹಳಸಲು ನಿಯಮಗಳು ಹೇಗೆ ತಪ್ಪು ಎಂದು ತೋರಿಸಿಕೊಡುತ್ತಾ ಅವರು..... "ನಿಮ್ಮ ತಿಥಿಗಳ ಆರಂಭವೇ ತಪ್ಪಾಗಿರುವಾಗ, ಈ ತಪ್ಪು ಶತಮಾನಗಳಿಂದ ನಡೆಯುತ್ತಿರುವುದರಿಂದ ಶುಭ, ಅಶುಭ ಗಳಿಗೆಗಳ ನಿಮ್ಮ ಜ್ಯೋತಿಷ್ಯಶಾಸ್ತ್ರಕ್ಕೆ ಬುಡವೇ ಇಲ್ಲದಂತಾಗುತ್ತದೆ" ಎಂದಿದ್ದಾರೆ.

"ಎಲ್ಲವೂ ವೇದಗಳಲ್ಲಿವೆ" ಎಂದು ಆಗಾಗ ತಮಾಷೆಯಾಗಿ ಪ್ರೋಫೆಸರ್ ಸಾಹಾ ಗೇಲಿ ಮಾಡುತ್ತಿದ್ದರು. ಮಹಾಭಾರತದ ಪ್ರಕರಣಗಳ ಮೌಲಿಕತೆಯ ಬಗ್ಗೆ ಹೇಳುತ್ತಾ 1939ರಲ್ಲಿ ಸಾಹಾ ಹೀಗೆ ಬರೆದಿದ್ದರು - "ಭಾರತದಲ್ಲೇನು, ಇಡೀ ಪ್ರಾಚೀನ ಜಗತ್ತಿನಲ್ಲಿ ಸಮಯದ ಲೆಕ್ಕಾಚಾರ ಸಾಕಷ್ಟು ಅಭಿವೃದ್ಧಿ ಹೊಂದಿರಲಿಲ್ಲ ಎಂಬುದು ನಮಗೀಗ ಗೊತ್ತಿದೆ. ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಸಂಪ್ರದಾಯಗಳನ್ನು ದಾಖಲು ಮಾಡಿದ ಚಾರಿತ್ರಿಕ ವಿಧಾನವನ್ನು ನೋಡಿದರೆ ಅದನ್ನು ಬರೆದವರಿಗೆ ಚಂದ್ರನ ಚಲನೆಯ ಕರಾರುವಕ್ಕಾದ ವಿವರಗಳು, 2000 ವರ್ಷಗಳ ಹಿಂದಿನ ಘಟನೆಗಳ ದಿನಾಂಕಗಳು ಸರಿಯಾಗಿ ನೆನಪಿದ್ದವು ಎಂದು ಭಾವಿಸುವುದು ಪ್ರಾಚೀನ ಭಾರತೀಯರ ಜ್ಞಾನದ ಬಗ್ಗೆ ಅತಿಶಯೋಕ್ತಿಯಿಂದ ಮಾತನಾಡಿದಂತಾಗುತ್ತದೆ"

ಹೀಗೆಂದಿದ್ದ ಪ್ರೋಫೆಸರ್ ಸಾಹಾ ರಾಮಜನ್ಮಭೂಮಿ ಬಾಬ್ರಿಮಸೀದಿಯ ಜಾಗದಲ್ಲಿದೆ ಎಂದು ಸಂಘ ಪರಿವಾರದ "ಸಂಶೋಧನೆ"ಯ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎಂದು ಸುಲಭವಾಗಿ ಊಹಿಸಿಕೊಳ್ಳಬಹುದು.

ಪ್ರೋ. ಮೇಘನಾದ್ ಸಾಹಾರವರ ವೈಜ್ಞಾನಿಕ ಜೀವನ ದೃಷ್ಟಿ "ಹಿಂದುತ್ವ" ಸಿದ್ಧಾಂತಕ್ಕೆ ತದ್ವಿರುದ್ಧವಾದದ್ದು. ಸಾಹಾ ಶತಾಬ್ಧಿ ಸಮಿತಿಯಲ್ಲಿ ಡಾ. ಜೋಷಿಯವರ ಹೆಸರು ಇರುವುದು ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್‌ರ ಸ್ಮಾರಕ ಸಮಿತಿಯಲ್ಲಿ ನಾಝೀಗಳ ಹೆಸರು ಇರುವಷ್ಟೇ ಅಸಂಬದ್ಧ.

ಖಗೋಳ ಭೌತಶಾಸ್ತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಪ್ರೋಫೆಸರ್ ಎಂ.ಎನ್. ಸಾಹಾ ಮಹಾ ವಿಜ್ಞಾನಿಯಷ್ಟೇ ಅಲ್ಲ. ಅವರ ವೈಜ್ಞಾನಿಕ ಜೀವನ ದೃಷ್ಟಿಗೆ "ಹಿಂದುತ್ವ" ಸಿದ್ಧಾಂತವಂತೂ ಮೈಲಿಗಟ್ಟಲೆ ದೂರ.

ಸಾಹಾ ಶತಾಬ್ಧಿ ಸಮಿತಿಯಲ್ಲಿ ಡಾ. ಮುರಳಿ ಮನೋಹರ ಜೋಷಿಯವರ ಇರುವುದು ಪ್ರಸಿದ್ಧ ವಿಜ್ಞಾನಿ ಐನ್ ಸ್ಟೈನ್ ಸ್ಮಾರಕ ಸಮಿತಿಯಲ್ಲಿ ನಾಝೀಗಳ ಇರುವಷ್ಟೇ ಅಸಂಬದ್ಧ.

ಬಂಡವಾಳಶಾಹಿ ದೇಶಗಳಲ್ಲಿ ಹಾಲು ಜೇನು ಸುರಿಯುತ್ತಿದೆಯೇ?

-- ಪಿ. ರಾಮಚಂದ್ರನ್

ಜಗತ್ತಿನ ಜನರ ಸಮಸ್ಯೆಗಳಿಗೆ ಬಂಡವಾಳಶಾಹಿ ವ್ಯವಸ್ಥೆ ಯಾವುದೇ ಪರಿಹಾರ ಒದಗಿಸಲಾರದು. ಇದು ಕಳೆದ ಎರಡು ವರ್ಷಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾಗುತ್ತಿರುವ ಸಂಗತಿ ಎನ್ನುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನ ಕೆಲವು ಅಂಶಗಳ ಬಗ್ಗೆ ಪರಿಶೀಲಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಡಾ. ಪಿ. ರಾಮಚಂದ್ರನ್.

ಸಿಪಿಐ(ಎಂ) ಹದಿನಾಲ್ಕನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ಸೈದ್ಧಾಂತಿಕ ನಿರ್ಣಯದಲ್ಲಿ ಬಂಡವಾಳಶಾಹಿ ಬಿಕ್ಕಟ್ಟುಗಳ ಸರಮಾಲೆ ಗರ್ಭದಲ್ಲಿ ಹುದಿಗಿಸಿಕೊಂಡಿರುವ ವ್ಯವಸ್ಥೆ 20 ನೇ ಶತಮಾನದ ಬೆಳವಣಿಗೆಗಳು ಮತ್ತೆ ಮತ್ತೆ ಇದನ್ನು ಸಮರ್ಥಿಸಿವೆ ಎಂದಿತ್ತು. ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ಸನ್ನಿವೇಶದಲ್ಲಿ ಸಿಪಿಐ(ಎಂ)ನ ಈ ನಿಲುವನ್ನು ಕೆಲವರು 'ಅಳಿದು ಹೋದ ಸ್ವಪ್ನ ಸಾಮ್ರಾಜ್ಯದಲ್ಲಿ ವಿಹರಿಸುವುದು' ಎಂದರು. ಇನ್ನು ಕೆಲವರು ಗೊಡ್ಡುವಾದಕ್ಕಂಟಿಕೊಂಡಿರುವುದು ಎಂದರು. ಮುಕ್ತ ಮಾರುಕಟ್ಟೆ ಮೇಲೆ ಆಧಾರಿತ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿಗೆ ತುತ್ತಾಗದೆ, ಆಧುನಿಕ ಜಗತ್ತಿನ ಸಮಸ್ಯೆಗಳಿಗೆಲ್ಲಾ ಕಾಮಧೇನು ಎಂಬ ಭಾರಿ ಪ್ರಚಾರ ನಡೆದಿದೆ.

ಆದರೆ ಕಳೆದ 2 ವರ್ಷಗಳ ಅನುಭವ ಏನು? ಬಂಡವಾಳಶಾಹಿ ವ್ಯವಸ್ಥೆ ಅಪ್ಪಿರುವ ದೇಶಗಳಲ್ಲಿ ಹಾಲು ಜೇನು ಸುರಿಯುತ್ತಿದೆಯೇ?

ಬಂಡವಾಳಶಾಹಿ ವ್ಯವಸ್ಥೆಯ ಅತ್ಯಂತ ಕುರುಡು ಬೆಂಬಲಿಗರು ಸಹ ಅದು ಬಿಕ್ಕಟ್ಟು- ರಹಿತ ವ್ಯವಸ್ಥೆ ಎಂದು ಹೇಳುವಂತಹ ಸ್ಥಿತಿ ಇಂದು ಇಲ್ಲ. ಇಂದಿನ ಜಾಗತಿಕ ಬಂಡವಾಳಶಾಹಿ ಆರ್ಥಿಕ ತೀವ್ರ ಸಂಕಷ್ಟವಲ್ಲಿದೆ. ಹಿಂಜರಿತ, ಇಳಿತ ಇತ್ಯಾದಿಯಾಗಿ ಅದನ್ನು ಬಣ್ಣಿಸಲಾಗುತ್ತಿದೆ. ಆದರೆ ಅವರು ಅದನ್ನು 'ಬಿಕ್ಕಟ್ಟು' ಎಂದು ಕರೆಯುತ್ತಿಲ್ಲ ಅಷ್ಟೇ.

ಬಿಕ್ಕಟ್ಟು ಹಲವು ರೂಪಗಳಲ್ಲಿ ಕಾಣಿಸಿಕೊಂಡಿದೆ- ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲೂ ಸತತ ನಿರುದ್ಯೋಗದ ಹೆಚ್ಚಳ, ಒಟ್ಟು ಉತ್ಪಾದನೆಯಲ್ಲಿ ಕುಸಿತ, ಆರ್ಥಿಕ ಬೆಳವಣಿಗೆ ದರದಲ್ಲಿ ಕುಸಿತ, ದೈತ್ಯ ಬಹುರಾಷ್ಟ್ರೀಯ ಕೈಗಾರಿಕೆ ಬ್ಯಾಂಕುಗಳು ಮುಚ್ಚುತ್ತಿರುವುದು, ದಿವಾಳಿ ಎಳುತ್ತಿರುವ ಸಂಸ್ಥೆಗಳಲ್ಲಿ ಹೆಚ್ಚಳ, ಮಾರುಕಟ್ಟೆಯ ಹುಡುಕಾಟದಿಂದ ಆರಂಭವಾಗಿರುವ ವಾಣಿಜ್ಯ ಸಮರ, ಇವೆಲ್ಲದಕ್ಕಿಂತಲೂ ಹೆಚ್ಚಾಗಿ ಹದಗೆಡುತ್ತಿರುವ ಜನಸಾಮಾನ್ಯರ ಜೀವನ ಮಟ್ಟ.

ದೈತ್ಯ ಐಬಿಎಮ್‌ಗೂ ನಷ್ಟ

ನಿರುದ್ಯೋಗದಲ್ಲಿ ಹೆಚ್ಚಳ, ಕೈಗಾರಿಕಾ ಉತ್ಪಾದನೆಯಲ್ಲಿ ಕುಸಿತ ಕಣ್ಣಿಗೆ ಹೊಡೆಯುವಂತಿದೆ. ಅಮೇರಿಕದಲ್ಲಿ 90 ಲಕ್ಷ, ಬ್ರಿಟನ್, ಫ್ರಾನ್ಸ್‌ಗಳಲ್ಲಿ 30 ಲಕ್ಷ, ಯುರೋಪಿಯನ್ ಸಮುದಾಯದ ದೇಶದಲ್ಲಿ 170 ಲಕ್ಷ ನಿರುದ್ಯೋಗಿಗಳಿದ್ದಾರೆ. ಬಾಕ್ಸ್‌ನಲ್ಲಿ ಪ್ರಮುಖ ವಿಕಸಿತ ದೇಶದ ನಿರುದ್ಯೋಗದ ದರ ಹಾಗೂ ಕೈಗಾರಿಕಾ ಬೆಳವಣಿಗೆ ದರ ಕೊಡಲಾಗಿದೆ.

ಈಗಿನ ನಿರುದ್ಯೋಗದ ಸ್ವರೂಪ ವಿಶಿಷ್ಟವಾದದ್ದು. ಇದು ಆಗೊಮ್ಮೆ ಈಗೊಮ್ಮೆ ಆಗುವ ಹೆಚ್ಚಳ ಅಲ್ಲ. ಇದು ಹಲವಾರು ದೈತ್ಯ ಕಂಪೆನಿಗಳು ಕಾರ್ಮಿಕರನ್ನು ಹೊರಹಾಕುತ್ತಿರುವ, ಹಲವು ಘಟಕಗಳನ್ನು ಮುಚ್ಚುತ್ತಿರುವುದರ ನೇರ ಫಲ.

	ಕೈಗಾರಿಕಾ ಏರಿಕೆ ಉತ್ಪಾದನೆ -1992	ನಿರುದ್ಯೋಗದ ದರ (ಶೇಕಡಾ)
ಬೆಲ್ಜಿಯಂ	+0.6	7.8
ಕೆನಡಾ	+1.6	10.4
ಫ್ರಾನ್ಸ್	-3.7	10.0
ಜರ್ಮನಿ	-3.7	6.2
ಹಾಲಂಡ್	-5.7	4.4
ಇಟಲಿ	-4.4	10.1
ಜಪಾನ್	-8.2	2.1
ಸ್ಪೇನ್	-2.6	15.5
ಸ್ವೀಡನ್	-0.6	4.5
ಸ್ವಿಟ ಜರ್ ಲ್ಯಾಂಡ್	+1.7	2.2
ಇಂಗ್ಲೆಂಡ್	+0.6	9.2
ಅಮೆರಿಕಾ	+4.1	7.1

ದೈತ್ಯ ಕಂಪ್ಯೂಟರ್ ಕಂಪನಿಯಾದ ಐ.ಬಿ.ಎಮ್. 28 ಲಕ್ಷ ಡಾಲರುಗಳ ನಷ್ಟ ಅನುಭವಿಸುತ್ತಿದೆ. ಕಳೆದ ಎರಡು ವರ್ಷಗಳಿಂದ 448 ಸಾವಿರ ಉದ್ಯೋಗಿಗಳ ಕಡಿತ ಮಾಡಲು ನಿರ್ಧರಿಸಿದೆ. ಇದಕ್ಕೆ ಕಾರಣ ಕಂಪ್ಯೂಟರ್ ಮಾರಟ ವಿಶ್ವ ಮಾರುಕಟ್ಟೆಯಲ್ಲಿ ಕಡಿಮೆಯಾಗುತ್ತಿರುವುದು!

ಜನರಲ್ ಮೋಟಾರ್ಸ್ 45 ಲಕ್ಷ ಡಾಲರು ನಷ್ಟ ಅನುಭವಿಸುತ್ತಿದ್ದು 21 ಘಟಕಗಳನ್ನು ಮುಚ್ಚುತ್ತಿರುವುದರಿಂದ 74,000 ಉದ್ಯೋಗಿಗಳು ತಮ್ಮ ಜೀವನಾಂಶ ಕಳೆದುಕೊಳ್ಳಲಿದ್ದಾರೆ. ಬೋಯಿಂಗ್ ವಿಮಾನ ತಯಾರಿಸುವ ಕಂಪನಿ 28 ಸಾವಿರ ಕಾರ್ಮಿಕರನ್ನು ಕಡಿತಗೊಳಿಸಿದೆ. ಅಮೇರಿಕನ್ ರೈಲ್ವೇ 26 ಸಾವಿರ ಕಾರ್ಮಿಕರ ಕಡಿತಮಾಡಲಿದೆ.

ಯುರೋಪಿಯನ್ ಸಮುದಾಯ ದೇಶಗಳಲ್ಲಿ ಉಕ್ಕಿನ ಉತ್ಪಾದನೆ 30 ದಶಲಕ್ಷ ಟನ್‌ಗಳಿಂದ 15 ದಶಲಕ್ಷ ಟನ್‌ಗೆ ಕಡಿತ ಮಾಡದೇಕಾಗಿದೆ. ಅಮೇರಿಕನ್ ಮಾರುಕಟ್ಟೆ ಕಳೆದುಕೊಂಡಿರುವುದು ಉಕ್ಕಿಗೆ ಕಡಿಮೆಯಾದ ಬೇಡಿಕೆಯಿಂದ [illegible] ವಿಸಿದೆ. ಇದರಿಂದಾಗಿ ಜರ್ಮನಿಯಲ್ಲಿ 55 ಸಾವಿರ, ಫ್ರಾನ್ಸ್‌ನಲ್ಲಿ 53 ಸಾವಿರ ಉಕ್ಕಿನ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.

ಜಪಾನಿ ನಿರುದ್ಯೋಗ ಸದ್ಯಕ್ಕೆ ಶೇಕಡಾ 2 ಇದ್ದರೂ, ವಿದ್ಯುತ್, ಎಲೆಕ್ಟ್ರಾನಿಕ್ ಕಾರು ಕೈಗಾರಿಕೆಗಳಲ್ಲಿ ತೀವ್ರ ಮಾರುಕಟ್ಟೆಯ ಅಭಾವವನ್ನು ಜಪಾನ್ ಎದುರಿಸುತ್ತಿದೆ. ಟೋಯೋಟಾ, ನಿಸ್ಸಾನ್‌ರವರ ಭಾರೀ ಕಂಪನಿಗಳ ರಫ್ತು 9, ಶೇಕಡಾ 9.5 ರಿಂದ 13.7 ರಷ್ಟು ಕುಸಿದಿದೆ.

ಉದ್ಯೋಗ ಸೃಷ್ಟಿಸದ ಬೆಳವಣಿಗೆ

ಅಮೇರಿಕ ಸೇರಿದಂತೆ ಕೆಲವು ದೇಶಗಳಲ್ಲಿ ಆರ್ಥಿಕ ಹಿಂಜರಿತ ಕಡಿಮೆಯಾಗುತ್ತಿದೆ. ಕೈಗಾರಿಕಾ ಉತ್ಪಾದನೆ ಪುನಃಶ್ಚೇತನಗೊಳ್ಳುತ್ತಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಸ್ವಲ್ಪಮಟ್ಟಿಗೆ ಇದು ನಿಜ. ಆದರೆ ಈ ರೀತಿ ಪುನಃಶ್ಚೇತನವಾಗುವ ಸನ್ನಿವೇಶದಲ್ಲೂ ನಿರುದ್ಯೋಗದ ದರ ಕಡಿಮೆಯಾಗದಿರುವುದು ಈಗಿನ ಚೇತರಿಕೆಯ ವಿಶೇಷತೆ. 1981-82 ರ ಚೇತರಿಕೆ ಆರಂಭವಾದಾಗ ನಿರುದ್ಯೋಗ ಸಹ ಕಡಿಮೆಯಾಗಲಾರಂಭಿಸಿತ್ತು.

ಹಾಗಾದರೆ ಕೈಗಾರಿಕಾ ಪುನಃಶ್ಚೇತನ ಹೇಗೆ ಸಾಧ್ಯ? ಇದರ ಅರ್ಥ ಬಂಡವಾಳಶಾಹಿಗಳು ಉತ್ಪಾದನೆ ಹೆಚ್ಚಿಸಲು ಕಾರ್ಮಿಕರ ಶೋಷಣೆಯ ಮಟ್ಟ ಹೆಚ್ಚಿಸಲಿದ್ದಾರೆ. ಕಾರ್ಮಿಕರನ್ನು ದೀರ್ಘಾವಧಿ ಕೆಲಸ ಮಾಡಿಸಲಾಗುತ್ತಿದೆ. ಹೊಸ ತಂತ್ರಜ್ಞಾನ ಹೊಸ ಯಂತ್ರಗಳನ್ನು ಉತ್ಪಾದನೆಯಲ್ಲಿ ತೊಡಗಿಸಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಐ.ಬಿ.ಎಮ್., ಜನರಲ್ ಮೋಟಾರ್ಸ್ ಮುಂತಾದ ದೈತ್ಯ ಕಂಪನಿಗಳ ಯೋಜನೆ ಪ್ರಕಾರ ಹಲವಾರು ರೀತಿಯ ಉದ್ಯೋಗಗಳು ನಾಶವಾಗುವ ಸಂಭವ ಇದೆ.

ಬೆಳವಣಿಗೆ ದರ ಸಹ ಗಮನಾರ್ಹವಾಗಿ ಇಳಿದಿದೆ. 1991-92 ನಲ್ಲಿ ಆರ್ಥಿಕ ಬೆಳವಣಿಗೆ ದರ ವಿಕಸಿತ ಬಂಡವಾಳಶಾಹಿ ದೇಶಗಳಿಗೆ ಒಟ್ಟಾರೆಯಾಗಿ ಶೇಕಡಾ 1.5 ಅದರ ಹಿಂದಿನ ವರ್ಷ ಶೇಕಡಾ 2.6 ಇತ್ತು.

ಅಧ್ಯಕ್ಷ ಕ್ಲಿಂಟನ್ ಅವರ ಆರ್ಥಿಕ ಕಾರ್ಯಕ್ರಮ ಅಮೇರಿಕದ ಆರ್ಥಿಕ ಇನ್ನೂ ಚೇತರಿಸಿಕೊಳ್ಳದಿರುವುದರ ಸೂಚಿಯಾಗಿದೆ. ತೆರಿಗೆದರ ಏರಿಕೆ, ಕೊರತೆ ತುಂಬುವ ಪ್ರಯತ್ನ, ಸಾರ್ವಜನಿಕ ವೆಚ್ಚ ಹಾಗೂ ಉದ್ಯೋಗ ಸೃಷ್ಟಿಗೆ ಯತ್ನ ಮುಂತಾದುವು ಆರ್ಥಿಕ ಚೇತರಿಕೆ ಮಾಡುವ ಕ್ರಮಗಳು.

ವಾಣಿಜ್ಯ ಸಮರಗಳು

ಜಗತ್ತಿನ ಆರ್ಥಿಕ ಬಿಕ್ಕಟ್ಟಿಗೆ ವ್ಯಾಪಾರದಲ್ಲಿ ಆಗಿವ ನಕಾರಾತ್ಮಕ ಏರುಪೇರು ಕಾರಣ. ಇದು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಕಾರಣವೂ ಹೌದು. ಅದರ ಪರಿಣಾಮವೂ ಹೌದು.

ಎರಡನೇಯ ಮಹಾಯುದ್ಧದ ನಂತರ ಅಮೇರಿಕಾ ಬಂಡವಾಳಶಾಹಿ ಜಗತ್ತಿನಲ್ಲಿ ಪ್ರಮುಖ ಸ್ಥಾನಹೊಂದಿತ್ತು. ಆದರೆ 1970 ರ ದಶಕದಿಂದ ಅದರ ಸ್ಥಾನ ಇಳಿಯುತ್ತಿದೆ. ಜಗತ್ತಿನ ಒಟ್ಟು ಬಂಡವಾಳದಲ್ಲಿ ಅಮೇರಿಕದ ಬಂಡವಾಳ ಶೇಕಡಾ 50 ಇತ್ತು. ಅದು ಶೇಕಡಾ 30 ಕ್ಕೇ ಇಳಿದಿದೆ. ಜಪಾನಿನ ಪಾಲು ಶೇಕಡಾ 40 ಕ್ಕೇರಿದೆ. ಅಮೇರಿಕದಲ್ಲಿ ವಿದೇಶಿ ಬಂಡವಾಳ 1980 ರಿಂದೀಚೆಗೆ ನಾಲ್ಕು ಪಟ್ಟು ಏರಿದೆ. ಅಮೇರಿಕದ ವ್ಯಾಪಾರ ಕೊರತೆ, ಬಜೆಟ್ ಕೊರತೆ ಏರುತ್ತಲೇ ಇದೆ. ಅದು ಸಾವಿರಾರು ಶತಕೋಟಿ ಡಾಲರುಗಳ ಮಟ್ಟ ಮುಟ್ಟಿದೆ. ಎಲೆಕ್ಟ್ರಾನಿಕ್ಸ್, ಕಾರುಗಳು, ರೊಬೊಟ್‌ಗಳು, ಉಪಕರಣಗಳು ಮುಂತಾದ ಹಲವು ಕ್ಷೇತ್ರಗಳಲ್ಲಿ ಅಮೇರಿಕಾ ಮೊದಲನೆಯ ಸ್ಥಾನದಿಂದ 2 ನೇ ಅಥವಾ 3 ನೇ ಸ್ಥಾನಕ್ಕೆ ಕುಸಿದಿದೆ.

ಜಪಾನು ಹಾಗೂ ಯುರೋಪಿಯನ್ ಸಮುದಾಯದ ದೇಶಗಳು ಅಮೇರಿಕಕ್ಕೆ ಬಲವಾದ ಪ್ರತಿಸ್ಪರ್ಧಿಯಾಗಿದೆ. ಈ ಮೂರು ಬಣಗಳ ಪಾಲು ಜಗತ್ತಿನ ವ್ಯಾಪಾರದಲ್ಲಿ ಶೇಕಡಾ 80 ರಷ್ಟು. ಅಮೇರಿಕಾ, ಕೆನಡಾ, ಮೆಕ್ಸಿಕೋ ಮಾಡಿಕೊಂಡಿರುವ NAFTA ವಾಣಿಜ್ಯಕೂಟ, ಯುರೋಪಿಯನ್ ವಾಣಿಜ್ಯ ಕೂಟ ಇವೆಲ್ಲಾ ವಾಣಿಜ್ಯ ಸಮರಕ್ಕೆ ತಯಾರಿ.

ಜಪಾನಿ ಸವಾಲು

ಜಪಾನು ತನ್ನ ಭಾರಿ ರಫ್ತಿನಿಂದಾಗಿ ಅಮೆರಿಕಾ ಹಾಗೂ ಯುರೋಪಿಯನ್ ಕೂಟ ಎರಡಕ್ಕೂ ಪ್ರಮುಖ ಆರ್ಥಿಕ ಸವಾಲಾಗಿದೆ. ಜಪಾನು ಎರಡರ ಜತೆಗೆ ವ್ಯಾಪಾರದಲ್ಲಿ ಅವರಿಗಿಂತ ರಫ್ತು ಭಾರಿ ಹೆಚ್ಚಿದೆ. 107.6 ಶತಕೋಟಿ ಡಾಲರಿನಷ್ಟು ಅವರ ರಫ್ತುಗಳು ಆಮದಿಗಿಂತ ಹೆಚ್ಚಿವೆ. ಅಮೇರಿಕದ ಒಳಗೆ ಅಲ್ಲೇ ತಯಾರಾದ ಕಾರುಗಳು ಮಾರಾಟ ಶೇಕಡಾ 12 ರಷ್ಟು ಕುಸಿಯುತ್ತಿರುವಾಗ ಜಪಾನಿ ಕಾರುಗಳ ಮಾರಟವಾಗುತ್ತಿದೆ. ಅಧ್ಯಕ್ಷ ಬುಶ್ ಕಳೆದ ವರ್ಷ ಜಪಾನಿಗೆ ಭೇಟಿ ಕೊಟ್ಟಾಗ ದೈತ್ಯ ಕಾರು ಕಂಪನಿಗಳ ಹಿಂಡೇ ಅವರ ಜತೆಗೆ ಇತ್ತು. ಜಪಾನಿ ರಫ್ತುಗಳನ್ನು ಮಿತಿಗೊಳಿಸಲು ಅಮೇರಿಕಾ, ಯುರೋಪು ಎರಡೂ ಪ್ರಯತ್ನಿಸುತ್ತಿವೆ. ಅಮೇರಿಕಾ ಸೂಪರ್ 301 ಬೆದರಿಕೆ ಹಾಕುತ್ತಿದೆ.

ಕೃಷಿ ಸಬ್ಸಿಡಿ ವಿಚಾರದಲ್ಲಿ ಅಮೇರಿಕ ಯುರೋಪಿಯನ್ ಕೂಟಗಳ ನಡುವೆ ತೀವ್ರ ವಿರಸ

ಹಾಲು-ಜೇನು ಹರಿಯುತ್ತಿದೆ ಬಡದೇಶಗಳಿಂದ ಶ್ರೀಮಂತ ದೇಶಗಳ ಕಡೆಗೆ

ಬಂಡವಾಳಶಾಹಿಯ ಬಿಕ್ಕಟ್ಟಿನ ಪರಿಸ್ಥಿತಿಗೂ ನಮ್ಮಂತಹ ಬಡದೇಶಗಳಿರುವ ಮೂರನೇ ಜಗತ್ತಿನ ಶೋಚನೀಯ ಪರಿಸ್ಥಿತಿಗೂ ಬಹಳ ನಿಕಟ ಸಂಬಂಧವಿದೆ. ನಮ್ಮ ಆಳರಸರು ಯಾವುದೇ ಜನ-ವಿರೋಧಿ, ದುಡಿಯುವ ಜನ ವಿರೋಧಿ ಕ್ರಮ ತಂದಾಗ ಅದನ್ನು 'ಜಾಗತೀಕರಣ'ದ ಹೆಸರಲ್ಲಿ ಸಮರ್ಥಿಸಿಕೊಳ್ಳುವುದನ್ನು ನಾವು ಕಾಣುತ್ತಿದ್ದೇವೆ. ಅಂದರೆ ಒಂದು ಅರ್ಥದಲ್ಲಿ ಮುಂದುವರಿದ ಬಂಡವಾಳಶಾಹೀ ಜಗತ್ತಿನ ಆರ್ಥಿಕ ಸಮಸ್ಯೆಗಳ ಹೊರೆಯನ್ನು ನಾವು ಹೊರಬೇಕು ಎಂದು. ಮೂರನೇ ಜಗತ್ತಿನ ಪರಿಸ್ಥಿತಿ ಒಂದು ಕಡೆ ಬಂಡವಾಳಶಾಹಿಯ ಒಟ್ಟು ಬಿಕ್ಕಟ್ಟಿನ ಕಾರಣಗಳಲ್ಲಿ ಒಂದಾಗಿದೆ. ಇನ್ನೊಂದು ಕಡೆ ಅದು ಈ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ ಕೂಡಾ.

ಇದನ್ನು ಎತ್ತಿ ತೋರಿಸುವ ಮುಖ್ಯ ಸಂಗತಿಗಳು ಎರಡು. ಒಂದು- ಮೂರನೇ ಜಗತ್ತಿನ ದೇಶಗಳು ಮುಂದುವರಿದ ಬಂಡವಾಳಶಾಹೀ ದೇಶಗಳಿಂದ ಭಾರೀ ಸಾಲ ಪಡೆಯುತ್ತಿದ್ದರೂ ವಾಸ್ತವವಾಗಿ ಹಣ-ಸಂಪನ್ಮೂಲ ಹರಿದು ಹೋಗುತ್ತಿರುವುದು ವಿರುದ್ಧ ದಿಕ್ಕಿನಲ್ಲಿ. ಅಂದರೆ ಬಡದೇಶಗಳಿಂದ ಶ್ರೀಮಂತ ಬಂಡವಾಳಶಾಹೀ ದೇಶಗಳತ್ತ! ಇನ್ನೊಂದು ಸಂಗತಿಯೆಂದರೆ ವಿಶ್ವವ್ಯಾಪಾರದಲ್ಲಿ ಈ ದೇಶಗಳ ಪಾಲು ಇಳಿಯುತ್ತಲೇ ಇದೆ.

ಸಾಲದ ಹೊರೆ- ಅಲ್ಪಸುಖಕ್ಕಾಗಿ

ಮೂರನೇ ಜಗತ್ತಿನ ಜನಗಳ ತಲೆಯ ಮೇರಿರುವ ಸಾಲದ ಹೊರೆ ಸಾಮ್ರಾಜ್ಯಶಾಹೀ ಶೋಷಣೆಯ ಒಂದು ಜೀವಂತ ಸಾಕ್ಷಿ."ಹೊಸ ವಿಶ್ವ ಆರ್ಥಿಕ ವ್ಯವಸ್ಥೆ" ಯ ಮಾತನ್ನು ನೀವು ಬಹಳವಾಗಿ ಕೇಳಿರಬಹುದು. ಮುಂದುವರಿದ ದೇಶಗಳು ಹಿಂದುಳಿದ ದೇಶಗಳ ನೆರವಿಗೆ ಬರಬೇಕು ಎಂಬುದು ಇದರ ಆಶಯ. ನೆರವಿನ ಹೆಸರಲ್ಲಿ ಮುಂದುವರಿದ ಬಂಡವಾಳಶಾಹಿ ದೇಶಗಳು ಕೊಡುತ್ತಿರುವ ಸಾಲದ ಪ್ರಮಾಣ ಇಳಿಯುತ್ತಲೇ ಸಾಗಿದೆ. ಅತ್ತ ಸಾಲ ಮರುಪಾವತಿ ಮತ್ತು ಬಡ್ಡಿಗೆಂದು ಮೂರನೇ ಜಗತ್ತಿನ ದೇಶಗಳಿಂದ ಮುಂದುವರಿದ ದೇಶಗಳಿಗೆ ಹೋಗುತ್ತಿರುವ ಪ್ರಮಾಣ ಸಾಲದ ರೂಪದಲ್ಲಿ ಬರುವ ಹಣಕ್ಕಿಂತಲೂ ಹೆಚ್ಚಾಗುತ್ತಲೇ ಇದೇ (ಕೋಷ್ಟಕ ನೋಡಿ) ಇದೆಂತಹ ನೆರವು ಹಣ ಕೊಡುವ ಬದಲು ತೆಗೆದುಕೊಳ್ಳುವ ಪರಿ? 1989 ರಲ್ಲಿ ಮೂರನೇ ಜಗತ್ತಿನ ದೇಶಗಳಿಗೆ ಮುಂದುವರಿದ ದೇಶಗಳಿಂದ ಸಾಲದ ರೂಪದಲ್ಲಿ ಹೋದ ಹಣ 86.45 ಕೋಟಿ ಡಾಲರು. ಆದರೆ ಮರುಪಾವತಿ, ಬಡ್ಡಿ ಹೆಸರಲ್ಲಿ ಮುಂದುವರಿದ ದೇಶಗಳು ಗಿಟ್ಟಿಸದ ಹಣ 129.89 ಶತಕೋಟಿ ಡಾಲರು. 1984 ರಿಂದಲೇ ಸಾಲವಾಗಿ ಪಡೆಯುವುದಕ್ಕಿಂತ ಹಿಂದಿನ ಸಾಲಕ್ಕಾಗಿ ಗಕೊಡಬೇಕಾದ ಹಣವೇ ಹೆಚ್ಚಾಗಿದೆ. ಈ ರೀತಿ ಮೂರನೇ ಜಗತ್ತಿನ ಬಡದೇಶಗಳು ಸಾಲದ ಬಲೆಯಲ್ಲಿ ಸಿಲುಕಿದೆ. 1983 ರಲ್ಲಿ ಅಲಿಪ್ತ ರಾಷ್ಟ್ರ ಸಮ್ಮೇಳನದಲ್ಲಿ ಕ್ಯೂಬಾ ಅಧ್ಯಕ್ಷ ಫಿಡಲ್ ಕಾಸ್ಟ್ರೋರವರ ಐತಿಹಾಸಿಕ ಭಾಷಣ ಈ ಸಾಮ್ರಾಜ್ಯಶಾಹಿ ಶೋಷಣೆಯ ನಿಜ ಸ್ವರೂಪವನ್ನು ಬಿಚ್ಚಿಟ್ಟಿತ್ತು.

ಕೋಷ್ಟಕ -1					
ದೀರ್ಘಾವಧಿ ಸಾಲ- ಬಿಲಿಯನ್ ಡಾಲರ್‌ಗಳಲ್ಲಿ					
ವರ್ಷ	ಹೊಸ ಸಾಲ	ಹಳೆಸಾಲ ಮರುಪಾವತಿ			ನಿಜವಾಗಿ ಸಿಕ್ಕಿದ ಹಣ
		ಅಸಲು	ಬಡ್ಡಿ	ಒಟ್ಟು.	
1980	106.4	43.7	32.1	75.8	30.6
1981	123.4	46.2	40.7	86.9	36.5
1982	116.4	48.3	57.9	96.2	20.2
1983	95.3	44.0	46.8	90.8	4.5
1984	90.8	47.8	52.9	100.7	-9.9
1985	87.6	53.1	54.2	107.3	-19.7
1986	88.4	59.7	52.4	112.1	-23.7
1987	88.3	68.9	53.6	122.5	-34.2
1988	95.7	72.9	60.4	133.3	-37.6
1989	86.4	70.3	59.5	129.8	-43.4

ವಿಶ್ವವ್ಯಾಪಾರದಲ್ಲಿ ನಾವು ಹೆಚ್ಚೆಚ್ಚು ಪಾಲ್ಗೊಳ್ಳಬೇಕು. ರಫ್ತು ಹೆಚ್ಚಿಸುವುದೇ ಅಭಿವೃದ್ಧಿಯ ಕೀಲಿ ಕೈ ಎಂದೆಲ್ಲಾ ನಮ್ಮ ಪ್ರಧಾನಮಂತ್ರಿಯಾದಿಯಾಗಿ ಎಲ್ಲಾ ಆಳುವ ಜನ ಹೇಳುತ್ತಲೇ ಇದ್ದಾರೆ. ಆ ನಿಜ ಅನುಭವವೇನು? ರಫ್ತು ಹೆಚ್ಚಿಸಿ ಅಭಿವೃದ್ಧಿ ಸಾಧಿಸುವ ಈ ತಂತ್ರ ಸಂಪೂರ್ಣ ವಿಫಲಗೊಂಡಿದೆ. ಏಕೆಂದರೆ ವಿಶ್ವ ವ್ಯಾಪಾರದಲ್ಲಿ ಪ್ರಾಬಲ್ಯ ಹೊಂದಿರುವ ದೊಡ್ಡ-ದೊಡ್ಡ ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ಸಾಮ್ರಾಜ್ಯಶಾಹೀ ದೇಶಗಳ ಮಧ್ಯೆ ಬಡದೇಶಗಳು ಪ್ರವೇಶಿಸುವುದಾದರೂ ಹೇಗೆ? ಬಂಡವಾಳಶಾಹಿ ದೇಶಗಳಲ್ಲೇ ಹಿಂಜರಿತ ಕಾಡುತ್ತಿರುವಾಗ ನಮ್ಮಂತಹ ಬಡದೇಶಗಳ ಸರಕುಗಳ ರಫ್ತುಗಳನ್ನು ಕೊಳ್ಳಲು ಅವಕಾಶ ಕೊಡುವ ಮಾರುಕಟ್ಟೆಯೇ ಇಲ್ಲ ಎಂಬ ಅಂಶವನ್ನು ನಮ್ಮ ಆಳರಸರು ಜನರಿಂದ ಮರೆಮಾಚುತ್ತಿದ್ದಾರೆ. ವಿಶ್ವವ್ಯಾಪಾರ ವ್ಯವಸ್ಥೆಯ ಚಿತ್ರ ನೀಡುವ ಕೋಷ್ಟಕ-2 ನ್ನು ನೋಡಿ.

ಕೋಷ್ಟಕ-2						
ವಿಶ್ವ ವ್ಯಾಪಾರದಲ್ಲಿ ಮೂರನೇ ಜಗತ್ತು (% ಪಾಲು)						
ವರ್ಷ	ಏಷ್ಯ			ಆಫ್ರಿಕಾ	ಲ್ಯಾಟಿನ್ ಅಮೆರಿಕಾ	ಎಲ್ಲಾ ಅಭಿವೃದ್ಧಿಶೀಲ ದೇಶಗಳು
	ಮಧ್ಯ ಪೂರ್ವ ಏಷ್ಯ	ಪೂರ್ವ ಮತ್ತು ದಕ್ಷಿಣ ಏಷ್ಯಾ	ಒಟ್ಟು			
1960	18.9	5.3	16.7	6.9	22.2	8.7
1970	16.7	4.5	14.9	5.6	17.9	7.4
1987	27.8	3.8	19.6	3.5	12.5	6.1

1960 ರಿಂದ 1987 ರ ನಡುವೆ ವಿಶ್ವ ವ್ಯಾಪಾರದಲ್ಲಿ ಮೂರನೇ ಜಗತ್ತಿನ ಪಾಲು ಶೇ. 7 ರಿಂದ ಶೇ. 6.1 ಕ್ಕೆ ಇಳಿದಿದೆ. ಮಧ್ಯಪೂರ್ವ ಏಷ್ಯಾದ ಕೆಲವು ತೈಲ ರಫ್ತು ಮಾಡುವ ದೇಶಗಳು ಹಾಗೂ ಕೊರಿಯಾ, ತೈವಾನ್, ಹಾಂಗ್‌ಕಾಂಗ್, ಸಿಂಗಾಪುರ್‌ನಂದ ಹೊಸದಾಗಿ ಕೈಗಾರಿಕೀಕರಣಗೊಂಡ ದೇಶಗಳಿಂದಾಗಿ ಸ್ವಲ್ಪ ಹೆಚ್ಚು ಕಂಡುಬಂದಿದೆ. ಈ ದೇಶಗಳನ್ನು ಬಿಟ್ಟರೆ ಭಾರತದಂತಹ ದೇಶಗಳ ಸ್ಥಿತಿ ಒಟ್ಟು ಮೂರನೇ ಜಗತ್ತಿನ ಬಡದೇಶಗಳಿಗಿಂತ ಭಿನ್ನವಾಗಿಲ್ಲ.

ಈ ಎರಡು ಅಂಶಗಳು ಬಹುಪಾಲು ಮಾನವ ಕುಲದ ಶೋಚನೀಯ ಸ್ಥಿತಿಯನ್ನು ತೋರಿಸುತ್ತವೆ. ಮೊದಲೇ ಹೇಳಿದಂತೆ ವಿಶ್ವದ ಬಹುಪಾಲು ಜನಗಳ ಈ ಶೋಚನೀಯ ಪರಿಸ್ಥಿತಿ ವಿಶ್ವದ ಆರ್ಥಿಕ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

ಾಗಿದೆ. ಅದೇ ರೀತಿ ಉಕ್ಕು ಉತ್ಪನ್ನ ವಿಮಾನ ಕೈಗಾರಿಕೆಗಳ ವಿಚಾರದಲ್ಲೂ ಮಾರು ಸರ್ಕಾರ ಅವುಗಳಿಗೆ ನೀಡುವ ಸಬ್ಸಿಡಿ ವಿಚಾ ಅಮೇರಿಕ ಯುರೋಪುಗಳ ನಡುವೇ ತೀವ್ರ ಣೆಯಾಗುತ್ತಿದೆ.

ಅಧ್ಯಕ್ಷ ಕ್ಲಿಂಟನ್‌ನ ಹೊಸ ಆಡಳಿತದಲ್ಲಿ ಇತರ ಗಳ ಮಾರುಕಟ್ಟೆಯನ್ನು ಅಮೇರಿಕನ್ ರಫ್ತಿಗೆ ವುದು ಸರಕಾರದ ಮುಖ್ಯ ಧೋರಣೆ ಎಂದು . ಉಳಿದೆಲ್ಲಾ ನೀತಿಗಳು ಈ ಧೋರಣೆಯನ್ನು ಮಾಡುವ ಕ್ರಮಗಳು ಎಂದಿದೆ. ಅಮೇರಿಕನ್ ಅಡ್ಡ ಬರುವ ಎಲ್ಲಾ ದೇಶಗಳ ನೀತಿಗಳ ಅಡೆ ಳನ್ನು ಅಮೇರಿಕ ಯಾವುದೇ ಕ್ರಮ ಬಳಸಿ ದೂರ ವುದು ಎಂದಿದ್ದಾರೆ. ಇದು ಮಾರುಕಟ್ಟೆಗಳಿ ತೀವ್ರ ಘರ್ಷಣೆಯ ಮುನ್ಸೂಚನೆ.

ಯುರೋಪಿಯನ್ ಸಮುದಾಯದ ಒಳಗೂ ವಿರಸಗಳು, ಘರ್ಷಣೆಗಳು ನಡೆಯುತ್ತಿವೆ. ೋಪಿಯನ್ ಕೂಟದಲ್ಲಿ ಜರ್ಮನಿ ಅಧಿ ಜೋರಾಗುತ್ತಿದೆ ಎಂಬ ಆತಂಕದಿಂದ ಆರ್ಥಿಕ ದ ಪ್ರಯತ್ನಗಳಿಗೆ ತೀವ್ರ ಧಕ್ಕೆ ಬಂದಿದೆ. ಡೆನ್ಮಾರ್ಕ್, ನಲ್ಲಿ ಯುರೋಪಿಯನ್ ಕೂಟ ಸೇರಲು ತೀವ್ರ ಧವಿದೆ. ಸಾಮಾನ್ಯ ವಿನಿಮಯದರದ ವ್ಯವ ದ ಬ್ರಿಟನ್, ಇಟಲಿ ಆಗಲೇ ಹೊರ ನಡೆದಿವೆ. ೋಪಿಯನ್ ಒಕ್ಕೂಟ (ಆರ್ಥಿಕ ಹಾಗೂ ರಾಜ)ದ ಯೋಜನೆ ಜಾರಿಯಲ್ಲಿ ತೀವ್ರ ಸಮಸ್ಯೆಗ ಎದುರಿಸುತ್ತಿದೆ. ಯುರೋಪಿಯನ್ ಗುತ್ತೇದಾರಿ ವಾಳಶಾಹಿಯು ಈ ಕನಸನ್ನು ಜನತೆ ತೀವ್ರವಾಗಿ ೋಧಿಸುತ್ತಿದ್ದಾರೆ.

ಈ ರೀತಿ ಯುರೋಪು, ಜಪಾನು, ಅಮೇರಿಕಾ ವಾಣಿಜ್ಯ ಸಮರಕ್ಕೆ ತಯಾರಾಗುತ್ತಿದೆ. ಸೋವಿ ್ ಒಕ್ಕೂಟ, ಹಾಗೂ ಸಮಾಜವಾದಿ ಜಗತ್ತಿನ ತೀವ್ರ ರಾಜಕೀಯ, ಆರ್ಥಿಕ ಪೈಪೋಟಿ ಇಲ್ಲ ರುವುದು. ಈ ವಾಣಿಜ್ಯ ಸಮರಕ್ಕೆ ಕುಮ್ಮಕ್ಕು ತಾಗಿದೆ. ಹಿಂದೆ ಸಮಾಜವಾದಿ ಬಣದ ವಿರುದ್ಧ ರಾಷ್ಟ್ರ...ಯ ಹೆಸರಲ್ಲಿ ವಾಣಿಜ್ಯ ಸಮರ ಒಂದು ದಾಟುತ್ತಿರಲಿಲ್ಲ.

ಡವಾಳಶಾಹಿ ಆರ್ಥಿಕ ಕುಸಿಯುತ್ತಿದೆ

50 ರದಶಕದಿಂದ ಇತ್ತೀಚಿನವರೆಗೆ ವಿಕಸಿತ ವಾಳಶಾಹಿ ದೇಶಗಳ ಬೆಳವಣಿಗೆ ಕುಸಿಯುತ್ತಿದೆ. ರಿಂದ 1973 ರವರೆಗೆ ಇದು ಶೇಕಡಾ 3.6 ಇತ್ತು. ರವರೆಗೆ ಇದು ಶೇಕಡಾ 3.6 ಇತ್ತು. 1973 1989 ರ ವರೆಗಿನ ಅವಧಿಯಲ್ಲಿ ಇದು ಶೇಕಡಾ ಕುಸಿದಿದೆ. ಈ ಕುಸಿತ ಒಂದು ಸತತ ಕುಸಿತ. ಾನ್ಯವಾಗಿ ಕಂಡುಬರುವ ಉತ್ಕರ್ಷ, ಸ್ಥಗಿತತೆ, ರಿತ, ಪುನಃಚೇತರಿಕೆಗಳ ಚಕ್ರವಲ್ಲ. ಆದ್ದರಿಂದ ಬಂಡವಾಳಶಾಹಿಯ ಬಗೆಹರಿಸಲಾಗದ ಬಿಕ್ಕ ದ್ಯೋತಕ.

ಇದೇ ರೀತಿ 1960-90 ರ ನಡುವೆ ಪ್ರಮುಖ ತ ಬಂಡವಾಳಶಾಹಿ ದೇಶಗಳ ಕೈಗಾರಿಕಾ ಉತ್ಪಾ ದಲ್ಲಿ ಶೇಕಡಾವಾರು ಹೆಚ್ಚಳ ತೀವ್ರವಾಗಿ ಕಡಿ ಾಗುತ್ತಿದೆ. ಇವೆರಡೂ ಸೇರಿ ಬಂಡವಾಳಶಾಹಿ ಕ ವ್ಯವಸ್ಥೆ ಕುಸಿಯುತ್ತಿದೆ. ಬೆಳೆಯುತ್ತಿಲ್ಲ. ಅದು ನಿಂದ ತುಂಬಿದೆ. ತೀವ್ರ ಸಮಸ್ಯೆಗಳನ್ನು ಎದುರಿ ಎಂಬುದು ಸ್ಪಷ್ಟವಾಗಿತ್ತು.

60 ರದಶಕದಲ್ಲಿ ಯುದ್ಧಾನಂತರದ ಪುನರ್ , ಜಗತ್ತಿನ ಆರ್ಥಿಕ ಬೆಳವಣಿಗೆಗೆ ಕುಮ್ಮಕ್ಕು ತ್ತು. ಹೊಸ ವಿಕಾಸಶೀಲ ಮೂರನೇ ಜಗ ದೇಶಗಳ ಮಾರುಕಟ್ಟೆ, ಬೆಳವಣಿಗೆ, ಸಮಾಜ -ಸಾಮ್ರಾಜ್ಯಶಾಹಿಗಳ ನಡುವೆ ಪೈಪೋಟಿಯಿಂದ ಭವಾದ ಶಸ್ತ್ರಾಸ್ತ್ರ ಪೈಪೋಟಿ ಇವೆಲ್ಲಾ ಬಂಡವಾಳ ಗೆ ಆರ್ಥಿಕ ಬೆಳವಣಿಗೆಗೆ ಪೂರಕವಾದವು. ಆದರೆ ಲ್ಲಾ ಪೂರಕ ಅಂಶಗಳ ಪ್ರಭಾವ ಕಡಿಮೆಯಾ ಹೋದಂತೆ ಬಂಡವಾಳಶಾಹಿ ಆರ್ಥಿಕ ಕುಸಿ ಆರಂಭಿಸಿದೆ. ಸೋವಿಯೆಟ್ ಒಕ್ಕೂಟ ಪೂರ್ವಯುರೋಪಿನಲ್ಲಿ ಸಮಾಜವಾದ ರಿತ ಬಂಡವಾಳಶಾಹಿ ಆರ್ಥಿಕಕ್ಕೆ ಪೂರಕವಾಗ ತ್ತು. ಆದರೆ ಹಾಗಾಗುತ್ತಿಲ್ಲ. ಅದರ ಬದಲು ಸಮರ' ತಣ್ಣಗಾಗಿರುವುದರಿಂದ ಶಸ್ತ್ರಾಸ್ತ್ರ ಕೈಗಾ ಬಿಕ್ಕಟ್ಟು ಎದುರಿಸುತ್ತಿದೆ. ಸಮಾಜವಾದದ ರಿಕೆ ಬಂಡವಾಳಶಾಹಿ ಆರ್ಥಿಕದ ಮೇಲೆ ಬೀರಿ ಪರಿಣಾಮದ ಬಗ್ಗೆ ಅಧ್ಯಯನ ನಡೆಸಬೇಕಾಗಿದೆ. ಆದರೆ ಒಂದಂತೂ ನಿಜ. ಬಂಡವಾಳ ಶಾಹಿ ಬೆಳವಣಿಗೆಯ ಮಾದರಿ ವ್ಯವಸ್ಥೆಯಲ್ಲ. ಅದು ವೈರುಧ್ಯಗಳು, ಬಿಕ್ಕಟ್ಟನ್ನು ಒಳಗೊಂಡಿದೆ. ಜಗ ನತೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಿಲ್ಲ ದು ಹಿಂದೆಂದಿಗಿಂತಲೂ ಸ್ಪಷ್ಟವಾಗುತ್ತಿದೆ.

ಇದರಿಂದಾಗಿ ಜಗತ್ತಿನ ಆರ್ಥಿಕ ಹಾಗೂ ರಾಜ ಅಲ್ಲೋಲಕಲ್ಲೋಲ, ಘರ್ಷಣೆಗಳ ಅವಧಿ ಪ್ರವೇಶಿಸುತ್ತಿದೆ.

●

ರೂಪಾಯಿ ಬೆಲೆ ಕುಸಿಯಲಿದೆ

ಮಾರ್ಚ್ ಒಂದರಿಂದ ರೂಪಾಯಿಯನ್ನು ತೇಲಿಬಿಟ್ಟ ನಂತರ ಸರ್ಕಾರ ರೂಪಾಯಿಯ ಬೆಲೆ ಕುಸಿಯದಂತೆ ಎಲ್ಲಾ ಪ್ರಯತ್ನ ಮಾಡುತ್ತಿರುವುದು ಈಗ ಗುಟ್ಟೇನಲ್ಲ. ಅಂದರೆ ರೂಪಾಯಿಯ ಗಟ್ಟಿತನ ಕೃತ್ರಿಮವಾದದ್ದು.

ಈಗ ಇದನ್ನು ಅಮೇರಿಕದ ಬ್ಯಾಂಕೊಂದು ಮಾಡಿದ ಅಧ್ಯಯನವೇ ತಿಳಿಸಿದೆ. ಈ ಅಧ್ಯಯನದ ಪ್ರಕಾರ ಭವಿಷ್ಯದಲ್ಲಿ ರೂಪಾಯಿಯ ಬೆಲೆ ತೀವ್ರವಾಗಿ ಕುಸಿಯಲಿದೆ. ಮುಂಬರುವ ದಿನಗಳಲ್ಲಿ ರೂಪಾಯಿಯ ಬೆಲೆಯ ಮೇಲೆ ಒತ್ತಡ ಹೇರಲಿರುವ ಅಂಶಗಳೆಂದರೆ

1) 1992-93 ರ ಹಣಕಾಸಿನ ಖೋತಾ ಅಧಿಕೃತವಾಗಿ ಸರ್ಕಾರ ಹೇಳಿರುವಂತೆ ಶೇ. 5.3. ರಷ್ಟಿರುವ ಬದಲು ಶೇ. 6.2 ರಷ್ಟಿರುವುದು.
2) ಮುಂದಿನ ವರ್ಷದಿಂದ ಅಂದರೆ 1994 ರಿಂದ ಐ.ಎಂ.ಎಫ್ ಸಾಲ ಮರುಪಾವತಿ ಪ್ರಾರಂಭವಾಗುತ್ತದೆ. 1994-95 ರ ಸಾಲಿಗೆ 8 ಬಿಲಿಯ ಡಾಲರುಗಳಷ್ಟನ್ನು ಮರುಪಾವತಿಸಬೇಕಾಗುತ್ತದೆ.
3) ಆಮದಿನ ಮೇಲಿನ ಸುಂಕಗಳನ್ನು ಕಡಿಮೆ ಮಾಡಿರುವುದರಿಂದ ಆಮದು ತೀವ್ರವಾಗಿ ಏರಲಿದೆ.

ಅಂತೂ ಕೆಲವೇ ದಿನಗಳಲ್ಲಿ ರೂಪಾಯಿಯ ಗಟ್ಟಿತನದ ಟೊಳ್ಳು ಹೊರಬೀಳಲಿದೆ.

ಆದರೂ ನಮ್ಮ ಸರ್ಕಾರ ಹೇಳಿಕೊಳ್ಳುತ್ತಿದೆ. ರೂಪಾಯಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗಟ್ಟಿಯಾಗಿದೆ.

'ಬೇವು ಎಂಬ ಹೊನ್ನಿನ ದರೋಡೆ'

ಡಂಕೆಲ್ ಪ್ರಸ್ತಾಪಗಳು ದೇಶದ ದರೋಡೆಗೆ ಹೇಗೆ ಅನುವು ಮಾಡಿಕೊಡುತ್ತದೆ ಎಂಬುದರ ಬಗ್ಗೆ ಒಂದು ಪುಟ್ಟ ಉದಾಹರಣೆ ಇಲ್ಲಿದೆ.

ನಮ್ಮ ದೇಶದಲ್ಲಿ ಬೇವಿನ ಮಹತ್ವಕ್ಕೆ ಬಹಳ ಮಹತ್ವವಿದೆ. ಹೊಲಗಳಲ್ಲಿ ಬೇವಿನ ಮರಗಳಿರುವುದರಿಂದ ಬೆಳೆಗಳಿಗೆ ಕೀಟ ರೋಗಗಳ ಭಾದೆ ಬಹಳ ಕಡಿಮೆ ಪ್ರಮಾಣದಲ್ಲಿ ಆಗುತ್ತದೆ ಎಂಬುದು ಸಾಂಪ್ರದಾಯಿಕ ಜ್ಞಾನ.

ಈಗ ಬಹುರಾಷ್ಟ್ರೀಯ ಕಂಪೆನಿಗಳು ಬೇವಿನಿಂದ ಹಲವು ಸಸ್ಯರಕ್ಷಕ ಉತ್ಪನ್ನಗಳನ್ನು ಕಂಡುಹಿಡಿದಿದ್ದು ಅವುಗಳ ಪೇಟೆಂಟ್ ಪಡೆದಿರುವಂತೆ ಅದರಲ್ಲಿ ಅಝಾಡಿರಕ್ಟಿನ್ ಎಂಬುದೂ ಒಂದು. ನಮ್ಮಲ್ಲಿನ ಬೇವಿನ ಮರ, ಬೀಜಗಳನ್ನೆಲ್ಲ ಉಪಯೋಗಿಸಿ ಇಂತಹ ಉತ್ಪನ್ನಗಳನ್ನು ಉತ್ಪಾದಿಸಿ ಈ ಕಂಪೆನಿಗಳು ಇವನ್ನೇ ನಮ್ಮ ರೈತರಿಗೆ ಅತೀ ದುಬಾರಿ ಬೆಲೆಗೆ ಮಾರುತ್ತಾರೆ. ಜೊತೆಗೆ ನಮ್ಮ ಬೇವಿನ ಸಂಪತ್ತನ್ನು ನಾಶ ಮಾಡುತ್ತಾರೆ.

ಮಡಾಗಾಸ್ಕರ್ ದೇಶದ ಇಂತಹ ಅನುಭವ ವಿಶಿಷ್ಟವಾಗಿದೆ. ಲ್ಯೂಕೇಮಿಯಾ ಎಂಬ ಕಾಯಿಲೆಗೆ ಬಳಸುವ ಔಷಧಿಯ ಮುಖ್ಯ ಅಂಶ ಒಂದು ಗಿಡಮೂಲಿಕೆಯಿಂದ ಬರುತ್ತದೆ. ಈ ಗಿಡ ಮಡಾಗಾಸ್ಕಾರ್ ದೇಶದಲ್ಲಿ ಹುಟ್ಟಿದ್ದು ಆದರೆ ಈಗ ಆದೇಶದಲ್ಲಿ ಈ ಸಸ್ಯವೇ ಇಲ್ಲ. ಬಹುರಾಷ್ಟ್ರೀಯ ಕಂಪೆನಿಗಳು ಈ ದೇಶದಿಂದ ಈ ಸಸ್ಯ ಪಡೆದು, ಬೆಳೆದು ಔಷದಿ ತಯಾರಿಸಿ ಮಾರುತ್ತಾರೆ. ಈಗ ಮಡಾಗಾಸ್ಕಾರ್ ಅತ್ಯಂತ ದುಬಾರಿ ಬೆಲೆ ತೆತ್ತು ಈ ಔಷಧಿ ಕೊಳ್ಳಬೇಕು?

ಡಂಕೆಲ್ ಲೂಟಿಯ ಪರಿಣಾಮಗಳ ಒಂದು ಅಂಶವಾದರೂ ತಿಳಿಯತಲ್ಲವೇ:

ಮರಿಚಿಕೆಯಾದ ರಫ್ತೆಂಬ ದಿವ್ಯ ಔಷಧಿ

ಸರ್ಕಾರದ ದಿನ ಬೆಳಗಿನ ಡಂಗುರ ಇದೇ ಅಲ್ಲವೇ? ರಫ್ತು ರಫ್ತು ರಫ್ತು ಆದರೆ ಹೊಸ ಆರ್ಥಿಕ ನೀತಿ ರಫ್ತಿಗೆ ಅನುಕೂಲವಲ್ಲವೆಂಬುದು ಈಗ ಸ್ಪಷ್ಟ. 1992-93 ರ ಸಾಲಿಗೆ, ಶೇ. 12.8 ರಷ್ಟು ಬೆಳವಣಿಗೆಯಾಗಬೇಕಾಗಿದ್ದ ರಫ್ತು ಬರೀ ಶೇ. 3.6 ರಷ್ಟು ಬೆಳವಣಿಗೆ ಹೊಂದಿದೆ.

1991-92 ರಲ್ಲಿ ದೇಶ 17,778 ಮಿಲಿಯ ಡಾಲರುಗಳ ಮೊತ್ತದ ರಫ್ತು ಸಾಧಿಸಿತ್ತು. 19 92-93 ರಲ್ಲಿ ಅದು 18,420 ಮಿಲಿಯ ಡಾಲರುಗಳಿಗೇರಿದೆ. ಅಂದರೆ ಅತೀ ಅಲ್ಪ ಪ್ರಮಾಣದ ಏರಿಕೆ. ಈಗಾಗಲೇ ಆಮದು 1992-93 ರಲ್ಲಿ ಸಾಲಿಗೆ 21,725 ಮಿಲಿಯ ಡಾಲರುಗಳಷ್ಟಾಗಿರುವುದರಿಂದ ವ್ಯಾಪಾರ ಬಾಕಿ 3305 ಮಿಲಿಯ ಡಾಲರುಗಳಷ್ಟಾಗುತ್ತದೆ. ಆರ್ಥಿಕ ಸಮಸ್ಯೆಗಳು ಪರಿಹಾರವಾಗುತ್ತಿವೆ ಎಂದೆಲ್ಲಾ ಹೇಳುತ್ತಿರುವುದರ ಅರ್ಥವೇನು? ವಾಸ್ತವವಾಗಿ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ ಎಂಬುದು ಸ್ಪಷ್ಟವಲ್ಲವೇ?

ಸರ್ಕಾರ ನೀಡಿದ ಸುಳ್ಳು ವಿವರ

ಕೇಂದ್ರ ಸರ್ಕಾರ 1993-94 ರ ಬಜೆಟ್‌ನಲ್ಲಿ ಹಲವು ವಸ್ತುಗಳ ಮೇಲಿನ ಅಬ್ಕಾರೀ ಸುಂಕದಲ್ಲಿ ಕಡಿತ ಮಾಡಿತು. ಶೇ. 10. ರಿಂದ ಶೇ. 40 ರವರೆಗೆ ಮಾಡಿದ

ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

ಈ ಕಡಿತದಿಂದಾಗಿ ಈ ವಸ್ತುಗಳ ಬೆಲೆಗಳು ಇಳಿಯುತ್ತವೆ ಎಂದು ಸರ್ಕಾರ ಹೇಳಿತ್ತು. ಆದರೆ ಉದ್ಯಮಿಗಳು ಈ ಅಬ್ಕಾರಿ ಸುಂಕದ ಕಡಿತವನ್ನು ತಮ್ಮ ಜೇಬಿಗೆ ಇಳಿಬಿಡುತ್ತಿದ್ದಾರೆ. ಬೆಲೆಗಳು ಇಳಿದಿಲ್ಲ. ಕೆಲವು ವಸ್ತುಗಳ ಬೆಲೆಯನ್ನು ಅಲ್ಪ ಸ್ವಲ್ಪ ಇಳಿಸಿದ್ದಾರೆ. ಸರ್ಕಾರ ಕಾಗದದ ಹುಲಿಯಂತೆ ಬೊಬ್ಬಿಡುತ್ತಿದೆ. ಬೆಲೆ ಇಳಿಸದಿದ್ದರೆ ತೀವ್ರ ಕ್ರಮ ಕೈಗೊಳ್ಳುತ್ತೇವೆ. ಆದರೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಹೇಗಿದೆ ಜನಪರ(?) ಬಜೆಟ್‌ನ ಲಾಭಗಳು.

ಬಂಡವಾಳಿಗರ ಪರವಾದ ಬಜೆಟ್ ಇದು ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

ಹಣದುಬ್ಬರವೂ ಹವಾಮಾನವೂ

ಹಣದುಬ್ಬರ ದಿನದಿಂದ ದಿನಕ್ಕೆ ಇಳಿಯುತ್ತಿದೆ ಎಂದು ಸರ್ಕಾರ ದಿನೇ ದಿನೇ ಹೇಳುತ್ತಲೇ ಇದೆ. ಪೇಟೆಗೆ ಹೋದರೆ ಯಾವುದೇ ವಸ್ತುವಿನ ಬೆಲೆ ಇಳಿದಿಲ್ಲ. ಬದಲಿಗೆ ಏರುತ್ತಲೇ ಇದೆ ಇದು ಒತ್ತಟ್ಟಿಗಿರಲಿ.

ಸರ್ಕಾರ ಈ ವರ್ಷದ ಮಳೆಯ ಬಗೆಗಿನ ಮುನ್ಸೂಚನೆ ಪ್ರಕಟಿಸದಂತೆ ತಡೆ ಹಿಡಿದಿದೆಯಂತೆ. ಕೃಷಿಯ ಮೇಲೆ ಅವಲಂಬಿಸಿರುವ ಜನ, ಮಳೆಯ ಮೇಲೆ ಅವಲಂಬಿಸಿರುವ ಕೃಷಿ. ಹೀಗಿರುವಾಗ ಮಳೆಯ ಬಗೆಗೆ ಮುನ್ಸೂಚನೆ ಸಿಕ್ಕರೆ ರೈತ ಉಳುಮೆ, ಬಿತ್ತನೆ ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡಬಹುದು.

ಆದರೆ ಸರ್ಕಾರ ತಡೆ ಈ ಮುನ್ಸೂಚನೆಗೆ ಇದಕ್ಕೆ ಕಾರಣ ಗೊತ್ತೇ? ಮುನ್ಸೂಚನೆಯಿಂದ ಹಣದುಬ್ಬರ ಏರಬಹುದಂತೆ!! ಹೇಗಿದೆ ಸರ್ಕಾರದ ಆಡಳಿತ?

ಶೇರು ಹಗರಣ ಸಮಿತಿಯ ಅವದಿಯ ವಿಸ್ತರಣೆ

ಶೇರು ಹಗರಣದ ತನಿಖೆ ನಡೆಸುತ್ತಿರುವ ಸಂಯುಕ್ತ ಸಂಸದೀಯ ಸಮಿತಿಯ ಅವಧಿಯನ್ನು ವಿಸ್ತರಿಸಲಾಗಿದೆ.

ಬಜೆಟ್ ಅಧಿವೇಶನದ ಕೊನೆಯೊಳಗೆ ವರದಿ ಸಲ್ಲಿಸಬೇಕಾಗಿದ್ದ ಸಮಿತಿ ಇನ್ನೂ ವರದಿ ಸಿದ್ಧವಾಗಿಲ್ಲದ ಕಾರಣ ಮತ್ತು ಕೆಲವು ಮುಖ್ಯ ಅಂಶಗಳ ತನಿಖೆ ಆಗಬೇಕಾದ್ದರಿಂದ ಅವಧಿಯ ವಿಸ್ತರಣೆಯನ್ನು ಕೇಳಿತ್ತು.

ಈಗ ಸಮಿತಿ ಮುಂದಿನ ಸಂಸತ್ ಅಧಿವೇಶನದ ಕೊನೆಯೊಳಗಾಗಿ ವರದಿ ಸಲ್ಲಿಸಬೇಕು.

ಅಷ್ಟರೊಳಗೆ ಜಾನಕಿರಾಮನ್ ಸಮಿ ಅಂತಿಮ ವರದಿಯು ಬರುವ ನಿರೀಕ್ಷೆಯಿದ್ದು ಸಂಸದೀಯ ಸಮಿತಿಯ ವರದಿಗೆ ಅನುಕೂಲವಾಗುತ್ತದೆ.

ನಿದ್ದೆ ಮಾಡುತ್ತಿದ್ದ ಸಾರ್ವಜನಿಕ ಉದ್ಯಮಗಳ ಬ್ಯೂರೋ

ಸಂಸದೀಯ ಸಮಿತಿ ಸಾರ್ವಜನಿಕ ಉದ್ಯಮಗಳ ಬ್ಯೂರೋವನ್ನು ತೀವ್ರವಾಗಿ ಟೀಕಿಸಿದೆ. ಈ ಬ್ಯೂರೋ ಸಾರ್ವಜನಿಕ ವಲಯದ ಘಟಕಗಳ ವ್ಯವಹಾರಗಳ ಮೇಲೆ ನಿಗಾ ಇಡಬೇಕು. ಅವುಗಳ ದಾರಿ ತಪ್ಪಿದಾಗ ಅವುಗಳನ್ನು ದಾರಿಗೆ ತರಬೇಕು. ಆದರೆ ಶೇರು ಹಗರಣ ನಡೆಯುತ್ತಿದ್ದು ಈ ಘಟಕಗಳು ತಮ್ಮ ಹಣವನ್ನು ವಿದೇಶೀ ಬ್ಯಾಂಕುಗಳಲ್ಲಿ ಕಡಿಮೆ ಬಡ್ಡಿಗೆ ತೊಡಗಿಸುತ್ತಿದ್ದಾಗಲೂ ಈ ಬ್ಯೂರೋ ನಿದ್ದೆ ಮಾಡುತ್ತಿದ್ದು ನಿದ್ದೆ ಮಾಡುತ್ತಿತ್ತು ಎಂದರೆ ತಪ್ಪಾಗುತ್ತದೆ. ನಿಜದಲ್ಲಿ ಈ ಬ್ಯೂರೋ ಅಧಿಕಾರಿಗಳು ಹಗರಣದಲ್ಲಿ ಶಾಮಿಲಾಗಿರುತ್ತಾರೆ.

ಭಾರತದ ಕಂಟ್ರೋಲರ್ ಆಫ್ ಎಕೌಂಟ್ಸ್ ಜನರಲ್ ಸಹ ತನ್ನ ವರದಿಯಲ್ಲಿ ಬ್ಯೂರೋದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸಿದೆ.

ರೈತ, ಬಡಗಿ ಕಮ್ಮಾರರ, ಬೇಡ ಕಟುಕರ ಜೀವನದಿಂದ ಉದಿಸಿದ ತತ್ವಜ್ಞಾನ

ಲೋಕಾಯತ

ಕರ್ತೃ- ದಿವಂಗತ ಪ್ರೋ. ದೇವಿ ಪ್ರಸಾದ್ ಚಟ್ಟೋಪಾಧ್ಯಾಯ

ಕಾಲವೊಂದಿತ್ತು, ಭಾರತದಲ್ಲಿ ಎಲ್ಲವೂ ಭಗವದ್ಗೀತೆಮಯವಾಗಿತ್ತು. ಭಗವದ್ಗೀತೆಯಿಂದಲೇ ಶಂಕರರ ಪಂಥ ಅದರಿಂದಲೇ ರಾಮಾನುಜಾಚಾರ್ಯರ, ಮಧ್ವಾಚಾರ್ಯರ ಪಂಥಗಳು. ಗೀತೆಯ ಈ ಶ್ಲೋಕಕ್ಕೆ ಅರ್ಥ ಹೀಗೆ ಅರ್ಥ ಹಾಗೆ ಎಂಬ ಚರ್ಚೆ, ಜಿಜ್ಞಾಸೆ. ಭಾರತಕ್ಕೆ ವೇದ ವೇದಾಂತಗಳೇ ಎಲ್ಲಾ ಅದನ್ನು ಬಿಟ್ಟರೆ ಬೇರೆ ಏನಿಲ್ಲ ಎಂದು ಎಲ್ಲರೂ ಹೇಳುತ್ತಿದ್ದರು. ಮತ್ತೂ ಹೇಳುತ್ತಿದ್ದರು ಭಾರತದಲ್ಲಿ ವರ್ಗ ಸಂಘರ್ಷವೆಂಬುದೇ ಇಲ್ಲ ನಮ್ಮ ವೇದ ಉಪನಿಷತ್ತುಗಳನ್ನು ನೋಡಿ ಅಲ್ಲಿ ಎಲ್ಲಾದರೂ ವರ್ಗಗಳ ವರ್ಗ ಸಂಘರ್ಷಗಳ ಸುಳಿವಿದೆಯೇ ಎಂತಹ ಆರ್ಷೇಯ ಜೀವನ! ಎಂತಹ ಶಾಂತಿ ಸಮಾಧಾನ ಬದುಕು!! ಓ ಶಾಂತಿಃ ಶಾಂತಿಃ ಶಾಂತಿಃ.

ಇದು ಕೇವಲ ಪಾಳೆಯಗಾರಿ ಯುಗದ ಕತೆ ಮಾತ್ರವಲ್ಲ ಭಾರತದಲ್ಲಿ ನವೋದಯ ಎಂದು ಸಮಾಜ ಸುಧಾರಣೆಗಳ ಪರಂಪರೆಯೇ ಆರಂಭವಾದ ಮೇಲೂ ಆರ್ಯ ಸಮಾಜ ರಾಮಕೃಷ್ಣಾಶ್ರಮ, ಪ್ರಾರ್ಥನಾ ಸಮಾಜಗಳಂತಹ ಸಂಸ್ಥೆಗಳು ಹಿಂದೂ ಧರ್ಮದ ಅನೇಕ ಆಚರಣೆಗಳನ್ನು ಖಂಡಿಸಿದರೇ ಹೊರತು ಮೂಲದ ತತ್ವ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ವೇದದ ಭಗವದ್ಗೀತೆಗಳೇ ಪ್ರಮಾಣಗಳಾದವು ಶೋಷಣೆಯ ಭದ್ರ ಅಡಿಪಾಯದ ಈ ಸಿದ್ಧಾಂತಗಳನ್ನು ಶೋಷಣೆಯನ್ನು ಮುಂದುವರಿಸಲು ಬಯಸಿದ ಆಳುವ ವರ್ಗಗಳಿಂದ ಬಂದ ಸುಧಾರಣೆಗಳು ಅಲುಗಾಡಿಸಲಿಲ್ಲ.

ಇಂತಹ ಸಂದರ್ಭದಲ್ಲಿ "ಲೋಕಾಯತ"- ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಕೃತಿ ಅಲ್ಲಿಯವರೆಗೆ ಪ್ರಧಾನವಾಗಿದ್ದ ಚಿಂತನೆಯ ಬೇರುಗಳನ್ನು ಹಿಡಿದು ಅಲುಗಾಡಿಸಿತು. ಆಳುವ ವರ್ಗಗಳ ಪಾತಾಳದಾಳಕ್ಕೆ ತುಳಿದಿದ್ದ ಜನಸಾಮಾನ್ಯರ ಜೀವನದ ಅನುಭವದಿಂದ ಮೂಡಿದ ಭೌತಿಕ ಚಿಂತನೆಗಳನ್ನು ಅಗೆದು ಹೊರತೆಗೆದು ಭಾರತದ ದುಡಿಯುವ ವರ್ಗಕ್ಕೆ ಒಂದು ಆಯುಧವನ್ನೊದಗಿಸಿತು. ರಾಮಾಯಣದಲ್ಲಿಯೇ ಬರುವ ಚಾರ್ವಾಕನ ಪ್ರಸ್ತಾಪದ ಒಂದು ಸಣ್ಣ ಸಾಲಿನಿಂದ ಆರಂಭಿಸಿ ಕರ್ನಾಟಕದ ವಿದ್ಯಾರಣ್ಯ ಅಥವಾ ಮಾಧವಾಚಾರ್ಯ (ವಿಜಯನಗರದ ಸಂಸ್ಥಾಪಕರು ಎಂದು ಪ್ರಸಿದ್ಧಿ) ಸರ್ವದರ್ಶನ ಸಂಗ್ರಹದಲ್ಲಿ ಚಾರ್ವಾಕವಾದದ ಬಗೆಗಿರುವ ದೂಷಣೆಗಳಿಂದ (ಬಯ್ಗುಳಗಳು) ಚಾರ್ವಾಕವಾದ ಶಕ್ತಿ, ಸಾಮರ್ಥ್ಯ ಹಾಗೂ ಅದರ ಸಿದ್ಧಾಂತಗಳನ್ನು ಸಂಗ್ರಹಿಸಿ ಬೆಳೆಯಿಸಿದ ಈ ಧೀಮಂತಿಕೆ ಭಾರತೀಯ ತತ್ವಶಾಸ್ತ್ರದಲ್ಲಿ ಒಂದು ಹೊಸ ಬೆಳಕನ್ನು ಮೂಡಿಸಿತು. ಸಾವಿರಾರು ಬುದ್ಧಿ ಜೀವಿಗಳು ಸಾಹಿತಿಗಳು ಅದರಿಂದ ಪ್ರಭಾವಿತರಾದರು.

ಲೋಕಾಯತ ಗ್ರಂಥದಲ್ಲಿ "ಗಣಪತಿ"ಯ, ಗೌರಿಯ ಕಲ್ಪನೆಗಳ ಬಗ್ಗೆ ಅಂದಿನ ಗಿರಿಜನ ಪಂಗಡಗಳ ಬಗ್ಗೆ ಕೊಟ್ಟ ವೈಜ್ಞಾನಿಕ ವಿವರಣೆ ಹಿಂದೂ ದೇವಾನುದೇವತೆಗಳ ಚಿತ್ರ ವಿಚಿತ್ರ ಪ್ರಪಂಚ ಮತ್ತು ಅವುಗಳ ಉಗಮ ಅರ್ಥವಾಗದೆ ತೊಳಲಾಡುತ್ತಿದ್ದವರಿಗೆ ಹೊಸ ಕಣ್ಣೋಟವನ್ನೊದಗಿಸಿತು.

ಭಾರತೀಯ ವಿಜ್ಞಾನ- ವೈದ್ಯಶಾಸ್ತ್ರ ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಖಗೋಳಶಾಸ್ತ್ರಗಳ ಶಕ್ತಿಯ ಚಿಲುಮೆಯಾಗಿದ್ದ, ಇಲ್ಲಿಯ ಜನರ ಬದುಕಿನ ಮಧ್ಯದಿಂದಲೇ ಮೊಳೆತ ಷಡ್ದರ್ಶನಗಳನ್ನು ಜೀರ್ಣಿಸಿಕೊಂಡು ಅವನ್ನು ಮುಗಿಸಿಬಿಡಲು ಭಾರತದ ಆಳುವ ವರ್ಗಗಳು ಮಾಡಿದ ಪ್ರಯತ್ನವನ್ನು ಅದರಿಂದ ಭಾರತದ ಬೆಳವಣಿಗೆಗೆ ಉಂಟಾದ ಹರಕತ್ತನ್ನು ಎತ್ತಿ ತೋರಿಸಿತು ಲೋಕಾಯತ ಗ್ರಂಥ. ಪೂರ್ವ ಮೀಮಾಂಸೆ, ಸಾಂಖ್ಯ, ನ್ಯಾಯ, ವೈಶೇಷಿಕ, ಯೋಗ, ಮೊದಲಾದ ಈ ಷಡ್ದರ್ಶನಗಳಲ್ಲಿ ಭಾರತೀಯ ಬದುಕಿನ ಜೀವಂತಿಗೆ ಒಡಮೂಡಿರುವುದನ್ನು ಅಂದರೆ ಕಮ್ಮಾರ, ಬಡಗಿ, ರೈತ, ಬೇಡ, ಕಟುಕ (ಮಾಂಸ ಮಾರುವವರು)ರ ಅನುಭವಗಳಿಂದ ತತ್ವಶಾಸ್ತ್ರ ಹೊರ ಹೊಮ್ಮಿದ ಬಗೆಯನ್ನು ಬಣ್ಣಿಸುತ್ತದೆ, ದೇವಿ ಪ್ರಸಾದ್ ಚಟ್ಟೋಪಾಧ್ಯಾಯರ "ಲೋಕಯುತ" ಗ್ರಂಥ. ಆದುದರಿಂದಲೇ ಈ ಗ್ರಂಥ ಭಾರತದ ದುಡಿಯುವ ಜನ ಕೋಟಿ ಓದಲೇ ಬೇಕಾದ ಪುಸ್ತಕವಾಗಿದೆ. ಕನ್ನಡದಲ್ಲಿ ಅದರ ಸರಳ ರೂಪಗಳು ದೊರೆಯುತ್ತವೆ. (ಬಾಕ್ಸ್ ನೋಡಿ) ಮಹತ್ವದ ಈ ಸಂಶೋಧನೆಯ ವಿವರಗಳು ಅವರ ಮುಂದಿನ ಅನೇಕ ಗ್ರಂಥಗಳಿಗೆ (ಗ್ರಂಥಗಳ ಪಟ್ಟಿಗೆ ಹಿಂದಿನ ಸಂಚಿಕೆಯನ್ನು ನೋಡಿ) ಆಸರೆಯಾಯಿತು. ಇದೇ ಸಂಶೋಧನೆ ಪ್ರೊ. ಚಟ್ಟೋಪಾಧ್ಯಾಯರು ತಮ್ಮ ಕೊನೆಯ ವರ್ಷಗಳಲ್ಲಿ ಭಾರತದ ವಿಜ್ಞಾನದ ಇತಿಹಾಸ ನಿರ್ಮಾಣಕ್ಕೆ ಮುಡುಪಿಡಲು ಕಾರಣವಾಯಿತು.

ಓದಿ

ಲೋಕಾಯತ
ಭಾರತೀ ಪ್ರಕಾಶನ

ಪ್ರಾಚೀನ ಭಾರತದಲ್ಲಿ ಭೌತಿಕವಾದ
ನವಕರ್ನಾಟಕ ಪ್ರಕಾಶನಪ್ರಕಾಶನ

ಗಣಪತಿಯ ಕಲ್ಪನೆ
-ಗಂಗಾಧರ ಮೂರ್ತಿ

-- ಜೆ.ಎಸ್. ನಾಗರಾಜ್

ಒಟ್ಟಪಾಲಂ ಚುನಾವಣೆ ತಡೆ ಏಕೆ? ಸಂಸತ್ತಿನಲ್ಲಿ ಸಿಪಿಎಂ ಪ್ರಶ್ನೆ

--ವಿಶ್ವ

ಸಂಸತ್ತಿನಲ್ಲಿ ನಮ್ಮವರು

ಕೇರಳದ ಒಟ್ಟಪಾಲಂ ಮತ್ತು ತಮಿಳುನಾಡಿನ ಪಳನಿ ಲೋಕಸಭಾ ಕ್ಷೇತ್ರಗಳಲ್ಲಿ ಮೇ 19ರಂದು ನಡೆಯಬೇಕಿದ್ದ ಉಪಚುನಾವಣೆಯನ್ನು ಚುನಾವಣಾ ಆಯೋಗ ಮುಂದೂಡಿದ ಕ್ರಮ 10ರಂದು ಸಂಸತ್ತಿನ ಉಭಯ ಸದನಗಳಲ್ಲಿ ಟೀಕೆಗೆ ಒಳಗಾಯಿತು. ರಾಜ್ಯಸಭೆಯಲ್ಲಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು.

ಒಟ್ಟಪಾಲಂ ಕ್ಷೇತ್ರದ ಚುನಾವಣೆ ಮುಂದೂಡಿಕೆಗೆ ಕಾಂಗ್ರೆಸ್(ಐ) ಮತ್ತು ಬಿಜೆಪಿಗಳೇ ಹೊಣೆ ಎಂದು ಲೋಕಸಭೆಯಲ್ಲಿ ಸಿಪಿಐ(ಎಂ)ನ ಸುಶೀಲಾ ಗೋಪಾಲನ್ ಹೇಳಿದರು.

ಚುನಾವಣೆಗಳನ್ನು ನಡೆಸಲು ಇಷ್ಟಕ್ಕಿಷ್ಟಂತೆ ಅಡೆತಡೆಗಳು ಎದುರಾಗಿದೆ ಎಂದು ಸಿಪಿಐ(ಎಂ)ನ ನಿರ್ಮಲ್ ಚಟರ್ಜಿ ವ್ಯಂಗ್ಯವಾಗಿನುಡಿದರು. ಮತದಾನಕ್ಕೆ ತೊಂದರೆಯಾಗುವಂಥ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯೂ ಸೇರಿದಂತೆ ಮತದಾನ ಮುಂದೂಡಿಕೆಗೆ ಸಂಬಂಧಿಸಿದಂತೆ ಸರಕಾರ ಹೇಳಿಕೆ ನೀಡಬೇಕೆಂದು ಒತ್ತಾಯಪಡಿಸಿತು.

ನಬಾರ್ಡ್(ಕೃಷಿ ಬ್ಯಾಂಕ್) ಅನ್ನು ಖಾಸಗೀಕರಿಸುವುದಿಲ್ಲ ಎಂದು ಸ್ಪಷ್ಟವಾಗಿ ಭರವಸೆ ನೀಡುವಂತೆ ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜಿ ಕೃಷಿ ಸಚಿವರನ್ನು ಪಟ್ಟು ಹಿಡಿದು ಒತ್ತಾಯಿಸಿದರು. ಸಚಿವ ಜಾಖಡ್ ಬಹಳ ಹೊತ್ತಿನ ನಂತರ ಬಹುಶಃ ಅದನ್ನು ಖಾಸಗೀಕರಿಸುವುದಿಲ್ಲ ಎಂದು ಹೇಳಿದರು.

ಹಣಕಾಸು ಮಸೂದೆ ಮೇಲೆ ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಐ(ಎಂ) ಸದಸ್ಯ ಅಶಿಶ್ ಸೇನ್, ಆದಾಯ ತೆರಿಗೆ ವಿನಾಯ್ತಿಯನ್ನು ಏರಿಸಿರುವುದು ಕಣ್ಣೊರೆಸುವ ತಂತ್ರ ಎಂದು ವರ್ಣಿಸಿದರು. ಇದು ಕೇವಲ ತೋರಿಕೆಯ ಪರಿಹಾರವಾಗಿದೆ ಎಂದರು. ಸಾರ್ವಜನಿಕ ರಂಗದ ಉದ್ಯಮ ಘಟಕಗಳ ಷೇರುಗಳನ್ನು ಖಾಸಗಿಯವರಿಗೆ ಮಾಡುವ ಕ್ರಮವನ್ನು ಅವರು ಕಟುವಾಗಿ ಟೀಕಿಸಿದರು. ಶ್ರೇಷ್ಠ ದರ್ಜೆಯ ಘಟಕಗಳ ಷೇರು ಮಾರಾಟದಿಂದ ಸಾರ್ವಜನಿಕ ದೊಕ್ಕಸಕ್ಕೆ 3400 ಕೋಟಿ ರೂ. ನಷ್ಟ ಸಂಭವಿಸುತ್ತದೆ ಎಂದರು.

ಭಾರತೀಯ ಜನತಾ ಪಕ್ಷ ಆಡಳಿತದಲ್ಲಿದ್ದ ನಾಲ್ಕು ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಾಸ್ತಾನ ಮತ್ತು ಹಿಮಾಚಲ ಪ್ರದೇಶಗಳಲ್ಲಿ ರಾಷ್ಟ್ರಪತಿ ಆಡಳಿತವನ್ನು ಇನ್ನೂ ಆರು ತಿಂಗಳ ಕಾಲ ವಿಸ್ತರಿಸುವಲ್ಲಿ ಸಂಸತ್ತು ಅನುಮೋದನೆ ನೀಡಿದೆ. ಮೇ 12ರಂದು ಲೋಕಸಭೆ, 13ರಂದು ರಾಜ್ಯಸಭೆ ಸಂಬಂಧಪಟ್ಟ ಗೊತ್ತುವಳಿಗಳನ್ನು ಅಂಗೀಕರಿಸಿತು.

ಗೊತ್ತುವಳಿ ಮೇಲೆ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಸಿಪಿಐ(ಎಂ)ನ ಅಜಯ್ ಮುಖ್ಯೋಪಾಧ್ಯಾಯ ಪಾಲ್ಗೊಂಡಿದ್ದರು. ಈ ನಾಲ್ಕು ರಾಜ್ಯಗಳಲ್ಲಿ ಚುನಾವಣೆಗಳನ್ನು ನಡೆಸಲು ವಿಳಂಬ ಮಾಡುವುದರಿಂದ ಅಲ್ಲಿನ ಜನರು ಚುನಾಯಿತ ಸರಕಾರವನ್ನು ಹೊಂದುವ ಅವಕಾಶದಿಂದ ವಂಚಿತರಾಗುತ್ತಾರೆ ಎಂದು ಅಜಯ್ ಹೇಳಿದರು.

ರಾಷ್ಟ್ರಪತಿ ಆಡಳಿತ ವಿಸ್ತರಣೆ ಗೊತ್ತುವಳಿಗಳ ಮೇಲೆ 13ರಂದು ರಾಜ್ಯಸಭೆಯಲ್ಲಿ ಚರ್ಚೆ ನಡೆಯಿತು. ಸಿಪಿಐ(ಎಂ)ನ ಸುಕೋಮಲ್ ಸೇನ್ ಭಾಗವಹಿಸಿದರು. ಚುನಾವಣಾ ಲಾಭಕ್ಕಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಗಳೆರಡೂ ಧಾರ್ಮಿಕ ಭಾವನೆಗಳನ್ನು ಬಳಸಿಕೊಳ್ಳುತ್ತಿವೆ ಎಂದು ಅವರು ಟೀಕಿಸಿದರು. ಬಿಜೆಪಿ ಮತ್ತು ಅದರ ಸಹವರ್ತಿ ಸಂಸ್ಥೆಗಳು ಎಸೆದಿರುವ ಕೋಮುವಾದ ಹಾಗೂ ಮೂಲಭೂತವಾದದ ಸವಾಲನ್ನು ಎದುರಿಸಲು ನಿಷ್ಪಕ್ಷಪಾತವಾದ ಆಡಳಿತ ನೀಡಬೇಕು ಎಂದು ಸೇನ್ ಮನವಿ ಮಾಡಿದರು.

ಪ್ರತಿಭಾ ಪಲಾಯನಕ್ಕೆ ಕಳವಳ

ದೇಶದ ವಿಜ್ಞಾನಿಗಳು ವಿದೇಶಗಳಿಗೆ ವಲಸೆ ಹೋಗುವ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಮೇ 13ರಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಸರಳಾ ಮಹೇಶ್ವರಿ ಕಳವಳ ವ್ಯಕ್ತಪಡಿಸಿದರು.

ಎಂ.ಪಿ.ಗಳ ಸೌಲಭ್ಯ ಹೆಚ್ಚಳಕ್ಕೆ ಆಕ್ಷೇಪ

ಸಂಸತ್ ಸದಸ್ಯರ ವೇತನ ಮತ್ತು ಭತ್ಯೆಗಳು ಹಾಗೂ ನಿವೃತ್ತ ಸಂಸತ್ ಸದಸ್ಯರ ಪಿಂಚಣಿಯನ್ನು ಹೆಚ್ಚಿಸುವ ಕುರಿತ ಒಂದು ಮಸೂದೆಗೆ ಲೋಕಸಭೆ 13 ರಂದು ಅಂಗೀಕಾರ ನೀಡಿತು. ಏರಿಕೆಗೊಂಡ ಸಂಬಳ-ಸವಲತ್ತುಗಳನ್ನು ಪಡೆಯಲು ಆಯ್ಕೆಗೆ ಅವಕಾಶ ಕೊಡುವ ಮೂಲಕ ಸರಕಾರ 'ಸದಸ್ಯರ ಎರಡು ವಿಭಾಗಗಳನ್ನು ಮಾಡಲು' ಪ್ರಯತ್ನಿಸುತ್ತಿವೆ ಎಂದು ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜಿ ಟೀಕಿಸಿದರು.

ನಿವೃತ್ತ ವೇತನದ ಹೆಚ್ಚಳದ ಮಟ್ಟವನ್ನು ಅವರು ಆಕ್ಷೇಪಿಸಿದರು. ಈ ಹೆಚ್ಚಳಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲ ಎಂದು ಪ್ರತಿಪಾದಿಸಿದರು.

ಮುಂಬಯಿ ಸ್ಫೋಟ ಪ್ರಕರಣದ ತನಿಖಾ ಪ್ರಗತಿ ಬಗ್ಗೆ ಮೇ 14ರಂದು ರಾಜ್ಯಸಭೆಯಲ್ಲಿ ವಿಶೇಷ ಚರ್ಚೆ ನಡೆಯಿತು. ಸಿಪಿಐ(ಎಂ)ನ ಆರ್.ಸಿ. ಗಂಗಾರೆ ಚರ್ಚೆಯಲ್ಲಿ ಭಾಗವಹಿಸಿದ್ದರು.

ಜನರ ಜೀವನದೊಂದಿಗೆ ಚೆಲ್ಲಾಟವಾಡುವುದು ಹಾಗೂ ಮನಸ್ಸಿನಲ್ಲಿ ಭೀತಿಯನ್ನು ಸೃಷ್ಟಿಸುವುದು ಸ್ಫೋಟಗಳ ಸೂತ್ರಧಾರರ ಉದ್ದೇಶ ಎಂದು ಗಂಗಾರೆ ಹೇಳಿದರು.

ಈ ಅವಧಿಯಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳೆರಡೂ 45 ಮಸೂದೆಗಳನ್ನು ಅಂಗೀಕರಿಸಿದವು. ಇದೊಂದು ದಾಖಲೆಯಾಗಿದೆ.

ರೈಲ್ವೆ ಬಜೆಟ್ ಮೇಲಿನ ಚರ್ಚೆಯನ್ನು ಪೂರ್ಣಗೊಳಿಸಲಿಕ್ಕಾಗಿ ಲೋಕಸಭೆ ಕಲಾಪ ಮಾರ್ಚ್ 30ರ ಬೆಳಿಗ್ಗೆ 11ರಿಂದ 31ರ ಮುಂಜಾನೆ 6.25ರವರೆಗೆ ನಡೆದಿದ್ದು ಇನ್ನೊಂದು ದಾಖಲೆಯಾಗಿದೆ. 1971ರಲ್ಲಿ ಸದನ ಸೆಪ್ಟೆಂಬರ್ 18ರ ಮುಂಜಾನೆ 4.41 ರವರೆಗೆ ಕಲಾಪ ನಡೆಸಿದ್ದು ಈ ಹಿಂದಿನ ದಾಖಲೆಯಾಗಿತ್ತು.

ರಾಜ್ಯಸಭೆ ಸದಸ್ಯರಿಗೆ ವಿದಾಯ

ರಾಜ್ಯಸಭೆಯ ಏಳು ಮಂದಿ ಸದಸ್ಯರು ಜುಲೈನಲ್ಲಿ ನಿವೃತ್ತರಾಗಲಿದ್ದಾರೆ. ಪ್ರಸಕ್ತ ಅಧಿವೇಶನದ ಕೊನೆಯ ದಿನವಾದ ಮೇ 14ರಂದು ತಮ್ಮ ಸಹೋದ್ಯೋಗಿಗಳನ್ನು ಸದಸ್ಯರು ಬೀಳ್ಕೊಟ್ಟರು.

ನಿವೃತ್ತರಾಗಿರುವವರು : ಸಿಪಿಐ(ಎಂ)ನ ಸಮರ್ ಮುಖರ್ಜಿ, ದಿಪೇನ್ ಘೋಷ್, ರಾಮನಾರಾಯಣ ಗೋಸ್ವಾಮಿ, ಡಾ.ಆರ್.ಕೆ. ಪೊದ್ದಾರ್, ಸುನಿಲ್ ಬಸು ರಾಯ್, ಆರ್.ಎಸ್.ಪಿಯ ತ್ರಿದಿಬ್ ಚೌಧರಿ ಮತ್ತು ಕಾಂಗ್ರೆಸ್‌ನ ಜಾನ್.ಎಫ್. ಫೆರ್ನಾಂಡಿಸ್.

ಸಮರ್ ಮುಖರ್ಜಿಯವರನ್ನು ಹಿರಿಯ ಸಂಸದೀಯ ಪಟು ಎಂದು ತಮ್ಮ ವಿದಾಯ [illegible]ದಲ್ಲಿ ಉಪಸಭಾಪತಿ ನಜ್ಮಾ ಹೆಪ್ತುಲ್ಲಾ ವರ್ಣಿಸಿದರು. ಮುಖರ್ಜಿ ತಮ್ಮ ಇರುವಿಕೆಯಿಂದ ಸದನಕ್ಕೆ ಗೌರವ ತಂದಿದ್ದರು ಎಂದರು. ದೀಪೇನ್ ಘೋಷ್ ಸದನದ ಕಾರ್ಯಕಲಾಪಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದರು ಎಂದು ಹೆಪ್ತುಲ್ಲಾ ಹೇಳಿದರು.

ಉಕ್ಕಿನ ಕಾರ್ಖಾನೆ ಆರಂಭವಾಗಬೇಕು ಆದರೆ ಖಾಸಗೀ ಮಾಲೀಕರು ಸಂಪತ್ತು ದೋಚಲು ಅಲ್ಲ

ವಿಜಯನಗರ ಉಕ್ಕು ಕಾರ್ಖಾನೆಯನ್ನು ಆರಂಭಿಸುವ ದಿಶೆಯಲ್ಲಿ ಕರ್ನಾಟಕ ಸರ್ಕಾರ ಸಚಿವ ಸಂಪುಟ ತೆಗೆದುಕೊಂಡ ನಿರ್ಣಯದ ಪ್ರಯತ್ನಗಳು ಸ್ವಾಗತಾರ್ಹವೆಂದು ಡಿ.ವೈ.ಎಫ್.ಐ ರಾಜ್ಯ ಸಮಿತಿಯು ಅಭಿಪ್ರಾಯ ಪಟ್ಟಿದೆ.

ಆದರೆ ಇದರ ಶೇ ಕಡಾ 90 ರಷ್ಟು ಪಾಲು ಖಾಸಗೀ ಕಂಪನಿಗಳಿಗೆ ವಹಿಸಲಿರುವ ನಿರ್ಧಾರವನ್ನು ಡಿ.ವೈ.ಎಫ್.ಐ. ವಿರೋಧಿಸಿದೆ. ಇದರಿಂದಾಗಿ ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸಿ ಸ್ವಾವಲಂಬನೆ, ಸಾರ್ವಭೌಮತೆಯ ತತ್ವವನ್ನು ಕಾಂಗ್ರೆಸ್(ಐ) ಸಂಪೂರ್ಣ ಮೂಲೆಗೆ ತಳ್ಳಿ ದೇಶದ ಮೂಲ ಕೈಗಾರಿಕಾ ಘಟಕಗಳು ಖಾಸಗಿ ಬಂಡವಾಳಿಗಾರರಿಗೆ ಒಪ್ಪಿಸುವ ಹುನ್ನಾರವಿದೆಯೆಂದು ಡಿ.ವೈ.ಎಫ್.ಐ. ಉಗ್ರವಾಗಿ ಟೀಕಿಸಿದೆ.

ನೆನೆಗುದಿಗೆ ಬಿದ್ದಿರುವ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಜಂಟಿ ಕ್ಷೇತ್ರದಲ್ಲಾದರೂ ಸ್ಥಾಪಿಸಿ ಎಂದು ಕಳೆದ 3 ತಿಂಗಳ ಹಿಂದೆ ಕೇಂದ್ರ ಉಕ್ಕು ಸಚಿವರನ್ನು ಡಿ.ವೈ.ಎಫ್.ಐ. ರಾಜ್ಯ ನಿಯೋಗ ಆಗ್ರಹಿಸಿತ್ತು. ಅವರೂ ಒಪ್ಪಿದ್ದರು ಆದರೆ ರಾಜ್ಯ ಸರ್ಕಾರ ಕೇವಲ ಶೇ. 10 ಮಾತ್ರ ಹಣ ಹೂಡುವುದು ಆಡಳಿತದಲ್ಲಿ ಎಳ್ಳಿನ ಕಾಳಿನಷ್ಟು ನಗಣ್ಯ ಪಾಲು ಅದಾಗುವುದು. ಬಂಡವಾಳ ಹೂಡಿಕೆಯ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಕೈತೊಳೆದುಕೊಂಡು ಐ.ಎಂ.ಎಫ್. ವಿಶ್ವಬ್ಯಾಂಕಗಳ ನೀಡಿದ ಆಜ್ಞೆ ನಡೆಸಿಕೊಳ್ಳತೊಡಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಜನಸಂಘಟನೆಗಳು, ಪ್ರತಿನಿಧಿಗಳು ಸಭೆ ಕರೆಯಬೇಕೆಂದು ಡಿ.ವೈ.ಎಫ್ ಕರೆ ನೀಡಿದೆ. ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ನಿರ್ಧರಿಸಿದೆ.

ಕೆ.ಜಿ.ಎಫ್ : ಬಿ.ಇ.ಎಮ್.ಎಲ್ ಚುನಾವಣೆಯಲ್ಲಿ ಸಿ.ಐ.ಟಿ.ಯು ಬೆಂಬಲಿತ ಅಭ್ಯರ್ಥಿಗಳ ಪ್ರಚಂಡ ಸ್ಪರ್ಧೆ

ಬಿ.ಇ.ಎಮ್.ಎಲ್ ಕಾರ್ಖಾನೆಯ ಕಾರ್ಮಿಕ ಕಲ್ಯಾಣ ನಿಧಿ ಕಮಿಟಿ, ಕ್ಯಾಂಟಿನ್ ಕಮಿಟಿ, ವರ್ಕ್ ಕಮಿಟಿಗಳಿಗಾಗಿ ಇದೇ ತಿಂಗಳ 27ರಂದು ಚುನಾವಣೆ ನಡೆಯಲಿದೆ.

ಕಳೆದ ಎರಡು ಚುನಾವಣೆಗಳಲ್ಲಿ ಸಿ.ಐ.ಟಿ.ಯು ಅಭ್ಯರ್ಥಿಗಳು ಯು.ಡಿ.ಎಫ್. (ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್)ನ ವಿರುದ್ಧ ಸತತ ಸೋಲನ್ನು ಅನುಭವಿಸಿದ್ದಾರೆ. ಸಿ.ಐ.ಟಿ.ಯು ಬೆಂಬಲಿಗರು ಹಾಗೂ ಕಾರ್ಯಕರ್ತರು ಹಿಂದೆ ಸಿ. ಡಬ್ಲ್ಯೂ.ಸಿ ಸಂಘಟನೆಯ ಹೆಸರಲ್ಲಿ ಕೆಲಸ ಮಾಡುತ್ತಿದ್ದಾಗ ಕಾರ್ಮಿಕರಿಗೆ ಸಾರಿಗೆ ವ್ಯವಸ್ಥೆ, ಪ್ರಮೋಷನ್‌ಗೆ ಕ್ಯಾರಿಯರ್ ಡೆವಲಪ್‌ಮೆಂಟ್ ಪ್ಲಾನ್ ಮತ್ತು ಇನ್ನು ಹಲವಾರು ಸೌಲಭ್ಯಗಳನ್ನು ಮ್ಯಾನೆಜಮೆಂಟ್ ವಿರುದ್ಧ ಹೋರಾಡಿ ಕೊಡಿಸಿತ್ತು. ಇದರಿಂದಾಗಿ ಹೆಚ್ಚುತ್ತಿದ್ದ ಸಿ.ಐ.ಟಿ.ಯು.ವಿನ ಬಲವನ್ನು ಕಂಡು ಬೆಕಂದ ಇತರ ಪಕ್ಷಗಳು ಅಂದರೆ ಕಾಂಗ್ರೆ ಜನತಾದಳ, ಡಿ.ಎಂ.ಕೆ., ಎ.ಐ.ಡಿ.ಎಂ.ಕೆ., ಬಿಜೆಪಿ., ಆರ್.ಪಿ.ಯು ಇತರ ಪಕ್ಷಗಳ ಕಾರ್ಮಿಕ ಸಂಘಗಳು ಒಟ್ಟಾಗಿ ಸೇರಿ ಯು.ಡಿ.ಎಫ್. ಎಂಬ ಹೆಸರಲ್ಲಿ ಹೊಸ ಸಂಘವನ್ನು ಹುಟ್ಟಿ ಹಾಕಿ ಆ ಮೂಲಕ ಸಿ.ಡಬ್ಲ್ಯುಸಿ ಯನ್ನು ಸೋಲಿಸಿದರು.

ಅದರ ಮುಂದಿನ ಚುನಾವಣೆಯಲ್ಲಿ ಬಿ.ಜೆ.ಪಿ. ಸಿಡಿದು ವರ್ಕಸ್ ಯುನಿಟಿ ಫಾರ್ಮ್ ಎಂಬ ಹೆಸರಲ್ಲಿ ಸ್ಪರ್ಧಿಸಿತು. ಆದರೆ ಯು.ಡಿ.ಎಫ್.ನ ಎದುರು ಸೋಲನ್ನು ಅನುಭವಿಸಬೇಕಾಯಿತು. ಆದರೆ ಕಳೆದ ಐದು ವರ್ಷದಿಂದ ಏನನ್ನು ಸಾಧಿಸದ ಯು.ಡಿ.ಎಫ್.ವಿರುದ್ಧ ಈಗ ಕಾರ್ಮಿಕರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಹಿಂದೆ ಯು.ಡಿ.ಎಫ್.ನಿಂದ ಆಯ್ಕೆ ಆಗಿದ ಪ್ರಧಾನ ಕಾರ್ಯದರ್ಶಿ ಹಾಗೂ ಸಹ ಕಾರ್ಯದರ್ಶಿಗಳು ಬೇರೆ ತಮ್ಮ ಸ್ವಂತ ಸಂಘಗಳನ್ನು ರಚಿಸಿ ಈಗ ಪ್ರತ್ಯೇಕವಾಗಿ ಸ್ಪರ್ಧಿಸಲಿದ್ದಾರೆ. ಒಂದು ವರ್ಕಸ್ ಯುನಿಟಿ ಸೆಂಟರ್ (ಡಬ್ಲ್ಯೂ.ಯು.ಸಿ.) ಇನ್ನೊಂದು ಪ್ರೋಗ್ರೆಸಿವ್ ವರ್ಕಸ್ ಕಮಿಟಿ (ಪಿ.ಡಬ್ಲ್ಯೂ.ಸಿ.) ಈ ಹೊಸ ಬೆಳವಣಿಗೆಯಿಂದ ಯು.ಡಿ.ಎಫ್.ನ ಬಲ ಕುಗ್ಗಿದೆ.

ಹಿಂದೆ ಹಿರಿಯ ಕಾರ್ಮಿಕರಿಗೆ ಕೆಲಸದ ಸಮಯದಲ್ಲಿ ಟೈಮ್ ಅಡ್ಜಸ್ಟ್‌ಮೆಂಟ್ ಎಂಬ ಸೌಲಭ್ಯವನ್ನು ಸಿ.ಡಬ್ಲ್ಯುಸಿ. ಒದಗಿಸಿತ್ತು. ಆದರೆ ಈ ಸೌಲಭ್ಯ ಯು.ಡಿ.ಎಫ್. ಮ್ಯಾನೆಜಮೆಂಟ್‌ನವರಿಗೆ ವಹಿಸಿಕೊಟ್ಟಿದೆ. ಮತ್ತೆ ಇನ್ನೊಂದು ಸ್ವಾರಸ್ಯಕರ ವಿಷಯ ಎಂದರೆ ಯಾವುದೇ ಪಬ್ಲಿಕ್ ಸೆಕ್ಟಾರ್ ಕಾರ್ಖಾನೆಗಳಲ್ಲಿ ಇಲ್ಲದ ಕಾರ್ಮಿಕರೇ ದುಡ್ಡು ಕೊಟ್ಟು ಪೆನ್‌ಶನ್ ಪಡೆಯುವ ನಿರ್ಣಯವನ್ನು ಕಾರ್ಮಿಕರಿಗೇ ತಿಳಿಯದೇ ಆಡಳಿತವರ್ಗದೊಂದಿಗೆ ಶಾಮಿಲಾಗಿ ಕೈಗೊಂಡಿದೆ. ಈ ದ್ರೋಹದಿಂದಾಗಿ ಈಗ ಕಾರ್ಮಿಕರು ಯು.ಡಿ.ಎಫ್.ನ ವಿರುದ್ಧ ಕಿಡಿ ಕಾರುತ್ತಿದ್ದಾರೆ.

ಈಗ ಸಿ.ಐ.ಟಿ.ಯು.-ಸಿ.ಡಬ್ಲ್ಯೂ.ಸಿ. ಇನು ಕೆಲವು ಸಂಘಟನೆಗಳು ಸೇರಿಸಿಕೊಂಡು ಜಂಟಿಯಾಗಿ ಸ್ಪರ್ಧಿಸುತ್ತಿದೆ. ಈ ಬೆಳವಣಿಗೆಯಿಂದಾಗಿ ಸಿಡಬ್ಲ್ಯುಸಿ.ಯ ಬಗ್ಗೆ ಕಾರ್ಮಿಕರಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿದೆ.

ಪೆನ್‌ಶನ್‌ಗಾಗಿ ಆಡಳಿತ ವರ್ಗದ ವಂತಿಗೆ, ಹೊಸ ವೇತನ ಶ್ರೇಣಿಯ ಒಪ್ಪಂದ ತುಟ್ಟಿ ಭತ್ಯೆಯ ಸ್ಲಾಬ್ ವ್ಯವಸ್ಥೆ, ಬೋನಸ್ ಮುಂತಾದ ರಾಷ್ಟ್ರಮಟ್ಟದ ಸಿ.ಐ.ಟಿ. ಯು ವಿನ ನಿರ್ಧಾರಗಳು ಕಾರ್ಮಿಕರನ್ನು ಸಿ.ಡಬ್ಲುಯು.ಯ ಕಡೆ ಆಕರ್ಷಿಸಿದೆ ಹೊಸ ಕೈಗಾರಿಕಾ ನೀತಿಗಳನ್ನು ವಿರೋಧಿಸಲು ಸಿ.ಡಬ್ಲ್ಯುಸಿ. ಯಿಂದ ಮಾತ್ರವೇ ಸಾಧ್ಯ ಎಂಬ ಅಭಿಪ್ರಾಯಕ್ಕೆ ಈಗ ಕಾರ್ಮಿಕರು ಬಂದಿದ್ದಾರೆ.

ಬಿ.ಜೆ.ಪಿ.ಯ ಡಬ್ಲ್ಯು.ಯು.ಎಫ್. ಸಂಘದವರು ಕ್ರೆಡಿಟ್ ಕೊ-ಆಪರೇಟಿವ್ ಸೊಸೈಟಿಯೊಂದನ್ನು ಪ್ರಾರಂಭಿಸಿ ಕಾರ್ಮಿಕರಿಗೆ ಸಾಲಗಳನ್ನು ನೀಡುತ್ತಿದ್ದಾರೆ. ಅದನ್ನೇ ಆಧಾರವಾಗಿಟ್ಟುಕೊಂಡು ಕಾರ್ಮಿಕ ಸಂಘಗಳ ಚುನಾವಣೆಯನ್ನು ಗೆಲ್ಲಲು ಹವಣಿಸುತ್ತಿದ್ದಾರೆ. ಈ ಚುನಾವಣೆಯಲ್ಲಿ ಗೆದ್ದರೆ ಮುಂದಿನ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಗೆಲ್ಲುವಲ್ಲಿ ಬಿ.ಇ.ಎಮ್.ಎಲ್. ಕಾರ್ಮಿಕರ ಸಹಕಾರ ದೊರೆಯುತ್ತದೆ ಎಂಬ ಹವಣಿಕೆ ಈ ಬಿ.ಜೆ.ಪಿ.ಯ ಜನರದ್ದು ಇದಕ್ಕೊಸ್ಕರ ಈಗಲಿಂದಲೇ ಹಲವಾರು ಲಕ್ಷಗಳನ್ನು ಖರ್ಚುಮಾಡಿ ಕಾರ್ಮಿಕರಲ್ಲಿ ಅವರ ವರ್ಗ ಪ್ರಜ್ಞೆಯನ್ನು ಮೊಟಕುಗೊಳಿಸುವ ಪ್ರಯತ್ನ ಮಾಡುತ್ತಿದೆ.

ಆದರೆ ಕಾರ್ಮಿಕ ವರ್ಗದಲ್ಲಿ ಮತೀಯವಾದಿಗಳಿಗೆ ಬಲ ಹೆಚ್ಚಬಾರದೆಂಬ ಒಳ್ಳೆಯ ಭಾವನೆಗಳನ್ನು ಹೊಂದಿರುವ ಕಾರ್ಮಿಕರು ಸಿ.ಐ.ಟಿ.ಯು ಸಿ.ಡಬ್ಲ್ಯುಸಿಸನ್ನು ಬಲಪಡಿಸಲು ಶ್ರಮಿಸುತ್ತಿದ್ದಾರೆ. ಹಾಗಾಗಿ ಸಿಡಬ್ಲ್ಯುಸಿ.ಗೆ ಗೆಲುವು ಬಹುತೇಕ ಖಚಿತವಾದಂತೆಯೆ.

ಡಿವೈಎಫ್ಐ ಘಟಕ ಸ್ಥಾಪನೆ

ವಿಜಾಪುರ : ದರ್ಗಾ ಮಂಡಲ ಮಟ್ಟದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ) ಘಟಕವನ್ನು ದಿನಾಂಕ 11-5-93ರಂದು ಜಿಲ್ಲಾ ಕಾರ್ಯದರ್ಶಿಗಳಾದ ಕಾಂ.ಸದಾನಂದ ಮೋದಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾ ಅಧ್ಯಕ್ಷರಾದ ಕಾಂ.ಮನ್ಸೂಸಾಬ ಕಲಾದಗಿಯವರು ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರದಲ್ಲಿ ಎದ್ದಿರುವ ಕೋಮು ಜ್ವಾಲೆ, ಮತಾಂಧತೆ, ಧರ್ಮದ ಹೆಸರಿನಲ್ಲಿ ಅಮಾಯಕ ಜನರನ್ನು ಕೊಳ್ಳೆ ಹೊಡೆಯುತ್ತಿರುವ ಭ್ರಷ್ಟ ರಾಜಕಾರಣಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದರು.

ಇದೇ ಸಮಯದಲ್ಲಿ ಡಿವೈಎಫ್ಐನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಧನಬಾಲ ಕಂಜರಬಾಟ, ಉಪಾಧ್ಯಕ್ಷರಾಗಿ ಷರೀಫ್ ಬಾಗಡೆ, ಕಾರ್ಯದರ್ಶಿಗಳಾಗಿ ನಜೀಖಾನ ಕೋಲಾರ, ಸಹ ಕಾರ್ಯದರ್ಶಿಗಳಾಗಿ ಜೈಸಿಂಗ್ ಕಂಜರಬಾಟ, ಕೋಶಾಧಿಕಾರಿಯಾಗಿ ಕಾಳು ಬಾಗಡೆ ಅಲ್ಲದೆ 12 ಜನರನ್ನು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ನಗರ ಘಟಕದ ಅಧ್ಯಕ್ಷರಾದ ಮಹಿಬೂಬ ಗುಂಗುಟಿ, ಮಲ್ಲಿಕಾರ್ಜುನ ಹೆಬ್ಬಾಳ, ಎಂ.ಎ.ಮೋಕಾಶಿ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಮೋಹನ ಕಂಜರಬಾಟ ವಹಿಸಿದ್ದರು.

ಎಸ್‌ಎಫ್‌ಐ ದ.ಕ. ಜಿಲ್ಲಾ ಅಧ್ಯಯನ ಶಿಬಿರ

ಕುಂದಾಪುರ : ಎಸ್‌ಎಫ್‌ಐ ದ.ಕ. ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವು ಮೇ 8 ಮತ್ತು 9ರಂದು ಕುಂದಾಪುರದಲ್ಲಿ ನಡೆಯಿತು.

ಶಿಬಿರದ ಉದ್ಘಾಟನೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಕಾಂ.ಜಿ.ಸಿ. ಬಯ್ಯಾರೆಡ್ಡಿಯವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಡಿವೈಎಫ್ಐ ಕುಂದಾಪುರ ತಾಲೂಕು ಅಧ್ಯಕ್ಷರಾದ ಕಾಂ.ಎಚ್.ನರಸಿಂಹ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅವರು ವಹಿಸಿದ್ದರು.

ಶಿಬಿರದಲ್ಲಿ ಎಸ್‌ಎಫ್‌ಐ ಸಂವಿಧಾನ ಕಾರ್ಯಕ್ರಮ ಮತ್ತು ಸಂಘಟನೆಯ ಬಗ್ಗೆ ಕಾಂ.ಜಿ.ಸಿ.ಬಯ್ಯಾರೆಡ್ಡಿ, ಭಾರತದ ಇತಿಹಾಸ ಮತ್ತು ಕೋಮುವಾದದ ಬಗ್ಗೆ ಕಾಂ.ಫ[illegible] ರಾಜ್, ವೈಜ್ಞಾನಿಕ ಸಮಾಜವಾದದ ಬಗ್ಗೆ ಕಾಂ.ಬಿ.ಮಾಧವ ಅವರು ಉಪನ್ಯಾಸ ನೀಡಿ[illegible]ತ್ತರು.

1993ರ ವಾರ್ಷಿಕ ಯೋಜನೆಯನ್ನು ಜಿಲ್ಲಾ ಕಾರ್ಯದರ್ಶಿ ಎಸ್.ರಾಜ್‌ಕುಮಾರ್ ಅವರು ಶಿಬಿರಾರ್ಥಿಗಳ ಮುಂದಿಟ್ಟರು.

ಶಿಬಿರಕ್ಕೆ ಶುಭ ಕೋರಿ ದ.ಕ. ಜಿಲ್ಲಾ ಟೆಲಿಕಾಂ ನೌಕರರ ಸಂಘಟನೆಯ ಕಾಂ. ಮುಕುಂದನ್, ಬೀಡಿ ಯೂನಿಯನ್‌ನ ಮಹಾಬಲ ವಡೇರಹೋಬಳಿ ಮಾತನಾಡಿದರು. ಪ್ರಾರಂಭದಲ್ಲಿ ಕುಂದಾಪುರ ತಾಲೂಕು ಅಧ್ಯಕ್ಷ ಶಿವರಾಂ ಸ್ವಾಗತಿಸಿದರು. ಎಸ್‌ಎಫ್‌ಐನ ಸಹ ಕಾರ್ಯದರ್ಶಿ ರಾಮ್‌ದಾಸ್ ವಂದಿಸಿದರು.

ಅಮೇರಿಕದಲ್ಲಿಯೂ ವರ್ಣಭೇದ

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದವದ ಬಗ್ಗೆ ಎಲ್ಲರಿಗೂ ಗೊತ್ತು. ಆದರೆ ಸಾಮ್ರಾಜ್ಯಶಾಹಿ ಪತ್ರಿಕೆಗಳು ಮಾಧ್ಯಮಗಳು 'ಸ್ವರ್ಗ' ಎಂದು ಬಣ್ಣಿಸುವ ಅಮೆರಿಕದಲ್ಲಿ ವರ್ಣಭೇದವದ ಸ್ವರೂಪವದ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲ. ಇತ್ತೀಚೆಗೆ ರೊಡ್ನಿಕಿಂಗ್ ಎಂಬ ಕರಿಯನನ್ನು ಲಾಸ್ ಎಂಜಲೀಸ್ ಪೊಲೀಸರು ಹೀನಾಯ ಮಾನವಾಗಿ ಒಡೆದ ಘಟನೆಯಿಂದ ಆರಂಭವಾದ ಭಾರೀ ಗಲಾಭೆಗಳ ಕಾಲದಲ್ಲಿ ಇದರ ಸ್ವರೂಪ ಬಯಲಾಯಿತು. ಆದರೆ ಅಮೇರಿಕದಲ್ಲಿರುವ ವರ್ಣಭೇದ ಇನ್ನೂ ಭೀಕರ.

ಅಮೇರಿಕದಲ್ಲಿ ಕರಿಯರು ಜನಸಂಖ್ಯೆಯ ಶೇಕಡಾ 12.1 ಇದ್ದಾರೆ. ಆದರೆ ಅವರ ಆದಾಯ ಒಟ್ಟು ಆದಾಯ ಶೇಕಡಾ 7.8 ಮಾತ್ರ. ಒಟ್ಟು ಉದ್ಯೋಗಿಗಳ ಶೇ ಕಡಾ 10.1 ಕರಿಯರು. ಆದರೆ ಅವರ ಆದಾಯ ಎಲ್ಲಾ ಉದ್ಯೋಗಿಗಳ ಆದಾಯದ ಶೇಕಡಾ 8 ಮಾತ್ರ ಒಂದೇ ಶೈಕ್ಷಣಿಕ ಅರ್ಹತೆ ಇರುವಾಗಲೂ ಕರಿಯರಿಗೆ ಕಡಿಮೆ ಸಂಬಳ ಕೊಡಲಾಗುತ್ತದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ ಕರಿಯರಲ್ಲಿ ಬಡವರು ಶೇಕಡಾ 32 ಬಿಳಿಯರಲ್ಲಿ ಶೇ ಕಡಾ 9. ಮಕ್ಕಳಲ್ಲಿ ಕರಿಯ ಮಕ್ಕಳು ಹೆಚ್ಚು ಬಡತನ ಎದುರಿಸಬೇಕಾಗುತ್ತದೆ. ಶೇಕಡಾ 45 ಕರಿಯ ಮಕ್ಕಳು ಬಡವರಾದರೆ ಶೇಕಡಾ 16 ಬಿಳಿಯ ಮಕ್ಕಳು ಬಡತನ ಎದುರಿಸಬೇಕಾಗುತ್ತದೆ. ಕರಿಯರ ವಿರುದ್ಧ [illegible]ತಮ್ಯ ಮನೆ ಒಡೆತನದಲ್ಲಿ, ಬ್ಯಾಂಕ್ ಸಾಲ, ಇನ್ಶೂರೆನ್ಸ್‌ನಲ್ಲಿ ಕಣ್ಣಿಗೆ ಹೊಡೆದು ಕಾಣುವಂತಹದು.

ಹೆಚ್ಚಿನ ಅಮೆರಿಕನ್ ನಗರಗಳಲ್ಲಿ ಬಿಳಿಯರು, ಕರಿಯರು ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಕರಿಯರು ನಗರದ ಒಳಗೆ ಕಿಕ್ಕಿರಿದು ತುಂಬಿದ ಅರೆ ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. ಬಿಳಿಯರು ಹೆಚ್ಚಾಗಿ ನಗರದ ಒಳ್ಳೆಯ ಬಡವಾಣೆಗಳಲ್ಲಿ ವಾಸಿಸುತ್ತಾರೆ. ಅಂಕೆ ಸಂಖ್ಯೆಗಳ ಪ್ರಕಾರ ಶೇಕಡಾ 60 ಕರಿಯರು ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. ಶೇ.ಕಡಾ 17.5 ಕರಿಯರು ಮಾತ್ರ ಬಡವಾಣೆಗಳಲ್ಲಿ ವಾಸಿಸುತ್ತಾರೆ. ಶೇಕಡಾ 33 ಬಿಳಿಯರು ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. ಶೇಕಡಾ 35 ಬಿಳಿಯರು ಉತ್ತಮ ಬಡಾವಣೆಗಳಲ್ಲಿ ವಾಸಿಸುತ್ತಾರೆ.

ರೇಗನ್ ಬುಶ್ ರಿಪಬ್ಲಿಕನ್ ಆಡಳಿತದಲ್ಲಿ ನಗರಗಳ ಅಭಿವೃದ್ಧಿ, ಕಲ್ಯಾಣ ಯೋಜನೆಗಳಲ್ಲಿ ತೀವ್ರ ಕಡಿತ ಕಡಿಮೆ ಆದಾಯದ ಕರಿಯರನ್ನು ಅತ್ಯಂತ ತೀವ್ರವಾಗಿ ತಟ್ಟಿವೆ. ವಾಶಿಂಗ್‌ಟನ್ ನಗರದ ಮನೆ ಕಟ್ಟುವ ಸಹಾಯ ಯೋಜನೆಯಲ್ಲಿ ಶೇಕಡಾ 60 ಕಡಿತ ಮಾಡಲಾಯಿತು. ನಗರಾಭಿವೃದ್ಧಿ ಯೋಜನೆಯಲ್ಲಿ ಶೇಕಡಾ 36, ಉದ್ಯೋಗ ತರಬೇತಿ ಯೋಜನೆಯಲ್ಲಿ ಶೇಕಡಾ 70 ಕಡಿತ ಮಾಡಲಾಗಿವೆ.

ಕರಿಯರ ಶಿಕ್ಷಣ, ಉದ್ಯೋಗಾವಕಾಶದಲ್ಲಿ ತೀವ್ರ ಕಡಿತದಿಂದ ಅವರ ಜೀವನ ಮಟ್ಟ ಕುಸಿದಿದೆ. ಆದ್ದರಿಂದ ಕರಿಯ ಯುವಕಯುವತಿಯರು ಮಾದಕ ದ್ರವ್ಯಗಳು, ಮಾರಾಟ ಜಾಲ ಅಪರಾಧಗಳಿಗೆ ಬಲಿಬೀಳುತ್ತಿದ್ದಾರೆ. ಕರಿಯರ ಕಾಲೋನಿಗಳು ಹಿಂಸಾಚಾರದ ತಾಣಗಳಾಗಿವೆ. ಕರಿಯರಲ್ಲಿ ಏಡ್ಸ್ ರೋಗಪೀಡಿತರ ಪ್ರಮಾಣ ಹೆಚ್ಚು. ಇವೆಲ್ಲದರಿಂದ ಕರಿಯರ ಹೆಮ್ಮೆಯ ಪರಂಪರೆಯ ಪ್ರತೀಕವಾದ ಕುಟುಂಬ ವ್ಯವಸ್ಥೆ ಮುರಿದು ಬಿದ್ದಿದೆ. ಇದು ಕರಿಯರ ಸಮಸ್ಯೆಗಳು ಇನ್ನಷ್ಟು ಉಲ್ಬಣಿಸಿದೆ.

ಅರ್ಧಕ್ಕಿಂತಲೂ ಹೆಚ್ಚು ಕರಿಯ ಕುಟುಂಬಗಳಲ್ಲಿ ತಂದೆಯ ಸ್ಥಾನದಲ್ಲಿ ಯಾರೂ ಇರುವುದಿಲ್ಲ. ಮೂರನೇ ಎರಡು ಭಾಗದಷ್ಟು ಕರಿಯ ಮಕ್ಕಳು ಮದುವೆಯಾದ ಪಾಲಕರಿಗೆ ಹುಟ್ಟಿದವಲ್ಲ. ಈ ಅಂಕೆ ಸಂಖ್ಯೆಗಳು ಬಿಳಿಯರ ಶೇಕಡಾವಾರುಗಿಂತ 5 ಪಟ್ಟು ಹೆಚ್ಚು.

ಚಕ್ಮಾ ನಿರಾಶ್ರಿತರ ವಾಪಸಿಗೆ ಒಪ್ಪಂದ

ಭಾರತ-ಬಾಂಗ್ಲಾದೇಶಗಳ ನಡುವೆ 30 ದಿನಗಳೊಳಗಾಗಿ ಚಕ್ಮಾ ನಿರಾಶ್ರಿತರ ವಾಪಸಾತಿ ಬಗ್ಗೆ ಒಪ್ಪಂದವಾಗಿದೆ. ಇದರಿಂದಾಗಿ ಎರಡು ದೇಶಗಳ ನಡುವೆ ಕಹಿ ಉಂಟು ಮಾಡಿದ್ದ ವಿವಾದವೊಂದನ್ನು ಬಗೆಹರಿಸುವಲ್ಲಿ ಪ್ರಮುಖ ಹೆಜ್ಜೆ ಇಟ್ಟಂತಾಗಿದೆ.

ಚಕ್ಮಾ ಆದಿವಾಸಿ ಜನಾಂಗ ಬಾಂಗ್ಲಾದೇಶದ ಚಿತ್ತಗಾಂಗ್ ಪರ್ವತ ಪ್ರದೇಶಗಳಲ್ಲಿ ವಾಸಿಸುವವರು. ಬೇರೆಡೆಯಂತೆ ಈ ಆದಿವಾಸಿ ಜನರ ಜೀವನಕ್ರಮ ಏರುಪೇರಾಗುವ ಬದಲಾವಣೆಗಳು, ಬಾಂಗ್ಲಾದೇಶದ ಇತರ ಭಾಗದಿಂದ ಜನರು ಅಲ್ಲಿಗೆ ಬಂದು ನೆಲೆಸಲು ಆರಂಭಿಸಿದ್ದರಿಂದ ಆಗಿದೆ. ಈ ಪ್ರದೇಶ ಗಡಿ ಪ್ರದೇಶವಾದ್ದರಿಂದ ಸೈನ್ಯದ ದಬ್ಬಾಳಿಕೆಗೂ ಚಕ್ಮಾಗಳು ಒಳಗಾಗಿದ್ದರು. ಈ ಜನಾಂಗೀಯ ಸಮಸ್ಯೆಯಿಂದಾಗಿ 1986 ರಿಂದ ಸುಮಾರು 60 ಸಾವಿರ ಚಕ್ಮಾಗಳು ತ್ರಿಪುರಾಕ್ಕೆ ನಿರಾಶ್ರಿತರಾಗಿ ಬಂದು ವಾಸಿಸುತ್ತಿದ್ದಾರೆ.

ಈಗಿನ ಒಪ್ಪಂದ ಪ್ರಕಾರ, ಹಿಂದಿರುಗಿದಾಗ ಚಕ್ಮಾಗಳು ಬಿಟ್ಟು ಬಂದಿರುವ ಅವರ ಭೂಮಿಯನ್ನು ಅವರಿಗೆ ವಾಪಸು ಮಾಡಲಾಗುವುದು ಹಾಗೂ ಹಿಂದೆ ಚಕ್ಮಾಗಲು ಅನುಭವಿಸುತ್ತಿದ್ದ ಜನಾಂಗೀಯ ಧಾರ್ಮಿಕ ತಾರತಮ್ಯದ ನೀತಿ ಪುನರಾವರ್ತನೆಯಾಗದಂತೆ ಜಾಗರೂಕತೆ ವಹಿಸುವಂತೆ ಬಾಂಗ್ಲಾದೇಶದ ಸರ್ಕಾರ ಆಶ್ವಾಸನೆ ನೀಡಿದೆ.

ಲೋಕ ಸಂಚಾರ

-- ಶರತ್ ಚಂದ್ರ

ಆಫ್‌ಘಾನಿಸ್ತಾನದಲ್ಲಿ ಪುನಃ ಕದನ, 2,500 ಸಾವು ನೋವು

ಆಫ್‌ಘಾನಿಸ್ತಾನ ಇಸ್ಲಾಮಿಕ್ ಗುಂಪುಗಳ ನಡುವೆ ಪಾಕಿಸ್ತಾನದ ಆಳುವ ಮಿಲಿಟರಿ ಬೂರ್ಜ್ವಾ ಪಾಳೆಯಗಾರಿ ಕೂಟ ಏರ್ಪಡಿಸಿದ್ದ ತಾತ್ಕಾಲಿಕ ಒಪ್ಪಂದ ಪುನಃ ಬಿರುಕು ಬಿಟ್ಟಿದೆ. ಭಾರೀ ಕದನ ಆರಂಭವಾಗಿದೆ.

ರಕ್ಷಣಾಮಂತ್ರಿ ಅಹಮದ್ ಶಾ ಮಸೂದ್ ಹಾಗೂ ಎರಡೂ ಮೂಲಭೂತವಾದಿ ಮುಜಾಹಿದಿನ್ ಗೆರಿಲ್ಲಾ ಗುಂಪುಗಳ ನಡುವೆ ಕದನ ಆರಂಭವಾಗಿದೆ. ಈ ಎರಡು ಇಸ್ಲಾಮಿಕ್ ಗುಂಪುಗಳು ದಕ್ಷಿಣ ಕಾಬೂಲ್‌ನಲ್ಲಿರುವ ಸರ್ಕಾರಿ ಪಡೆಗಳ ಮೇಲೆ ದಾಳಿಗೆ ಪ್ರತಿದಾಳಿಯಾಗಿ ಆರಂಭವಾದ ಈ ಕದನದಲ್ಲಿ ಮುಕ್ತವಾಗಿ ಕ್ಷಿಪಣಿಗಳನ್ನು ಬಳಸಲು ಆರಂಭಿಸಿದ್ದರಿಂದ ತೀವ್ರ ಸಾವು ನೋವುಗಳಾಗಿವೆ. ಕಾಬಲ್‌ನಗರದ ಮೇಲೂ ಹಲವಾರು ಕ್ಷಿಪಣಿ ಆಕ್ರಮಣಗಳಾಗಿವೆ. 2,500 ಕ್ಕೂ ಹೆಚ್ಚು ಸಾವು ನೋವುಗಳಾಗಿವೆ.

ಈಗ 15- ಸದಸ್ಯರ ಶಾಂತಿ ಸಮಿತಿ ರಚಿತವಾಗಿದ್ದು, ಕದನವಿರಾಮ ಏರ್ಪಡಿಸಲಾಗಿದೆ. ಶಾಂತಿ ಸಮತಿ ಸದಸ್ಯರು ಹಲವು ಇಸ್ಲಾಮಿಕ್ ಗುಂಪುಗಳಿಗೆ ಸೇರಿದವರು. ಆದರೆ ಈ ಕದನ ವಿರಾಮ ಎಷ್ಟು ದಿನ ಜಾರಿಯಲ್ಲಿರುವುದೋ ಕಾದು ನೋಡಬೇಕು. ಒಂದೆರೆಡು ಕದನವಿರಾಮ ಉಲ್ಲಂಘನೆಗಳು ಆಗಲೇ ನಡೆದಿವೆ.

ಎ.ಎನ್.ಸಿ., ಕಮ್ಯುನಿಸ್ಟ್ ನಾಯಕರ ಕೊಲೆಗೆ ಸಂಚು

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ನಾಯಕ ಕ್ರಿಸ್ ಹನಿಯವರ ಕೊಲೆ ಮಾಡಿದ ಬಲಪಂಥೀಯ ಗುಂಪು ಇನ್ನೂ ಹಲವು ಎ.ಎನ್.ಸಿ. ಹಾಗೂ ಕಮ್ಯುನಿಸ್ಟ್ ನಾಯಕರ ಕೊಲೆಗೆ ಸಂಚು ಹೂಡಿರುವುದು ಪತ್ತೆಯಾಗಿದೆ. ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಜೋಸ್ಲೋವೋ ಹಾಗೂ ಎ.ಎನ್.ಸಿ. ನಾಯಕಿ ವಿನ್ನಿ ಮಂಡೇಲಾ ಕೊಲೆಗೆ ಬಲಪಂಥೀಯ ಗುಂಪು ಸಂಚು ಹೂಡಿದೆಯಂತೆ.

ಬಲಪಂಥೀಯರ ಗುಂಪು ಜನಾಂಗೀಯ ಗಲಭೆಗಳನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ಸರಕಾರ ಇಂತಹ ಗುಂಪುಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದೆ ಯಾವುದೇ ಪ್ರಗತಿ ಸಾಧ್ಯವಿಲ್ಲ ಎಂದು ಎ.ಎನ್.ಸಿ. ನಾಯಕ ನೆಲ್ಸನ್ ಮಂಡೇಲಾ ಅಲ್ಪಸಂಖ್ಯಾತ ಬಿಳಿಯರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಇಂಗ್ಲೆಂಡಿನಲ್ಲಿ ಜನಾಂಗೀಯ ಆಕ್ರಮಣಗಳು ಹೆಚ್ಚುತ್ತಿವೆ.

ಇಂಗ್ಲೆಂಡಿನಲ್ಲಿ ಇತರ ಯುರೋಪಿಯನ್ ದೇಶಗಳಂತೆ ಜನಾಂಗೀಯ ಆಕ್ರಮಣ, ಅಪರಾಧಗಳು ಹೆಚ್ಚುತ್ತಿವೆ. 1988 ರಿಂದ 1991 ರ ಮೂರು ವರ್ಷಗಳಲ್ಲಿ ವರದಿಯಾದ ಜನಾಂಗೀಯ ಅಪರಾಧಗಳ ಸಂಖ್ಯೆ ಎರಡರಷ್ಟಾಗಿದೆ. ನಿಜವಾಗಿಯೂ ಇನ್ನೂ ಹೆಚ್ಚಾಗಿರಬೇಕು. ಎಷ್ಟು ಇಂತಹ ಘಟನೆಗಳು ವರದಿಯಾಗದೆ ಹೋಗುತ್ತವೆ ಎಂದು ಜನಾಂಗೀಯ ಸಮಾನತೆಗಾಗಿ ಬ್ರಿಟಿಷ್ ಕಮಿಶನ್ ಹೇಳಿದೆ.

ರೈತರ ಜಮೀನು ಹರಾಜು ತಡೆಗೆ ಯಶಸ್ವಿ ಹೋರಾಟ

ಕುರುಗೋಡು : ದಿನಾಂಕ 29-4-93 ರಿಂದ 31-5-93ರವರೆಗೆ 45 ಬಾಕಿಧಾರರ ಬಾಕಿ ವಸೂಲಾತಿಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ನೇತೃತ್ವದಲ್ಲಿ ಕಲ್ಲುಕಂಭ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘ(ನಿ) ಮೇಲ್ಕಂಡ ಬಾಕಿದಾರರ ಜಮೀನನ್ನು ಹರಾಜು ಹಾಕಲು ಹೊರಟಿರುವುದನ್ನು [illegible]ಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಲ್ಲುಕಂಭ ಗ್ರಾಮದ ರೈತರು ತಡೆಹಿಡಿದರು.

ರಾಜ್ಯ ಸರಕಾರವು ಅತಿವೃಷ್ಟಿಗೀಡಾದ ರೈತರ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿರುವುದಾಗಿ ಹೇಳಿರುವಾಗಲೇ ರೈತರ ಜಮೀನನ್ನು ಕೇವಲ 1500 ರೂ. ಹಾಗೂ 2000 ರೂಗಳಿಗಾಗಿ ಲಕ್ಷಾಂ[illegible]ರ ರೂಪಾಯಿ ಬೆಲೆ ಬಾಳುವ 3-4 ಎಕರೆ ಭೂಮಿಯನ್ನು ಹರಾಜು ಹಾಕಲು ಹೊರಟ ಉದ್ಧಟತನವನ್ನು ಬಲವಾಗಿ ಖಂಡಿಸಿ ಹರಾಜಿನಿಂದ ಮಾರಾಟ ಅಧಿಕಾರಿಯನ್ನು ವಾಪಸ್ ಕಳಿಸಲಾಯಿತು. ಬಾಕಿ ಕಟ್ಟಲು ಸಮಯಾವಕಾಶ ನೀಡುವಂತೆ ಒತ್ತಾಯಿಸಲಾಯಿತು.

ಇದರ ನೇತೃತ್ವವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಯು.ಬಸವರಾಜ್ ಹಾಗೂ ಜಿಲ್ಲಾ ಮುಖಂಡರಾದ ಕಾಂ.ಕೆ. ಗಾದಿಲಿಂಗಪ್ಪ, ಎಸ್.ದಿವಾಕರಪ್ಪ ಇವರುಗಳು ವಹಿಸಿದ್ದರು.

ನಂತರ ಅದೇ ದಿನ ದಿನಾಂಕ 30-4-93 ರಂದು ಸಾಯಂಕಾಲ 4 ಗಂಟೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕವನ್ನು ಕಲ್ಲುಕಂಭ ಗ್ರಾಮದಲ್ಲಿ ರಚಿಸಲಾಯಿತು. ಗ್ರಾಮ ಘಟಕದ ಕಾರ್ಯದರ್ಶಿಯಾಗಿ ಬಾಗಲಿ ಬಸವರಾಜ್ ಹಾಗೂ ಗ್ರಾಮ ಘಟಕದ ಸದಸ್ಯರಾಗಿ ಆರ್.ನಾಗನಗೌಡ, ಬಿ.ಗೋಪಾಲಪ್ಪ, ದೇವಪುತ್ರ, ಕ್ರಿಸ್ತ ಹನುಮಂತಪ್ಪ, ಅಡವಳ್ಳಿ ನಾಗಪ್ಪ, ಮುಲ್ಲಗಟ್ಟಿ, ಗಾದೆಪ್ಪ ಹಾಗೂ ಗೊಲ್ಲರ ಲೋಕಣ್ಣ ಮತ್ತು ಇತರ 9 ಜನರನ್ನು ಆಯ್ಕೆ ಮಾಡಲಾಯಿತು.

ಹಕ್ಕುಪತ್ರ ಆಗ್ರಹಿಸಿ ಮನವಿ ಅರ್ಪಣೆ

ವಿಜಾಪುರ : ನಗರದ ಸಮೀಪ ಇರುವ ಮೂಲ ಬಾ ಗಾಯತ್(ದರ್ಗಾ) ಮಂಡಳ ವ್ಯಾಪ್ತಿಯಲ್ಲಿ ಬರುವ ಸರಕಾರಿ ಜಾಗ ಸಿ.ಟಿ. ಎಸ್.ನಂ. 838 ಈ ಜಾಗೆಯಲ್ಲಿ ಕಂಜರ ಬಾಟ್ ಸಮಾಜದ ಕಡು ಬಡವರಾದ ಜನರು ವಾಸಿಸುತ್ತಿದ್ದು ಈಗಾಗಲೇ ಆಶ್ರಯ ಯೋಜನೆಯಲ್ಲಿ ಪ್ಲಾಟುಗಳನ್ನು ಹಾಕಿದ್ದಾರೆ. ಆದರೆ, ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಚಿತಾವಣೆಯಿಂದ ಸರಕಾರ ಇವರಿಗೆಲ್ಲಾ ಹಕ್ಕು ಪತ್ರ ಕೊಡಲು ವಿ..ಬ ನೀತಿ ಅನುಸರಿಸುತ್ತಿದ್ದು ಹಾಗೂ ಇವ[illegible]ಗೆಲ್ಲಾ ಐದು ತಿಂಗಳ ಹಿಂದೆ ಪಡಿತರ [illegible] ಕೊಟ್ಟಿದ್ದರೂ ಇನ್ನೂವರೆಗೆ ಇವರಿಗೆ ಆಹಾರ ಧಾನ್ಯಗಳನ್ನು ವಿತರಿಸದೆ ಇರುವುದನ್ನು ವಿರೋಧಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್‌ಐ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ದಿನಾಂಕ 12-5-93 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಾಲಯದಿಂದ ಮೆರವಣಿಗೆಯನ್ನು ಹೊರಡಿಸಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕಂಜರಬಾಟ್ ಸಮಾಜದ ಬಡ ಜನರ ಬೇಡಿಕೆಗಳನ್ನು ಕೂಡಲೇ ಈಡೇರಿಸಿ ಅವರಿಗೆ ಹಕ್ಕು ಪತ್ರಗಳನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಮನವಿಯನ್ನು ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಬೇಡಿಕೆ ಈಡೇರಿಸುವುದಾಗಿ ಖಚಿತ ಭರವಸೆ ನೀಡಿದರು.

ಮೆರವಣಿಗೆಯ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷ, ಮನ್ಸೂಸಾಬ ಕಲಾದಗಿ, ಕಾರ್ಯದರ್ಶಿಗಳಾದ ಸದಾನಂದ ಮೋದಿ ಮೈಬೂಬ ಗುಡಗಂಟಿ ಹಾಗೂ ಡಿವೈಎಫ್‌ಐನ ಅನೇಕ ಕಾರ್ಯಕರ್ತರು ಮತ್ತು ಕಂಜರಬಾಟ್ ಸಮಾಜದ ಡಿವೈಎಫ್‌ಐ ಪದಾಧಿಕಾರಿಗಳು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೇ ದಿನಾಚರಣೆಯಲ್ಲಿ ಪ್ರೆಸ್ ಕಾರ್ಮಿಕರು

ಉಡುಪಿ : ಉಡುಪಿಯಲ್ಲಿ ಬೇರೆ ಬೇರೆ ಕಾರ್ಮಿಕ ಸಂಘಟನೆಗಳು ಸೇರಿ ತಾ. 1-5 -93ರಂದು ಮೇ ದಿನಾಚರಣೆಯನ್ನು ಆಚರಿಸಿದ ಸಂದರ್ಭದಲ್ಲಿ ಉಡುಪಿ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್ ಪ್ರಥಮ ಬಾರಿ ಮಣಿಪಾಲದಿಂದ ಉಡುಪಿಯ ರಥಬೀದಿಯವರೆಗೆ ಬೃಹತ್ ಮೆರವಣಿಗೆಯನ್ನು ಕೊಂಡೊಯ್ದು ಮೇ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದೆ.

ಮಣಿಪಾಲದ ಹೋಟೆಲ್ ವ್ಯಾಲಿವ್ಯೂನ ಬಳಿಯಿಂದ ಸುಮಾರು 500 ಜನ ಪ್ರೆಸ್ ಕಾರ್ಮಿಕರು, ಟೈರ್ ಕಾರ್ಮಿಕರ ಮೆರವಣಿಗೆಯೊಂದಿಗೆ ಸೇರಿ ಉಡುಪಿಯ ಮುಖ್ಯ ಬೀದಿಗಳಲ್ಲಿ ಸುತ್ತಾಡಿ, ರಥಬೀದಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು. ಈ ಪ್ರೆಸ್ ಕಾರ್ಮಿಕರ ಮೆರವಣಿಗೆಯಲ್ಲಿ 425 ಪುರುಷ ಕಾರ್ಮಿಕರು ಮತ್ತು 75 ಮಹಿಳಾ ಕಾರ್ಮಿಕರು ಭಾಗವಹಿಸಿದ್ದರು. ಮೆರವಣಿಗೆಯ ಉದ್ದಕ್ಕೂ ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಬ್ಯಾನರ್, ಸಿಐಟಿಯುವಿನ ಬಾವುಟ ಹಾಗೂ ಪ್ಲೆಕಾರ್ಡ್‌ಗಳನ್ನು ಹಿಡಿದು, ಎಲ್ಲರೂ ಘೋಷಣೆಗಳನ್ನು ಕೂಗುತ್ತಿದ್ದರು. ಮಣಿಪಾಲ ಮತ್ತು ಉಡುಪಿಯ ಜನರಲ್ಲಿ ಆಶ್ಚರ್ಯ ಮತ್ತು ಉತ್ಸಾಹವನ್ನು ಮೂಡಿಸುವುದಕ್ಕೆ ಸಾಧ್ಯವಾಗಿದೆ.

ರಥಬೀದಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರೆಸ್ ಕಾರ್ಮಿಕರು ಕೊನೆಯವರೆಗೂ ಭಾವಗವಹಿಸಿ ಸಭೆಯ ಯಶಸ್ವಿಗೆ ಕಾರಣರಾದರು. ವಿವರ ವರದಿ 'ಐಕ್ಯರಂಗ'ದ ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಪ್ಯಾಲೆಸ್ತೀನ್ ಜನರ ಹಕ್ಕುಗಳನ್ನು ಮನ್ನಿಸುವವರೆಗೂ

ಇಸ್ರೇಲಿನೊಡನೆ ಸಂಬಂಧದಲ್ಲಿ ಮುನ್ನಡೆಸಲ್ಲ

ಸರಕಾರಕ್ಕೆ ಎಡಪಕ್ಷಗಳ ಆಗ್ರಹ

ಭಾರತಕ್ಕೆ ಈಗ ಭೇಟಿ ನೀಡಿರುವ ಇಸ್ರೇಲೀ ವಿದೇಶ ಮಂತ್ರಿ ಶಿಮೊನ್ ಪೆರೆಸ್‌ರವರಿಗೆ ಪ್ಯಾಲೆಸ್ತೇನ್ ಜನತೆಯ ನ್ಯಾಯಬದ್ಧ ಹಕ್ಕುಗಳ ಕುರಿತಾದ ಶಾಂತಿಮಾತುಕತೆಗಳಲ್ಲಿ ಇಸ್ರೇಲ್‌ನ ಹಠಮಾರಿತನ ನಿಲುವನ್ನು ನಾವು ಒಪ್ಪಲು ಸಾಧ್ಯವಿಲ್ಲ ಎಂದು ಭಾರತ ಸರಕಾರ ಸ್ಪಷ್ಟವಾಗಿ ತಿಳಿಸಬೇಕು ಎಂದು ಎಡಪಕ್ಷಗಳು ಒತ್ತಾಯಿಸಿದೆ.

ಇಸ್ರೇಲೀ ವಿದೇಶಾಂಗ ಮಂತ್ರಿಯ ಈ ಪ್ರಥಮ ಭಾರತದ ಭೇಟಿ ಪಶ್ಚಿಮ ಏಶ್ಯಾ ಶಾಂತಿ ಮಾತುಕತೆಗಳಲ್ಲಿ ಇಸ್ರೇಲ್ ಬಾದಕವುಂಟು ಮಾಡುತ್ತಿರುವ ಸಂದರ್ಭದಲ್ಲಿ ನಡೆಯುತ್ತಿದೆ. ಸ್ವಯಂನಿರ್ಣಯದ ಹಕ್ಕಿಗಾಗಿ ವೀರಾವೇಶದಿಂದ ಹೋರಾಡುತ್ತಿರುವ ಪ್ಯಾಲೆಸ್ತೇನಿಯನ್ನರ ಮೇಲೆ ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ತೀವ್ರ ದಬ್ಬಾಳಿಕೆ ಮುಂದುವರಿಸುತ್ತಿದೆ. ಭಾರತ ಸರಕಾರ ಇಸ್ರೇಲ್‌ಗೆ ಪೂರ್ಣ ರಾಜತಾಂತ್ರಿಕ ಮಾನ್ಯತೆ ನೀಡಿದ ನಂತರ ಪ್ಯಾಲೆಸ್ತೇನ್ ಪ್ರಶ್ನೆಯ ಬಗ್ಗೆ ಇಸ್ರೇಲ್‌ನ ನಿಲುವಿನಲ್ಲಿ ಎಳ್ಳಷ್ಟು ಬದಲಾವಣೆ ಬಂದಿಲ್ಲ. ಅದು ವಿಶ್ವಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸುತ್ತಲೇ ಇದೆ, ಪ್ಯಾಲೆಸ್ತೇನಿಯನ್ನರನ್ನು ಗಡೀಪಾರು ಮಾಡಿ ಸಾಮಾನ್ಯ ಮಾನವ ಹಕ್ಕುಗಳನ್ನು ಕೂಡಾ ಅದು ನೀಡುತ್ತಿಲ್ಲ ಎಂದು ನೆನಪಿಸಿರುವ ಎಡಪಕ್ಷಗಳು ನರಸಿಂಹರಾವ್ ಸರಕಾರ ಒಂದು ದೃಢ ನಿಲುವು ತಳೆದು ಇಸ್ರೇಲೀ ವಿದೇಶಾಂಗ ಮಂತ್ರಿಗೆ ತಿಳಿಸಬೇಕು ಎಂದಿವೆ. ಏಕೆಂದರೆ ಪ್ಯಾಲೇಸ್ತೇನ್ ಜನಗಳ ಹೋರಾಟಕ್ಕೆ ದೃಢ ಬೆಂಬಲದ ಪರಂಪರೆ ಭಾರತ ಸರಕಾರದ್ದು. ಆ ಪರಂಪರೆಯನ್ನು ಉಳಿಸಿಕೊಳ್ಳಬೇಕು. ಪ್ಯಾಲೇಸ್ತೇನ್ ಜನಗಳ ನ್ಯಾಯಪೂರ್ಣ ಹಕ್ಕುಗಳನ್ನು ಇಸ್ರೇಲ್ ಸ್ವೀಕರಿಸುವವರೆಗ ಅದರೊಡನೆ ಭಾರತದ ಸಂಬಂಧಗಳಲ್ಲಿ ಮುನ್ನಡೆ ಸಾಧ್ಯವಿಲ್ಲ ಎಂದು ಎಡಪಕ್ಷಗಳು ಅಭಿಪ್ರಾಯಪಟ್ಟಿವೆ. ರಾವ್ ಸರಕಾರ ಇಸ್ರೇಲಿನೊಂದಿಗೆ ರಕ್ಷಣಾ ಸಹಕಾರದ ಯೋಚನೆ ಮಾಡುತ್ತಿದೆ ಎಂದು ಸುದ್ದಿಯ ಬಗ್ಗೆ ಎಡಪಕ್ಷಗಳ ಮುಖಂಡರು ಕಳವಳ ವ್ಯಕ್ತಪಡಿಸಿದ್ದಾರೆ. ಇದು ಭಾರತದ ಹಿತಾಸಕ್ತಿಗೆ ಮಾರಕವಾದ್ದರಿಂದ ಅದು ಸಲ್ಲ ಎಂದು ಅವರು ಹೇಳಿದ್ದಾರೆ.

ಇಸ್ರೇಲಿ ವಿದೇಶಾಂಗ ಮಂತ್ರಿಯ ಈ ಭೇಟಿಯ ಸಂದರ್ಭದಲ್ಲಿ ಎಡಪಕ್ಷಗಳ ಮುಖಂಡರು ಒಂದು ಸ್ವತಂತ್ರ ಪ್ರಭುತ್ವ ರಚಿಸಿಕೊಳ್ಳುವ ತಮ್ಮ ಹಕ್ಕನ್ನು ಪಡೆದುಕೊಳ್ಳಲು ಪ್ಯಾಲೆಸ್ತೇನ್ ಜನತೆ ನಡೆಸಿರುವ ಹೋರಾಟದೊಂದಿಗೆ ತಮ್ಮ ಪೂರ್ಣ ಸೌಹಾರ್ದತೆಯನ್ನು ಮತ್ತೊಮ್ಮೆ ಒತ್ತಿ ಹೇಳಿದ್ದಾರೆ. ಮೇ 14ರಂದು ಹೊರಡಿಸಿದ ಈ ಹೇಳಿಕೆಗೆ ಸಿಪಿಐ(ಎಂ)ನ ಪ್ರಕಾಶ್ ಕಾರಟ್, ಸಿಪಿಐನ ಎಂ. ಫಾರೂಕಿ, [illegible] ಬ್ಲಾಕ್‌ನ ಚಿತ್ತಬಸು ಹಾಗೂ ಆರ್.ಎಸ್.ಪಿಯ ತ್ರಿದಿಬ್ ಚೌಧುರಿ ಸಹಿ ಹಾಕಿದ್ದಾರೆ.

KRNM/BGS-405 MAG(2) PRB DECR 319-78/79

ಅಸಂಘಟಿತರ ಸಂಘಟನೆಗೆ ಸಿ.ಐ.ಟಿ.ಯು ಕಾರ್ಯಕ್ರಮ

ರಾಜ್ಯದಲ್ಲಿ ಕಾರ್ಮಿಕರ ಚಳುವಳಿಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ತಾರೀಖು 9ನೇ ಮೇ 1993 ರಂದು ತುರ್ತಾಗಿ ಸಭೆ ಸೇರಿದ ಸಿ.ಐ.ಟಿ.ಯು ರಾಜ್ಯ ಸಮಿತಿ ನಿರ್ಧರಿಸಿದೆ. ಅಸಂಘಟಿತ ವಲಯದ ಕಾರ್ಮಿಕರ ಅಖಿಲ ಭಾರತ ಸಮನ್ವಯ ಸಮಿತಿ ದಿನಾಂಕ 4 ಏಪ್ರಿಲ್ 1993 ರಂದು ಕಲ್ಕತ್ತಾದಲ್ಲಿ ನಡೆದು ಹಾಕಿ ಕೊಂಡಿರುವ ವಿವಿಧ ಹಂತಗಳ ಕಾರ್ಯಕ್ರಮವನ್ನು ರಾಜ್ಯದಲ್ಲಿ ಜಾರಿ ಮಾಡಲಾಗುವುದು. ಈ ಕಾರ್ಯಕ್ರಮ ಅನುಸರಿಸಿ ಮೇ 31 ಒಳಗಾಗಿ 22 ಅಂಶಗಳ ಬೇಡಿಕೆಯ ವಿವರಣೆ, ಸಮಾವೇಶ ಇತ್ಯಾದಿ ನಡೆಸಲಾಗುವುದು. ಜೂನ್ 1 ರಿಂದ 20ನೇ ತಾರೀಖಿನ ಒಳಗಾಗಿ ಲೋಕಸಭೆ ಅಧ್ಯಕ್ಷರಿಗೆ ಕಳುಹಿಸುವ ಬಗ್ಗೆ ಮನವಿಗೆ ಕಾರ್ಮಿಕರಿಂದ ಸಹಿಸಂಗ್ರಹಣೆ ಮಾಡಲಾಗುವುದು. ಜೂನ್ 21 ರಿಂದ 30 ರವರೆಗೆ ಜಿಲ್ಲಾ ಮಟ್ಟದ ಮತ ಪ್ರದರ್ಶನ, ಜುಲೈ 1 ರಿಂದ 7 ಒಳಗೆ ರಾಜ್ಯ ಮಟ್ಟದ ಮತ ಪ್ರದರ್ಶನ, ಜುಲೈ 14 ರಂದು ಅಖಿಲ ಭಾರತ ಅಸಂಘಟಿತ ವಲಯ ಕಾರ್ಮಿಕರ ಮುಷ್ಕರವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ.

ಸಿ.ಐ.ಟಿ.ಯು. 6ನೇ ರಾಜ್ಯ ಸಮ್ಮೇಳನದ ತೀರ್ಮಾನದ ಪ್ರಕಾರ ಬೆಂಗಳೂರು ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲೆ ನಾಡು ಪ್ರದೇಶದಲ್ಲಿರುವ ತೋಟ ಕಾರ್ಮಿಕರ ಚಳುವಳಿಗೆ ಒತ್ತು ಕೊಡಬೇಕೆಂದು ಈಗಾಗಲೇ ಮಾಡಿರುವ ತೀರ್ಮಾನವಲ್ಲದೆ ರಾಜ್ಯವ್ಯಾಪಿಯಾಗಿ ಬೀಡಿ ಕಾರ್ಮಿಕರ ಸಂಘಟನೆ ಮತ್ತು ಹೋರಾಟಕ್ಕೆ ಆದ್ಯತೆ ನೀಡಬೇಕೆಂದು ರಾಜ್ಯ ಸಮಿತಿ ತೀರ್ಮಾನಿಸಿದೆ. ಬೆಂಗಳೂರು ಜಿಲ್ಲಾ ಸಮಿತಿ ಯೋಜನೆ ತಯಾರಿಸಿದ್ದು ಈ ವರ್ಷ ಇಡಿಯಾಗಿ ಈ ಚಳುವಳಿಯನ್ನು ಮಾಡಲು ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ, ಸಮಾವೇಶ ನಡೆಸಿ ಸಮಿತಿಗಳನ್ನು ರಚಿಸಿ ಮುಖ್ಯವಾಗಿ ಹೋಟೆಲ್ ಉದ್ದಿಮೆ, ಗಾರ್ಮೆಂಟ್ಸ್ ಉದ್ದಿಮೆ, ಅಗರ ಬತ್ತಿ ಮತ್ತು ಬೀಡಿ ಇವುಗಳಿಗೆ ಪೂರ್ಣವಾದ ಸಂಘಟನೆಯನ್ನುಂಟು ಮಾಡುವುದು. ಯಶವಂತಪುರ, ಪೀಣ್ಯ ಪ್ರದೇಶ, ಕೆ.ಆರ್. ಪುರ ಪ್ರದೇಶ, ಮೈಸೂರು ರಸ್ತೆ ಪ್ರದೇಶ, ಮಾಗಡಿ ರಸ್ತೆ, ಸುಂಕದ ಕಟ್ಟೆ ಪ್ರದೇಸ, ಶ್ರೀ ರಾಂ ಪುರ ಪ್ರದೇಶ ಇಲ್ಲಿ ಸಮಿತಿಗಳನ್ನು ರಚಿಸಲಾಗುವುದು ಈ ಎಲ್ಲಾ ಪ್ರದೇಶಗಳಲ್ಲಿ ಸಾಂಸ್ಕೃತಿಕ ಇತರ ಪ್ರಚಾರದ ಕಾರ್ಯಕ್ರಮಗಳನ್ನು ಅನುಸರಿಸುವ ಯೋಜನೆ ಹಾಕಲಾಗಿದೆ.

ಅತ್ಯಾಚಾರಕ್ಕೆ ಬೃಹತ್ ಪ್ರತಿಭಟನೆ

ಕರ್ನಾಟಕ ಪ್ರಾಂತ ರೈತ ಸಂಘ ಕುರುಗೋಡು ವಿಭಾಗ ಕಮಿಟಿ ನೇತೃತ್ವದಲ್ಲಿ ವಾಲ್ಮೀಕಿ ಸಂಘ ಹಾಗೂ ಡಾ.ಅಂಬೇಡ್ಕರ್ ಸಂಘದ ನೆರವಿನಿಂದ ದಿನಾಂಕ 5-5- 93 ರಂದು ಸುಮಾರು 500ಕ್ಕೂ ಹೆಚ್ಚು ಬಡ ರೈತ ಕೂಲಿಗಾರರು ಹಾಗೂ ಹಮಾಲರು ಕುರುಗೋಡು ಗ್ರಾಮದ ಬಡ ರೈತ ಮಹಿಳೆ ಹುಲಿಗೆಮ್ಮಳ ಮೇಲೆ ನಡೆದ ಅತ್ಯಾಚಾರವನ್ನು ವಿರೋಧಿಸಿ ಬಳ್ಳಾರಿ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಅತ್ಯಾಚಾರಿ ಎಸ್.ಕೆ. ಶರಣಯ್ಯನನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಯನ್ನು ವಿಧಿಸುವಂತೆ ಒತ್ತಾಯಿಸಿ ಹಾಗೂ ಅತ್ಯಾಚಾರಿ ಎಸ್.ಕೆ. ಶರಣಯ್ಯನಿಗೆ ರಕ್ಷಣೆಯನ್ನು ಒದಗಿಸಿರುವ ಕುರುಗೋಡು ಪೋಲೀಸ್ ಠಾಣೆಯ ಪೋಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಬಳ್ಳಾರಿ ಇವರಿಗೆ ಮನವಿಯನ್ನು ಪ್ರತ್ಯೇಕವಾಗಿ ಸಲ್ಲಿಸಲಾಯಿತು.

ಅತ್ಯಾಚಾರಿಯನ್ನು ಮುಚ್ಚಿಟ್ಟು ಮಾನಹರಣದ ಪ್ರಯತ್ನವೆಂದು ಕೇಸು ದಾಖಲಿಸಿಕೊಂಡು ಆರೋಪಿಯನ್ನು ಪೋಲೀಸ್ ಸಿಬ್ಬಂದಿಯ ನೀತಿಯನ್ನು ಬಲವಾಗಿ ಖಂಡಿಸಲಾಯಿತು. ರಕ್ಷಿಸುವ ಅತ್ಯಾಚಾರಿಯನ್ನು ಬಂಧಿಸಿರುವುದಾಗಿ ಹೇಳಿ ಬಳ್ಳಾರಿ ಲಾಡ್ಜಿಂಗ್‌ನಲ್ಲಿ ಸಕಲ ಸೌಲಭ್ಯಗಳೊಂದಿಗೆ ಉಳಿಸಿ ರಕ್ಷಿಸಲು ಯತ್ನಿಸಿದ ಕುರುಗೋಡು ಪೋಲೀಸ್ ಠಾಣೆಯ ಸಿಬ್ಬಂದಿಯ ದುಷ್ಕೃತ್ಯವನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ಅವರ ಮೇಲೆ ಕಠಿಣ ಕ್ರಮಕ್ಕೆ ಒತ್ತಾಯಿಸಿ ಅಮಾನತ್ತಿನಲ್ಲಿ ಇಡಲು ಹಾಗೂ ಬಡ ರೈತ ಕೂಲಿಕಾರ ಮಹಿಳೆಯರಿಗೆ ಪಾನಮತ್ತನಾದ ಎಸ್.ಕೆ. ಶರಣಯ್ಯನಂತ ಪುಂಡ ಪೋಕರಿಗಳಿಂದ ರಕ್ಷಣೆ ಒದಗಿಸುವಂತೆ ಒತ್ತಾಯಿಸಲಾಯಿತು. ಇದರ ನೇತೃತ್ವವನ್ನು ಕಾಂ.ವಿ.ಎಸ್. ಶಿವಶಂಕರ್ ಜಿಲ್ಲಾ ಸಮಿತಿ ಉಪಾಧ್ಯಕ್ಷರು ಹಾಗೂ ಕಾಂ.ಕೆ. ಗಾದಿಲಿಂಗಪ್ಪ, ಕಾಂ.ಎನ್. ದಿವಾಕರಪ್ಪ, ಜಿಲ್ಲಾ ಮುಖಂಡರು, ಕಾಂ.ಎಂ. ಆರ್. ತಿಮ್ಮಪ್ಪ ಹಮಾಲಿ ಸಂಘದ ಅಧ್ಯಕ್ಷರು, ಕಾಂ.ಕೆ.ರಾಮಣ್ಣ, ಕೃಷಿ ಕೂಲಿಕಾರರ ಸಂಘದ ಮುಖಂಡರು, ಟಿ.ರಾಮಣ್ಣ ಡಿವೈಎಫ್ಐ ಅಲ್ಲದೆ ವಾಲ್ಮೀಕಿ ಸಂಘದ ಕುರುಗೋಡು ಸಂಚಾಲಕ ಭೀಮಣ್ಣ, ಖಜಾಂಚಿ ಎನ್.ಲಕ್ಷ್ಮಣ ಹಾಗೂ ಡಾ. ಅಂಬೇಡ್ಕರ್ ಸಂಘದ ಮುಖಂಡರುಗಳಾದ ಎಂ.ರುದ್ರಪ್ಪ, ಟಿ.ಸಿದ್ದಪ್ಪ ಇವರು ವಹಿಸಿದ್ದರು. ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನೆರೆದಿದ್ದ ಬೃಹತ್ ರೈತ ಕೂಲಿಕಾರರನ್ನುದ್ದೇಶಿಸಿ ಮಾತನಾಡಿದ ಯು.ಬಸವರಾಜ್ ಇವರು ಬಡ ರೈತ ಮಹಿಳೆಯ ಮೇಲೆ ನಡೆದ ಅತ್ಯಾಚಾರವನ್ನು ಬಲವಾಗಿ ಖಂಡಿಸಿದರು. ಇಂತಹ ಯಾವುದೇ ದಾಳಿ ದಬ್ಬಾಳಿಕೆಗಳನ್ನು ಎಲ್ಲಾ ರೈತ ಕೂಲಿಕಾರರು ಒಂದಾಗಿ ಎದುರಿಸಿ ಸೆಣಸಲು ಕರೆ ನೀಡಿದರಲ್ಲದೆ ಈ ಘಟನೆಯನ್ನು ಜನಾಂಗೀಯ ಘಟನೆಯನ್ನಾಗಿ ಪರಿವರ್ತಿಸಿ ಎರಡು ಜನಾಂಗಗಳ ಮಧ್ಯೆ ಘರ್ಷಣೆಯನ್ನುಂಟು ಮಾಡಿ ರೈತ ಕೂಲಿಕಾರರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುವ ಕುಟಿಲ ನೀತಿಯನ್ನು ವಿರೋಧಿಸುವಂತೆ ಕರೆ ನೀಡಿದರು.

ಬಹಿಷ್ಕಾರಕ್ಕೆ ಖಂಡನೆ

ಶಿವಮೊಗ್ಗ : ಶಿವಮೊಗ್ಗ ತಾಲೂಕಿನ ಎರಗನಾಳು ಗ್ರಾಮದಲ್ಲಿ ಕೆಲವು ವ್ಯಕ್ತಿಗಳು ಸೇರಿಕೊಂಡು ಸ್ಥಳೀಯ ನಿವಾಸಿಯಾದ ಮಂಡಲ ಪಂಚಾಯತ್ ಮಾಜಿ ಸದಸ್ಯ ರಾಮಕೃಷ್ಣರಾಜು ಅವರ ಮೇಲೆ ಬಹಿಷ್ಕಾರ ಹಾಕಿರುವ ಹೇಯ ಕೃತ್ಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಶಿವಮೊಗ್ಗ ಜಿಲ್ಲಾ ಘಟಕವು ತೀವ್ರವಾಗಿ ಖಂಡಿಸಿದೆ.

ಏಪ್ರಿಲ್ 9ರಂದು ರಾತ್ರಿ 10 ಗಂಟೆಯ ಸಮಯದಲ್ಲಿ ಸೇರಿದ್ದ ಕೆಲವರು ಏರ್ಪಡಿಸಿದ್ದ ಸಭೆಗೆ ರಾಮಕೃಷ್ಣರಾಜು ಅವರನ್ನು ಕರೆಸಿದಾಗ ಅವರು ಸಂಭಂಧಪಟ್ಟ ಸಭೆಗೆ ಬರಲು ನಿರಾಕರಿಸಿದ್ದಕ್ಕಾಗಿ ಗ್ರಾಮದಲ್ಲಿ ಅವರ ಮೇಲೆ ಬಹಿಷ್ಕಾರ ಹಾಕಿರುವುದಾಗಿ ಸಭೆಯಲ್ಲಿನ ವ್ಯಕ್ತಿಗಳು ತಿಳಿಸಿದ್ದಾರೆ.

ವಿವಾದಗಳನ್ನು ಬಗೆಹರಿಸಲು ಸಂಬಂಧಪಟ್ಟ ನ್ಯಾಯಾಲಯ, ಅರಕ್ಷಕರು, ಮಂಡಲ ಅಧಿಕಾರಿಗಳು ಇರುವಾಗ ಅವುಗಳನ್ನು ಗಾಳಿಗೆ ತೂರಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ರಾಮಕೃಷ್ಣರಾಜು ಅವರ ಮೇಲೆ ಬಹಿಷ್ಕಾರ ಹಾಕಲು ತೀರ್ಮಾನಿಸಿದ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಘಟಕವು ಒತ್ತಾಯಿಸುತ್ತದೆ.

ಐದು ಸಾವಿರ ಸಹಿ ಸಂಗ್ರಹ

ಪಕ್ಷವು ದೇಶದ ಏಕತೆ, ಸಮಗ್ರತೆಗಾಗಿ ಕೋಮು ಸಾಮರಸ್ಯಕ್ಕಾಗಿ ಕೋಮುವಾದದ ವಿರುದ್ಧ ಸಹಿ ಸಂಗ್ರಹಣೆಗಾಗಿ ರಾಷ್ಟ್ರೀಯ ಆಂದೋಲನ ಸಮಿತಿ ಕರೆಯನ್ವಯ ಐದು ಸಾವಿರ ಸಹಿ ಸಂಗ್ರಹ, ವಿವಿಧ ಸಂಘಟನೆಗಳಿಂದ ಸಂಗ್ರಹಿಸಿದ್ದು ಅದನ್ನು ರಾಜ್ಯ ಸಮಿತಿಗೆ ಕಳುಹಿಸಿಕೊಡಲಾಯಿತು.

ಎರಗನಾಳ ಗ್ರಾಮದಲ್ಲಿ ಎಸ್.ಕೃಷ್ಣರಾಜ್ ಅರಸ್(ಜನತಾದಳದ ಮಾಜಿ ಮಂಡಲ ಸದಸ್ಯ) ಇವರಿಗೆ ಬಹಿಷ್ಕಾರ ಹಾಕಿರುವ ಪುಂಡಾಟಿಕೆಯನ್ನು ಪಕ್ಷವು ತೀವ್ರವಾಗಿ ಖಂಡಿಸಿ, ಕ್ರಮ ಕೈಗೊಳ್ಳಲು ಸರಕಾರವನ್ನು ಪಕ್ಷವು ಒತ್ತಾಯಿಸುತ್ತದೆ.

ಪಕ್ಷದಿಂದ ಉಚ್ಚಾಟನೆ

ಮೈಸೂರು : ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿಯ ಎಸ್.ಶಾಂತಪ್ಪ ಮತ್ತು ಶಿವಣ್ಣ ಇವರುಗಳನ್ನು ಅಶಿಸ್ತು ಮತ್ತು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಪಕ್ಷದ ಸದಸ್ಯತ್ವದಿಂದ ಉಚ್ಚಾಟಿಸಲು ತೀರ್ಮಾನಿಸಲಾಗಿದೆ.

ಪಕ್ಷದ ಕಾರ್ಯದರ್ಶಿಯ ವಿರುದ್ಧ ಎಸ್.ಶಾಂತಪ್ಪ ಇವರು ಪತ್ರಿಕೆಗಳಲ್ಲಿ ಮಾಡಿರುವ ಆರೋಪಗಳು ಶುದ್ಧ ಸುಳ್ಳು ಮತ್ತು ಅರ್ಥರಹಿತ ಎಂದು ಸಿಪಿಐ(ಎಂ) ಮೈಸೂರು ಜಿಲ್ಲಾ ಕಾರ್ಯದರ್ಶಿ ಎಂ.ಎಸ್.ಉಗ್ರಪ್ಪ ತಿಳಿಸಿದ್ದಾರೆ.

ಹೊಸ ಉತ್ಸಾಹ ತುಂಬಿದೆ

ಪುಟ 1ರಿಂದ

ಅನುಭವಗಳ ವಿಮರ್ಶೆ

ವಿಚಾರ ಸಂಕಿರಣದ ಮೊದಲ ದಿನ ಸಿಪಿಐ(ಎಂ) ತನ್ನ ಪ್ರಬಂಧವನ್ನು ಮುಂದುವರಿಸುವುದರೊಂದಿಗೆ ವಿಚಾರ ಸಂಕಿರಣದ ಕಲಾಪಗಳು ಆರಂಭವಾದವು. ನಂತರ ಸಮಾಜವಾದಿ ದೇಶಗಳ ಆಳುವ ಕಮ್ಯುನಿಸ್ಟ್ ಪಕ್ಷಗಳು (ಕ್ಯೂಬಾ ಕೊರಿಯಾ ವಿಯೆಟ್ನಾಂ)ಹಾಗೂ ಆಮೇಲೆ ಇತರ ಪ್ರತಿನಿಧಿಗಳು ತಮ್ಮ-ತಮ್ಮ ಪಕ್ಷಗಳ ಪ್ರಬಂಧಗಳನ್ನು ಮಂಡಿಸಿದರು. ಜಗತ್ತಿನ ಇಂದಿನ ಕಷ್ಟಕರ ಪರಿಸ್ಥಿತಿಗೆ ವಿಷಮ ವಾತಾವರಣದಲ್ಲಿ ಸಮಾಜವಾದಕ್ಕಾಗಿ ಹೋರಾಟ ಮುಂದುವರೆಸುವ ತಂತಮ್ಮ ಅನುಭವಗಳನ್ನು ಈ ಪ್ರಬಂಧಗಳು ಮುಂದಿಟ್ಟವು. ವಾಸ್ತವತೆಯನ್ನು ವಸ್ತುನಿಷ್ಟವಾಗಿ ಯಾವುದೇ ಹಿಂಜರಿಕೆಯಿಲ್ಲದೆ ಗಮನಿಸಿ ಜಗತನ್ನು ಬದಲಿಸುವುದು ಈಗ ನಮ್ಮ ಮುಂದಿರುವ ಕೆಲಸ. ಸುಳ್ಳು ಹರ್ಷಾತಿರೇಕಕ್ಕಾಗಲಿ, ಪೆಟಿ-ಬ್ಯೂರ್ಜ್ವಾ ನಿರಾಸೆಗಾಗಲೀ ಬಲಿ ಬೀಳದೆ ನಾವಿದನ್ನು ಮಾಡಬೇಕಾಗಿದೆ ಎಂದು ಸಿಪಿಐ(ಎಂ) ಪ್ರಬಂಧ ಹೇಳಿತ್ತು. ಸಮಕಾಲೀನ ವಿಶ್ವ ಸನ್ನಿವೇಶದಲ್ಲಿ ಮಾರ್ಕ್ಸ್‌ವಾದ ಪ್ರಸ್ತುತತೆಯ ಬಗ್ಗೆಯಾಗಲೀ, ಬಂಡವಾಳಶಾಹೀ ಜಗತ್ತಿನಲ್ಲಿ ಒಂದು ಬಿಕ್ಕಟ್ಟಿನ ಮೂಲಕ ಹಾದು ಹೋಗುತ್ತಾದೆ ಎಂಬ ಬಗ್ಗೆಯಾಗಲೀ ಭಿನ್ನಾಭಿಪ್ರಾಯವಿರಲಿಲ್ಲ ಎಂದು ಚರ್ಚೆಗಳ ಬಗ್ಗೆ ಪತ್ರಕರ್ತರಿಗೆ ತಿಳಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಹೇಳಿದರು.

ಈ ವಿಚಾರ ಸಂಕಿರಣ ಹೇಗೆ ಭಾರತದಲ್ಲಿ ಸಿಪಿಐ(ಎಂ) ಮುನ್ನಡೆಗೆ ಸಹಾಯಕವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ನಾವು ಇತರರ ಅನುಭವಗಳಿಂದ ಪಾಠ ಕಲಿಯುತ್ತೇವೆ. ಮುಂದಿನ ದಿನಗಳಲ್ಲಿ ಹೆಚ್ಚಲಿರುವ ಸಾಮ್ರಾಜ್ಯ ಶಾಹಿ-ವಿರೋಧಿ ಚಟುವಟಿಕೆಗಳನ್ನು ಸಂಯೋಜಿಸುವಲ್ಲಿಯೂ ಅದು ನೆರವಾಗುತ್ತದೆ" ಎಂದರು.

ಚೀಣಾದ ಸುಧಾರಣೆಗಳ ಬಗ್ಗೆ ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತಾ ಅವರು "ಚೀಣಾ ಇದುವರೆಗೆ ಸುಧಾರಣೆಗಳು ಸಮಾಜವಾದವನ್ನು ಬಲಪಡಿಸುತ್ತವೆ ಎಂದಿದೆ, ಸಮಾಜವಾದವನ್ನು ಬಲಪಡಿಸುವವರೆಗೆ ನಾವು ಅದನ್ನು ಬೆಂಬಲಿಸುತ್ತೇವೆ.'' ಎಂದರು.

ಸಮಾಜವಾದಕ್ಕೆ ಭೋಗ ಸಾಮಗ್ರಿಗಳನ್ನು ಮುಂದುವರಿದ ದೇಶಗಳು ಬಯಸುವ ಒಂದು ಜೀವನ ಶೈಲಿಯನ್ನು ಕೊಡಲು ಸಾಧ್ಯವಾಗದ್ದರಿಂದ ಅದರ ಸೋಲು ಶತಸಿದ್ಧವಾಗಿತಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ನಮ್ಮ ಪಕ್ಷದ ಪ್ರಬಂಧ ಸಮಾಜವಾದದಡಿ ರಾಜಕೀಯ ಅರ್ಥಶಾಸ್ತ್ರದ ಬೆಳವಣಿಗೆ ಬಗ್ಗೆ ಇನ್ನಷ್ಟು ಅಧ್ಯಯನ ಅಗತ್ಯ ಎಂದಿದೆ. ಆದರೆ ಸಮಾಜವಾದಕ್ಕೆ ಬಳಕೆ ವಸ್ತುಗಳನ್ನು ಪೂರೈಸುವ ಸಾಮರ್ಥ್ಯವಿಲ್ಲ ಎಂಬುದನ್ನು ನಾವು ಒಪ್ಪುವುದಿಲ್ಲ. ಆದರೆ ಈ ಬಗ್ಗೆ ಇನ್ನಷ್ಟು ಅಧ್ಯಯನ ಅಗತ್ಯ" ಎಂದರು.

ಸಮಾಜವಾದ ಸೋತಿತು, ಬಂಡವಾಳಶಾಹಿ ಗೆದ್ದಿತು ಎಂಬ ಹಲವಾರು ಪ್ರಶ್ನೆಗಳನ್ನು ಉತ್ತರಿಸಿದ ಯೆಚೂರಿ ಅವರು ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲೂ ಮಾನವಕುಲದ ಯಾವುದೇ ಸಮಸ್ಯೆಯನ್ನು ಹಸಿವು, ಬಡತನ, ರೋಗ, ನಿರುದ್ಯೋಗ, ವಸತಿಹೀನತೆಯನ್ನು ನಿವಾರಿಸುವಲ್ಲಿ ವಿಫಲಗೊಂಡಿದೆ ಎಂಬ ಅಂಶದತ್ತ ಗಮನ ಸೆಳೆಯುತ್ತಾ ಮೂರನೇ ಜಗತ್ತಿನ ಬಹುಪಾಲು ಭಾಗಗಳಲ್ಲಿನ ಬಡತನ ಬಂಡವಾಳಶಾಹೀ ಧೋರಣೆಗಳ ನೇರ ಫಲ ಎಂದರು. ಕ್ಯೂಬಾ ಮತ್ತು ಇತರ ಲ್ಯಾಟಿನ್ ಅಮೇರಿಕಾ ದೇಶಗಳ ಪರಿಸ್ಥಿತಿಗಳನ್ನು ಹೋಲಿಸಿದಾಗ ಸಮಾಜವಾದದ ಶಕ್ತಿ ಮತ್ತು ಸಾಮರ್ಥ್ಯಗಳೇನು ಎಂದು ಅರಿವಾಗುತ್ತದೆ ಎಂದು ಘೋಷಿಸಿದರು.

"ವಿಶ್ವದಲ್ಲಿ ಇಂದು ಮಾರ್ಕ್ಸ್‌ವಾದ"

ಕಲ್ಕತ್ತೆಯಲ್ಲಿ ಮೇ 5-7,1993 ರಂದು ನಡೆದ ಅಂತರ್ರಾಷ್ಟ್ರೀಯ ವಿಚಾರಸಂಕಿರಣ ಕುರಿತು ಉಪನ್ಯಾಸ

ಕಾಂ. ಪಿ. ರಾಮಚಂದ್ರನ್
ಸಿಪಿಐ(ಎಂ), ಪೊಲಿಟ್‌ಬ್ಯೂರೋ ಸದಸ್ಯರು

ಕಾಂ. ಪಿ. ರಾಮಚಂದ್ರರಾವ್
ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು
ಹಾಗೂ
ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ

ಇವರು ಅಧ್ಯಕ್ಷತೆ ವಹಿಸುತ್ತಾರೆ

ಸ್ಥಳ: ಎನ್.ಜಿ. ಓ. ಸಭಾಂಗಣ, ಕಬ್ಬನ್ ಪಾರ್ಕ್

ದಿನಾಂಕ: ಮೇ 26, 1993
ಸಂಜೆ 5.00 ಗಂಟೆಗೆ

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಕ ಮತ್ತು ಪ್ರಕಾ. ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್